ಗುರುವಾರ, ಜೂನ್ 6, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಓದುಗರ ಗಮನಕ್ಕೆ

ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ..

641	641	640	640	639	638	638	638	638	638	637
Siddarth S	Sohan Preetham	Yashraj	Pooja Shree V R	Karthik B Kurani	Arun P	N A Akash	B R Kushi	Ganavi T	Sindhushree L	Maruthi M

637	636	636	636	636	635	635	635	635	635	634
Shashank J K	N Bhavya	Kirankumar M	N Rajath Kumar	Jeevitha Y	Kiran R Patil	Preetham Gowda	Vijay Kumar V B	Arpitha N	Keerthana Murali	Bharath Kumar

634	634	633	633	633	632	632	631	631	630	630
Jeevan T	Yogitha Gowda	Rashid	Kirankumar	Sachin Babasab	Padmashree S	Lavanya S	Abhishek	Tharun	Manoj Kumar	Sourabh A Ulavi

630	628	626	626	626	625	625	625	625	625	625
Namana MR	Dhanush H V	Deekshith Gowda	Shreyas V B	Ganavi G C	Charan Reddy AL	Samarth Akki	Bharath S	Vinay Kumar	Harshitha N P	Parinitha M R

624	624	623	623	622	622	622	621	620	620	620
Gurukiran Y S	Md Arshaan	Ramitha S	Varsha S B	Chagan Gowda	Gururaj U Desai	Dhanush S M	Mohammed Ishak	Chinmay P H	Hariprasad KS	Suhas H R

620	619	619	619	618	618	617	617	617	616	616
Sahana B L	Chandan S B	C Bhuvan	Yashwanth H H	Sumanth BS	Ananya V	Shreeaunsh	Surabhi R Kulkarni	Nayana K	M Sai Rithin	Nithin H G

616	616	615	615	615	615	615	614	614	614	613
Ranjith V	Sai Pruthvi J Patil	Vivek B	Haripreeth Gowda	Karthik MK	Dhanushree M S	Rohini H J	Navadeep V	Neha Bistagond	Dimpal M	Hemantharaju T

613	613	613	612	611	611	611	611	611	611	610
Pradeep Horapeti	Chinmai M S	Anusha S	Girish	Mohammed Saqeeb H	Yashwanth G S	Varsha S M	Manasa	Namratha S	Thanush Gowda	Preetham Gowda

610	610	610	610	610	610	610	609	609	609	609
Srajan J Salian	Thizan HM	Omsrushti H T	Teja Reddy B	Gurashanthamma	Vidya Helavi	Netravati	Lalith Kumar C L	Adithya S	Chaithra Dikshita	Vishwanath Avaradi

608	608	607	607	606	606	606	606	605	605	604
Dheeraj S R	C A Prakruthi	Siddhartha B	Poorvika D	Balaji N S	Prasanna K	B R Keerthan	Bhagyashree A	Nihar D Shadli	Adarsh C L	Manish S Raj

604	604	603	603	602	602	602	602	602	602	601
Prajwal M	Keerthana H S	Hithesh M S	Chandana G	Aditya Sullad	Harish S	Sudhanva K C	Srushti J	Disha K Jayanth	R M Nesar Kumar	Hitesh G

601	600	600	600	599	599	599	599	599	598	598
Pratham Kinagi	Sai Shreyas	Siddu Uppar	Jahnavi Dodmani	Vinay	Navyashree Y M	Yuktha N Keelara	Sinchana K	Ajay Kumar	Deemanth H	B R Chetan Sharma

598	598	597	596	596	596	596	596	595	595	594
Srinivasa D H	K Sahana	Syed Usman	Dhananjay A S	Harshith C	Manojwal C S	Vinay P V	Varun Bellad	Shashank B N	Arun B	Rahul N

594	593	593	593	592	592	591	591	591	591	591
Vinuth V S	Mahanidhi M	Spandana D	Nandana Rajesh	Rohith KM	Mahadev G	Pampapati	G P Shreyas Kumar	Akshay Nag	Dhruthi M	Deekshnavi C S

DUE TO SPACE CONSTRAINTS WE ARE DISPLAYING LIMITED RESULTS. VISIT OUR WEBSITE FOR THE FULL LIST www.parishramaneetacademy.com 080 24413400, 74838 30545

ADMISSIONS OPEN FOR 2024-25 PUC & NEET LONG TERM (Residential & Day Scholar) 080 24413400, 74838 30545 www.parishramagroup.com

AFEEFA S 555	VARSHA SABNIS 555	NAVAMI R V 554	KOUSHIK B K 554	HARISH KUMAR 554	ABHISHEK B 554	POOLA ASHA K 554	POORVI M 554	KHUSHI M 554	CHANDAN G 553	OMKAR M H 553	LIKITH GOWDA 553	NITHIN B K 553
SHARANYA M K 553	SHREYA C B 553	TANUSHREE M 553	KEERTHANA D M 553	MALATESH V N 552	JEEVAN R 552	HARSHAVARADHAN 552	H M DEEKSHA 552	SWARNA GOWRI 552	SRUJAN GOWDA 551	VIDYSHREE B V 551	SV BANDHAVYA 550	KAVANA M N 550
SAKSHI D 549	SAHANA E 549	HALESH B 548	DARSHAN C K 548	VARUN A K 548	DHAKSHATH M 548	S V BHAVANA 548	NISARGA A R 548	HARITA C M 548	DHANUSH C S 547	SHARATH K 547	KISHORE G N 546	VITTHAL K T 546
THEJAS K H 546	KS ADITHYA K 546	SUMALA K M 546	PRIYA S K 546	MANOGNA K 545	SUMAN C K 544	GANAVI S 544	DUSHYANTH K 543	SANJU G M 543	GHANASHREE R 543	HARSHITHA T L 543	PUNYASHREE N 543	DARSHAN N 542
BHARATH R 542	VIPUL CHANDRA 542	PRAVEEN K 542	MARIYAM Z 542	MANASA C 542	RISHITHA G K 542	DEEPTHI URS M 541	MD JUNAID 541	GAGAN K S 541	HIMAMSHU H N 541	SRINIVAS K N 541	CHIRANTHAN M 541	SWAPNA 541
NIDATANEEM M 541	KEERTHI G S 541	NITHYA M S 541	JASMEEN 541	VISHMAYA D M 540	NAYANA K G V 540	MISBA IRAM 540	TEJASHREE NL 540	MALLAPPA V M 539	HARSHITHA C 539	SONIKA L 539	RADHA G 539	KAVANA H R 539
ABHISHEK B J 538	AMBIKA M B 538	RAMEGOWDA T 537	SUBASH REDDY 537	MONISHA GR 537	CHIRANTH C G 536	YOGA SAGAR 536	NANDITHA R 536	VIKAS V H 536	INDIRA PRIYA D 535	SHREYA S I 535	SINCHANA 535	RAHUL M D 534
ANANYA M 534	NISCHITHA M 534	NAVEEN S D 533	ABDUL GAFFAR 533	IBADUR R 533	ANKUSH C B 533	MANOJ M NAIK 533	SATHWIK HS 533	PRAGATHI H S 533	ABHISHEK N C 533	SACHIN 532	KHUSHI C S 532	SPOORTI 532
SNEHA 532	SHRAVANI S C 531	R S TEJASWI 531	CHIRANTHANA Y 530	SAMARTH R J 530	PRATAP KT 530	MOHAN PATTAR 530	MANAVIKA S 530	VANDANA H S 530	GANESH R 529	K ABHISHEK 529	HARSHITHA B 529	PRAJWAL H 529
BHUMIKA G S 528	CHAITHRA SB 528	VISHAKA R 528	CHITHARA H O 528	GAYATHRI M 528	SAMARTH G K 527	S RAKSHITHA 527	MOHAMMAD A G 526	CHIRAG R 526	RAKESH K 526	RAKSHITHA T 526	DRUVA KEERTHI C 525	TANISHA M V 525
VAISHNAVI B M 525	NIKHITHA G 525	DEEKSHA P 525	JEEVAN D G 524	VIGNESH K M 524	AKASH T R 524	RAGHAVENDRA P 524	REKHA R L 524	T R CHANDANA 524	KUSHI F 524	VISHRUTHA G 524	SAHANA V G 523	SUJAY K 522
HEMANTH R 522	SRUSHTI S K 522	AISHWARY S K 522	MAMATHA RB 522	BINDIYA D 522	RAHUL BR 521	RUPASHRI S K 521	VISHAL R H 520	AKASH G N 520	PRANATHI G 520	SHARANYA K M 520	BINDU H H 520	GOUTHAM 519
VEERABASAVA 518	SADIYA K 518	PUNYA P K 517	MOHAMMED A S 517	AANCHAL R G 517	SHREYA B 517	G SANSKRUTHI 517	SHREYAS K H 516	DHANUSH M 516	REETHU H V 516	SAHANA V N 516	DHYANA T G 516	NAYAK NEETA K 516
UMESHGOUDA 515	ABHISHEK C M 515	PRIYANSHU RAY 515	KAREEMA B 515	LOCHAN H K 514	AMRUTHA B 514	ANUSHA N 513	DIVYA MARIKA H 513	SAI PRANATHI P 513	LOKESH S 513	NIKHIL MOHAN M 513	BHARATH B H 512	HAVISH GOWDA M 512
SOUJANYA C G 512	DUSHYANTH P 511	ABHISHEK A 511	SANTOSH D M 511	DINNIPATI KARTHIK 510	HARSHITH S 510	PRATHAMESH S 510	SAMPATH K 510	SHASHANK M 510	PRAJWAL K M 510	AVANI KESHAV 510	PRAMOD P 509	NAMRATHA K 509
SNEHA B R 509	PRITHVIRAJ K 509	PRAKRUTHI B S 508	DODDA BASAVA 508	TRIGUN Y M G 508	NAVYASHREE H 508	SAHEBAGOUD P 507	KISHAN 507	SUPREET K C 507	SHRAVANI M N 507	KAVYA S 507	ANUP G K 507	HARSHITH M 506
GOWTHAM M 506	GREESHMA S 506	CHAITANYA K N 505	DEEPAK V 505	M B SHASHANK R 505	HARSHITHA D 505	DHANUSH KR 505	S N KISHORE B 504	VAISHNAVI M 504	AMRUTHA HR 504	SINCHANA H M 504	SUSHMITHA H 504	ABHILASH S 503

VISIT OUR WEBSITE TO AUTHENTICATE OUR RESULTS www.parishramaneetacademy.com 080 24413400, 74838 30545

ಮತದಾರರ ಪ್ರಭಾವಿಸಿದ 'ಮಾತು'

ಪ್ರಜಾವಾಣಿ ವಾರ್ತೆ

ಈ ಬಾರಿ ಲೋಕಸಭಾ ಚುನಾವಣೆಗೆ ಏಳು ಹಂತಗಳಲ್ಲಿ ಮತದಾನ ನಡೆದಿತ್ತು. ಮೊದಲ ಹಂತದ ಮತದಾನದ ನಂತರ, ರಾಜಕೀಯ ಪಕ್ಷಗಳ ಪ್ರಚಾರ ತಂತ್ರ ಬದಲಾಗಿತ್ತು. ಆ ಪ್ರಚಾರ ತಂತ್ರವು ಮತದಾನವನ್ನು ಪ್ರಭಾವಿಸಿದೆ ಎಂಬುದು ಫಲಿತಾಂಶದಿಂದ ನಿಚ್ಚಳವಾಗಿದೆ. ಮತದಾನದಲ್ಲಿ ಆದ ಈ ಬದಲಾವಣೆಯನ್ನು ವಿಶ್ಲೇಷಿಸಲು ಇಲ್ಲಿ ಯತ್ನಿಸಲಾಗಿದೆ.

ಮೊದಲ ಹಂತದಲ್ಲಿ ಒಟ್ಟು 102 ಸ್ಥಾನಗಳಿಗೆ ಮತದಾನ ನಡೆದಿತ್ತು. ಆ ಹಂತದಲ್ಲಿ 'ಇಂಡಿಯಾ' ಮೈತ್ರಿಕೂಟದ ಪಕ್ಷಗಳಿಗೆ ಹೆಚ್ಚಿನ ಸ್ಥಾನ ದೊರೆಯಲಿದೆ ಎಂಬುದನ್ನು ರಾಜಕೀಯ ಪಕ್ಷಗಳ ಆಂತರಿಕ ಸಮೀಕ್ಷೆಗಳು ಹೇಳಿದ್ದವು. ಬಿಜೆಪಿ ಮತ್ತು ಎನ್‌ಡಿಎ ಮೈತ್ರಿಕೂಟದ ಪಕ್ಷಗಳಿಗೆ ಮೊದಲ ಹಂತದಲ್ಲಿ ಭಾರಿ ಹಿನ್ನಡೆಯಾಗಿದೆ ಎಂದು ಸಮೀಕ್ಷೆಗಳು ಹೇಳಿದ್ದವು ಎಂದು ಪಕ್ಷದ ಮೂಲಗಳು ತಿಳಿಸಿದ್ದವು. ಫಲಿತಾಂಶವೂ ಅದೇ ರೀತಿ ಬಂದಿದೆ. ಮೊದಲ ಹಂತದಲ್ಲಿ 'ಇಂಡಿಯಾ' ಮೈತ್ರಿಕೂಟಕ್ಕೇ ಹೆಚ್ಚಿನ ಸ್ಥಾನಗಳು ಬಂದಿವೆ. ಹೀಗಾಗಿಯೇ ಬಿಜೆಪಿ ಪ್ರಚಾರ ತಂತ್ರವನ್ನು ಬದಲಿಸಿತು ಎಂದು ವಿಶ್ಲೇಷಿಸಲಾಗಿತ್ತು.

ಮೊದಲ ಹಂತದವರೆಗೆ ಬಿಜೆಪಿ ಆತ್ಮವಿಶ್ವಾಸದಲ್ಲಿ ಇತ್ತು. ಆದರೆ ಎರಡನೇ ಹಂತಕ್ಕೆ ನಡೆಸಿದ ಪ್ರಚಾರದಲ್ಲಿ ಬಿಜೆಪಿ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರು ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಮುಸ್ಲಿಮರಿಗೆ ಆದ್ಯತೆ ನೀಡುತ್ತದೆ, ಹಿಂದೂಗಳ ಸಂಪತ್ತನ್ನು ಮುಸ್ಲಿಮರಿಗೆ ನೀಡುತ್ತದೆ, ಮಂಗಳಸೂತ್ರ ಕಸಿದುಕೊಳ್ಳುತ್ತದೆ, ಎಮ್ಮೆಗಳನ್ನು ಕಸಿದುಕೊಳ್ಳುತ್ತದೆ ಎಂದು ಭಾಷಣ ಮಾಡಿದರು. ಮತದಾನವನ್ನು ಈ ಮಾತುಗಳು ಪ್ರಭಾವಿಸಿದಂತೆ ಕಾಣುತ್ತದೆ. ಎರಡನೇ ಹಂತದಲ್ಲಿ ಎನ್‌ಡಿಎಗೇ ಹೆಚ್ಚಿನ ಸ್ಥಾನಗಳು ದೊರೆತಿವೆ.

ಮೂರನೇ ಹಂತದ ವೇಳೆಗೆ ಮೋದಿ ಅವರು ಆಡಿದ ಇಂತಹ ಮಾತುಗಳು ಮತ್ತಷ್ಟು ಹೆಚ್ಚಾದವು. ಆ ಹಂತದಲ್ಲೂ ಬಿಜೆಪಿಗೆ ಹೆಚ್ಚಿನ ಸ್ಥಾನಗಳು ದೊರೆತಿವೆ. ನಾಲ್ಕನೇ ಹಂತದಲ್ಲೂ ಇದೇ ಪುನರಾವರ್ತನೆಯಾಗಿದೆ. ಮೋದಿ ಅವರು ಮಂಗಳಸೂತ್ರ ಮತ್ತು ಎಮ್ಮೆಗಳನ್ನು ಕಸಿದುಕೊಳ್ಳುವ ಮಾತುಗಳನ್ನಾಡಿದ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಜಯಗಳಿಸಿದೆ. ಆದರೆ ಆ ಹಂತಗಳಲ್ಲಿ ಮತದಾನ ನಡೆದ ಕ್ಷೇತ್ರಗಳಲ್ಲಿ ಹೆಚ್ಚಿನ ಕ್ಷೇತ್ರಗಳು ಬಿಜೆಪಿ ಮತ್ತು ಎನ್‌ಡಿಎ ತೆಕ್ಕೆಗೆ ಹೋಗಿವೆ.

ಐದು, ಆರು ಮತ್ತು ಏಳನೇ ಹಂತಗಳಲ್ಲಿ ಮೋದಿ ಅವರ ಇಂತಹ ಮಾತುಗಳ ಬಗ್ಗೆ ವ್ಯಾಪಕ ಟೀಕೆ ಮತ್ತು ಆಕ್ಷೇಪಗಳು ವ್ಯಕ್ತವಾದವು. ಮೋದಿ ಅವರು ಪರಸ್ಪರ ವ್ಯತಿರಿಕ್ತವಾದಂತಹ ಮಾತುಗಳನ್ನು ಆಡತೊಡಗಿದ್ದರು. ಅದು ಕೂಡ ಮತದಾನವನ್ನು ಪ್ರಭಾವಿಸಿದಂತೆ ಕಾಣುತ್ತದೆ. ಈ ಮೂರು ಹಂತಗಳಲ್ಲಿ 'ಇಂಡಿಯಾ' ಮೈತ್ರಿಕೂಟದ ಪಕ್ಷಗಳಿಗೂ ಗಣನೀಯ ಪ್ರಮಾಣದ ಮತಗಳು ದೊರೆತಿವೆ. ಪರಿಣಾಮವಾಗಿ ಅವುಗಳು ಗೆದ್ದ ಸ್ಥಾನಗಳೂ ಹೆಚ್ಚಾಗಿವೆ. ಕೊನೆಯ ಹಂತದಲ್ಲಿ ಬಿಜೆಪಿಗೆ ಕಡಿಮೆ ಸ್ಥಾನಗಳು ದೊರೆತಿದ್ದರೆ, 'ಇಂಡಿಯಾ' ಮೈತ್ರಿಕೂಟದ ಪಕ್ಷಗಳಿಗೆ ಅದಕ್ಕಿಂತ ಒಂದುಪಟ್ಟು ಹೆಚ್ಚು ಸ್ಥಾನಗಳು ದೊರೆತಿವೆ.

ಏಳು ಹಂತಗಳಲ್ಲಿ ಎನ್‌ಡಿಎ ಮೈತ್ರಿಕೂಟ ಮತ್ತು 'ಇಂಡಿಯಾ' ಮೈತ್ರಿಕೂಟದ ಪಕ್ಷಗಳು ಗೆದ್ದುಕೊಂಡ ಸ್ಥಾನ ಮತ್ತು ಕ್ಷೇತ್ರಗಳ ವಿವರ

ಒಟ್ಟು | ಎನ್‌ಡಿಎ | 'ಇಂಡಿಯಾ' ಮೈತ್ರಿಕೂಟ | ಇತರೆ

ಪ್ರಜಾ ಮತ ಜನತಂತ್ರದ ಹಬ್ಬ — ಲೋಕಸಭಾ ಚುನಾವಣೆ - 2024





ಆಧಾರ: ಚುನಾವಣಾ ಫಲಿತಾಂಶ, ಪಿಟಿಐ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

❌ ಲೋಕಸಭಾ ಚುನಾವಣೆಯ ಫಲಿತಾಂಶವು ಜೂನ್ 4ರಂದು ಪ್ರಕಟಗೊಂಡಿದೆ. ತಮಿಳುನಾಡಿನ ಬಿಜೆಪಿ ಅಧ್ಯಕ್ಷ ಅಣ್ಣಾಮಲೈ ಅವರು ಬೂತ್‌ವೊಂದರಲ್ಲಿ ಕೇವಲ ಒಂದು ಮತವನ್ನು ಪಡೆದುಕೊಂಡಿದ್ದಾರೆ ಎಂದಿರುವ ಪೋಸ್ಟ್‌ಗಳು ಅದೇ ದಿನವೇ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದವು. ಬೂತ್‌ವೊಂದರಲ್ಲಿ ಒಂದು ಮತ ಪಡೆದವ ತಮಿಳುನಾಡಿನ ಮುಖ್ಯಮಂತ್ರಿ ಆಗಲು ಹೊರಟಿದ್ದಾರೆ ಎಂದು ಅವರ ಕುರಿತು ಅಪಹಾಸ್ಯವನ್ನೂ ಮಾಡಲಾಯಿತು. ಆದರೆ, ಇದು ಸುಳ್ಳು ಸುದ್ದಿ.



✅ ತಮಿಳುನಾಡು ಬಿಜೆಪಿ ಪ್ರಧಾನ ಕಾರ್ಯದರ್ಶಿ ಎಸ್. ಜಿ. ಸೂರ್ಯ ಅವರು ಈ ಕುರಿತು ಪೋಸ್ಟ್‌ವೊಂದನ್ನು ಹಂಚಿಕೊಂಡಿದ್ದಾರೆ. ಅಣ್ಣಾಮಲೈ ಅವರು ಬೂತ್‌ವೊಂದರಲ್ಲಿ ಒಂದೇ ಮತವನ್ನು ಪಡೆದುಕೊಂಡಿದ್ದಾರೆ ಎಂದು ಹೇಳಲಾಗುತ್ತಿರುವ ಸುಳ್ಳು ಸುದ್ದಿಯನ್ನು ಹಂಚಿಕೊಳ್ಳಲಾಗುತ್ತಿದೆ. ಇದು ತಿರುಚಿದ ಚಿತ್ರ. ಅವರಿಗೆ 101 ಮತಗಳು ಬಂದಿದ್ದವು. 0 ಮತ್ತು 1 ಸಂಖ್ಯೆಯನ್ನು ಅಳಿಸಿಹಾಕಲಾಗಿದೆ ಎಂದು ಪೋಸ್ಟ್ ಮಾಡಿದ್ದಾರೆ. ಪಡೆದ ಮತಗಳ ಸಂಖ್ಯೆ ಇರುವ ಪಟ್ಟಿಯನ್ನೂ ಹಂಚಿಕೊಂಡಿದ್ದಾರೆ. ಆದ್ದರಿಂದ, ಅಣ್ಣಾಮಲೈ ಅವರು ಬೂತ್‌ವೊಂದರಲ್ಲಿ ಒಂದೇ ಮತವನ್ನು ಪಡೆದುಕೊಂಡಿದ್ದಾರೆ ಎನ್ನುವುದು ಸುಳ್ಳು ಸುದ್ದಿ ಎಂದು ಬೂಮ್‌ಲೈವ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ನಂಬಿಕೆಯಿರಲಿ ನಾಳೆಗಳ ಮೇಲೆ

ನುಡಿ ಬೆಳಗು

ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

ಒಂದಿಷ್ಟು ಗೆಳೆಯರು ಹಡಗಿನಲ್ಲಿ ಪ್ರವಾಸ ಹೊರಟಿದ್ದರು. ಸಮುದ್ರದ ನಡುವೆ ಹಡಗು ಮುಳುಗಲಾರಂಭಿಸಿತು. ಎಲ್ಲರೂ ಮೃತಪಟ್ಟರೂ ಒಬ್ಬ ಮಾತ್ರ ಅಕಸ್ಮಾತ್ತಾಗಿ ಸಿಕ್ಕ ಮರದ ಪೆಟ್ಟಿಗೆಯೊಂದನ್ನು ಹಿಡಿದುಕೊಂಡು ತೇಲಿ ಬಚಾವಾದ. ತೇಲುತ್ತ ತೇಲುತ್ತ ಆ ಪೆಟ್ಟಿಗೆ ಅವನನ್ನು ಒಂದು ಪುಟ್ಟ ದ್ವೀಪಕ್ಕೆ ತಂದು ಹಾಕಿತು.

ಸುತ್ತ ಮುತ್ತ ಕಣ್ಣು ಹರಿದತ್ತ ಸಾಗರ. ಅಲ್ಲಿಯೇ ಇದ್ದ ಒಣಗಿದ ಹುಲ್ಲು, ಮರದ ಕೊಂಬೆ, ಎಲೆಗಳಿಂದ ಪುಟ್ಟ ಗುಡಿಸಲೊಂದನ್ನು ಕಟ್ಟಿಕೊಂಡು ಹಣ್ಣು ಹಂಪಲು ತಿಂದುಕೊಂಡು ಜೀವನ ನಡೆಸುತ್ತಿದ್ದ. ಒಂದಾದರೂ ದೋಣಿ, ಹಡಗು ಈ ಕಡೆಗೆ ಬರದೇ ಹೋದರೆ ತನ್ನ ಗತಿ ಏನು ಎಂದು ಕೊರಗುತ್ತಿದ್ದ. ದಿನವೂ ರಾತ್ರಿ ಸೌದೆ ಒಟ್ಟುಗೂಡಿಸಿ ಬೆಂಕಿ ಹಾಕಿಕೊಂಡು ಚಳಿ ಕಾಯಿಸಿಕೊಳ್ಳುತ್ತಿದ್ದ. ಬೆಂಕಿಯನ್ನು ನೋಡಿ ಯಾವುದಾದರೂ ಹಡಗು ಬರುವುದೆಂಬ ನಿರೀಕ್ಷೆಯಲ್ಲಿದ್ದ. ಆದರೆ ಯಾವ ಹಡಗೂ ಬರಲಿಲ್ಲ.

ಒಂದು ತಡರಾತ್ರಿ ಎಚ್ಚರಾದಾಗ ನೋಡುತ್ತಾನೆ, ಗುಡಿಸಲಿಗೆ ಬೆಂಕಿಯ ಕಿಡಿ ಹಾರಿದೆ! ನೋಡನೋಡುತ್ತಿದ್ದಂತೇ ಗುಡಿಸಲು ಧಗಧಗನೆ ಉರಿಯಲಾರಂಭಿಸಿತು. 'ಅಯ್ಯೋ, ನನ್ನ ಅದೃಷ್ಟವೇ ಖೊಟ್ಟಿ, ನಾನು ದುರದೃಷ್ಟವಂತ. ನನ್ನ ಕುಟುಂಬ ಸ್ನೇಹಿತರು ಊರು ಎಲ್ಲರೂ ದೂರವಾದರು, ನನ್ನ ಈ ಪುಟ್ಟ ಗುಡಿಸಲೂ ಸುಟ್ಟು ಹೋಯಿತಲ್ಲ' ಎಂದೆಲ್ಲ ಗೋಳಾಡಿದ.

ಇನ್ನೇನು ಬೆಳಗಾಗುವುದಿತ್ತು. ಅಷ್ಟು ಹೊತ್ತಿಗೆ ಒಂದು ಹಡಗು ಅಲ್ಲಿಗೆ ಬಂತು. ಹಡಗಿನ ಕ್ಯಾಪ್ಟನ್ ಇಳಿದು ಈ ವ್ಯಕ್ತಿಯ ಹತ್ತಿರ ಬಂದ. 'ಅರೇ ನೀವು ಹೇಗೆ ಇಲ್ಲಿಗೆ ಬಂದಿರಿ' ಎಂದು ಕೇಳಿದ ಈತ. 'ಬಹಳ ದೂರದಿಂದಲೇ ಇಲ್ಲಿಂದ ಬೆಂಕಿ ಕಾಣಿಸಿತು. ಯಾರೋ ಅಪಾಯದಲ್ಲಿದ್ದಾರೆಂದು ನಾವು ಬಂದೆವು' ಎಂದ ಕ್ಯಾಪ್ಟನ್.

ಹರ್ಷದಿಂದ ಕಣ್ಣೀರು ಹಾಕುತ್ತ ಆತ ಎದೆಯ ಮೇಲೆ ಅಂಗೈ ಇಟ್ಟು ತಾನು ಈ ಹಿಂದೆ ಹಡಗು ಮುಳುಗಿದರೂ ಬಚಾವಾಗಿದ್ದಕ್ಕೆ, ಈಗ ಮತ್ತೆ ಅನಿರೀಕ್ಷಿತವಾಗಿ ಸಹಾಯ ಸಿಕ್ಕಿದ್ದಕ್ಕೆ ದೇವರಿಗೆ ಕೃತಜ್ಞತೆ ವ್ಯಕ್ತಪಡಿಸಿದ.

ನಮ್ಮ ಸಮಸ್ಯೆಗಳು ನಾವಂದುಕೊಂಡ ಹಾಗೆಯೇ ಬಗೆಹರಿಯಬೇಕೆಂದಿಲ್ಲ. ಕೆಲವು ಸಲ ಅತ್ಯಂತ ಅನಿರೀಕ್ಷಿತವಾಗಿ ಊಹಿಸಲಾಗದ ರೀತಿಯಲ್ಲಿ ಪವಾಡಗಳು ಸಂಭವಿಸುತ್ತವೆ. ಹಾಗಾಗಿ ಕಷ್ಟದಲ್ಲಿದ್ದಾಗ ವಿಧಿಯನ್ನು ದೂಷಿಸುವುದರಿಂದ ಯಾವುದೇ ಪ್ರಯೋಜನವಿಲ್ಲ. ಗುಲಾಮಗಿರಿಯಿಂದ ತಪ್ಪಿಸಿಕೊಂಡು ಅಮೆರಿಕದ ಪ್ರಸಿದ್ಧ ರಾಜನೀತಿಜ್ಞರಾಗಿ ಖ್ಯಾತರಾದ ಫ್ರೆಡರಿಕ್ ಡಗ್ಲಾಸ್ ತನ್ನ ಆತ್ಮಕಥನದಲ್ಲಿ, ಗುಲಾಮಗಿರಿಯ ಕತ್ತಲೆಯಿಂದ ಹೊರಬರಲು ತನಗೆ ಭರವಸೆ ಮತ್ತು ನಂಬಿಕೆಗಳು ಬೆಳಕಾಗಿ ದಾರಿ ತೋರಿದವು ಎನ್ನುತ್ತಾರೆ. ಪರಿಸ್ಥಿತಿ ಹೇಗೇ ಇರಲಿ, ಸಂಕಷ್ಟದ ಸಂದರ್ಭದಲ್ಲಿ ಆಶಾವಾದವನ್ನು ಕಳೆದುಕೊಳ್ಳದೇ ನಮ್ಮ ಕೆಲಸ ನಾವು ಮಾಡುತ್ತಿರುವುದೇ ನಮ್ಮನ್ನು ಕಾಪಾಡುವ ದೊಡ್ಡ ಶಕ್ತಿ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಜೂನ್ 6, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಕೃಷ್ಣ ಅಮಾವಾಸ್ಯೆ ಗಂ. 18-08 ನಕ್ಷತ್ರ: ರೋಹಿಣಿ ಗಂ. 20-17 ಯೋಗ: ಧೃತಿ ಗಂ. 22-09 ಕರಣ: ಚತುಷ್ಪಾದ್ ಗಂ. 6-59, ವೃಷಭ ಮಾಸದ ನೇ 23 ದಿನ, ಮಳೆನಕ್ಷತ್ರ: ರೋಹಿಣಿ 4.
ರಾಹುಕಾಲ : ಮಧ್ಯಾಹ್ನ 01-30 – 03-00
ಸೂರ್ಯೋದಯ : 06-06 ಸೂರ್ಯಾಸ್ತ : 06-52
ಮುಸ್ಲಿಂ ದಿನಾಂಕ : 28 ಜುಲ್ಖಾಯದ್
ಅದೃಷ್ಟ ಸಂಖ್ಯೆ : 1, 8 , ದಿನ ವಿಶೇಷ : ವಟ ಸಾವಿತ್ರಿ ವ್ರತ (ಅಮಾವಾಸ್ಯೆ ಪಕ್ಷ)

ಮೇಷ: ಹಿಂದಿನಿಂದ ಬಾಕಿ ಇದ್ದ ಆಫೀಸಿನ ಕೆಲಸಗಳನ್ನು ಪೂರ್ತಿಗೊಳಿಸುವ ಪ್ರಯತ್ನ ಮಾಡಿ. ಕಬ್ಬಿಣದ ಮತ್ತು ತಾಮ್ರದ ವ್ಯಾಪಾರಿಗಳಿಗೆ ಹೆಚ್ಚಿನ ಲಾಭ. ಹೊಲದ ಅಥವಾ ಜಮೀನಿನ ಕೆಲಸಕ್ಕೆ ಆಳನ್ನು ಗೊತ್ತು ಮಾಡಿಕೊಳ್ಳುವಿರಿ.

ವೃಷಭ: ಇಂದಿನ ದಿನದ ಪರಿಸ್ಥಿತಿಗಳನ್ನು ಅನುಕೂಲಕ್ಕೆ ತಕ್ಕಂತೆ ರೂಪಿಸಿಕೊಳ್ಳುವ ಪ್ರಯತ್ನದಲ್ಲಿ ಸಫಲರಾಗುವಿರಿ. ಬೋಧನೆಯಲ್ಲಿ ವಿಶೇಷ ಪರಿಣತಿ ಹೊಂದಿರುವ ನಿಮಗೆ ಶಿಷ್ಯರ ಸಂಖ್ಯೆ ವೃದ್ಧಿಯಾಗಲಿದೆ.

ಮಿಥುನ: ಮನೆಯಲ್ಲಿ ನಡೆಯಬೇಕಾದ ಮಂಗಳ ಕಾರ್ಯದ ಕುರಿತು ಹಿರಿಯರೊಂದಿಗೆ ಸಮಾಲೋಚನೆ ನಡೆಸುವಿರಿ. ವರ್ತಮಾನ ಸ್ಥಿತಿಯನ್ನು ಅರಿತು ಇಂದಿನ ವ್ಯವಹಾರವಿರಲಿ. ವೈದ್ಯರ ಸಲಹೆಯಂತೆ ವಿಶ್ರಾಂತಿ ಪಡೆಯಿರಿ.

ಕರ್ಕಾಟಕ: ತಾಂತ್ರಿಕ ವಿದ್ಯೆಯಲ್ಲಿ ಯಶಸ್ಸನ್ನು ಹೊಂದುವ ಎಲ್ಲಾ ಲಕ್ಷಣಗಳೂ ಕಂಡರೂ ವಿದ್ಯಾಭ್ಯಾಸಕ್ಕೆ ತೊಂದರೆಯಾಗುವ ಪರಿಸ್ಥಿತಿ ಎದುರಾಗಬಹುದು. ಉದ್ಯೋಗದಲ್ಲಿ ಸಣ್ಣದಾಗಿ ಬದಲಾವಣೆ ಕಂಡುಬರಲಿದೆ.

ಸಿಂಹ: ಅನವಶ್ಯಕ ಖರ್ಚು ಹೆಚ್ಚಾಗಲಿದೆ. ಹಳೆಯ ಕಾರಿನ ಮಾರಾಟ ವಿಷಯ ಕೈಬಿಡುವುದು ಉತ್ತಮ. ಬೆನ್ನು ನೋವು ಹೋಗಲಾಡಿಸಿಕೊಳ್ಳುವ ಸಲುವಾಗಿ ಯೋಗದಲ್ಲಿ ಆಸಕ್ತಿ ಮೂಡಲಿದೆ.

ಕನ್ಯಾ: ಕೋರ್ಟಿನ ಕೆಲಸಗಳನ್ನು ತ್ವರಿತ ಗತಿಯಲ್ಲಿ ನಡೆಸಿಕೊಡುವಂತೆ ವಕೀಲರಲ್ಲಿ ಕೇಳಿಕೊಳ್ಳುವಿರಿ. ಮಾರುಕಟ್ಟೆಯಲ್ಲಿ ಆಗುತ್ತಿರುವ ಬದಲಾವಣೆ ಗಮನಿಸಿ ಷೇರುಗಳನ್ನು ಕೊಳ್ಳುವ ಯೋಜನೆಗೆ ಮುಂದಾಗಿ.

ತುಲಾ: ಮಕ್ಕಳ ವಿಷಯದಲ್ಲಿ ಅಸಡ್ಡೆ ತೋರಿಸಬಾರದು ಎಂಬುವುದು ಅರಿವಾಗಲಿದೆ. ಕುಟುಂಬದಲ್ಲಿ ಹಿಂದೆ ನಡೆದ ಕೆಟ್ಟ ವಿಚಾರಗಳ ಬಗ್ಗೆ ಮಾತನಾಡುವುದು ಸಹೋದರರಲ್ಲಿ ಭಿನ್ನಾಭಿಪ್ರಾಯ ಬೆಳೆಯಲು ಕಾರಣವಾಗುತ್ತದೆ.

ವೃಶ್ಚಿಕ: ರಾಜಕಾರಣಿಗಳಿಗೆ ಮತ್ತು ಸರ್ಕಾರಿ ನೌಕರರಿಗೆ ಈ ದಿನ ಸುಯೋಗ. ಎಲ್ಲರೊಂದಿಗೆ ಸಹಕಾರ ಮನೋಭಾವನೆಯಿಂದ ಮತ್ತು ಸರಳತೆಯಿಂದ ಮುಂದುವರಿದಲ್ಲಿ ಯಶಸ್ಸು ಕಂಡುಬರುತ್ತದೆ.

ಧನು: ನೀತಿ ನಿಯಮಗಳಿಗೆ ಬದ್ಧರಾದರೆ, ಉದ್ಯೋಗದಲ್ಲಿ ಹೆದರುವ ಅವಶ್ಯಕತೆ ಕಂಡುಬಾರದು. ಮಾತಿನ ಮೇಲೆ ಆತ್ಮವಿಶ್ವಾಸ ಮತ್ತು ಹಿಡಿತವಿರಲಿ. ಧಾರ್ಮಿಕ ವ್ಯಕ್ತಿಗಳಿಗೆ ಶುಭವಾಗುವುದು.

ಮಕರ: ಸರಕು ಸಾಗಾಣೆದಾರರಿಗೆ ಆದಾಯದಲ್ಲಿ ಹೆಚ್ಚಳ ಕಂಡುಬಂದರೂ, ಕಾರ್ಯದ ಒತ್ತಡದಿಂದ ವೃತ್ತಿಯಲ್ಲಿ ನಿರಾಶೆಯಾಗುವುದು. ಜೀವನ ರೂಪಿಸಿಕೊಳ್ಳಲು ನಿರ್ಧರಿಸಿದ ಪ್ರೇಮಿಗಳಿಗೆ ಸ್ಪಂದನೆ ಸಿಗುವ ಅವಕಾಶಗಳಿವೆ.

ಕುಂಭ: ಸ್ನೇಹಿತನಿಗಾಗಿ ಸಮಯ ಮತ್ತು ಹಣವನ್ನು ಖರ್ಚು ಮಾಡುವ ಪರಿಸ್ಥಿತಿ ಬರುವುದು. ಕುಟುಂಬದ ಅಭಿವೃದ್ಧಿಯಲ್ಲಿ ನಿಮ್ಮ ಅವಿರತ ಪ್ರಯತ್ನವು ಫಲಕಾರಿಯಾಗುವುದು.

ಮೀನ: ಆಹಾರ ಪದಾರ್ಥಗಳ ವ್ಯಾಪಾರ ಮಾಡುವವರಿಗೆ ಶ್ರಮಕ್ಕೆ ತಕ್ಕಷ್ಟು ಆದಾಯ ಲಭಿಸಲಿದೆ. ಮನುಷ್ಯ ಪ್ರಯತ್ನದ ಜತೆ ಮಹಾಗಣಪತಿಯ ಮೊರೆ ಹೋಗುವುದರಿಂದ ಕಾರ್ಯ ಸಿದ್ಧಿಯಾಗಲಿದೆ.

ಪದಬಂಧ 5703

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಸ್ಲೇಟಿನ ಮೇಲೆ ಬರೆಯುವ ಸಾಧನ (3)
3.ಬದಿಯಲ್ಲಿ ಕಾಣಿಸುತ್ತಿರುವ ಜೈನ ದೇವಾಲಯ (3)
5.ರಾಮನ ಮಗನಿಂದ ಬಂದಿರುವ ಹುರುಪು! (5)
7.ಈಕೆ ಮನ್ಮಥನ ಪತ್ನಿ (2)
9.ಪ್ರತೀ ವಾರ ನದಿಯ ದಡವನ್ನು ಹುಡುಕಿ! (2)
10.ಚಪ್ಪರವನ್ನು ಹೀಗೂ ಹೇಳುವರು (3)
11.ಪಿನಾಕದ ಹತ್ತಿರವಿರುವ ಕೋಗಿಲೆ (2)
12.ನಗರದಲ್ಲಿರುವ ಮನುಷ್ಯ (2)
14.ಅಡಿಪಾಯದ ಮಾದರಿಯಿದು (5)
16.ಹರನಿಂದ ಸಿಕ್ಕಿರುವ ಆಶೀರ್ವಾದ (3)
17.ನಯವಾಗಿ ಹೊಳೆಯುವ ಕಣ್ಣು (3)

ಮೇಲಿಂದ ಕೆಳಕ್ಕೆ
1.ಬರದಲ್ಲಿ ತೋರುತ್ತಿರುವ ಒಣ ಜಂಬ! (4)
2.ತೆಳುವಾದ ಸೀರೆ (3)
3.ಬಯಲಲ್ಲಿರುವಾಗ ಮೂಡಿದ ಆಸೆ (3)
4.ಸೂರ್ಯನ ಇನ್ನೊಂದು ಹೆಸರು (4)
6.ಕೊನೆಗೆ ಚಾರನಿದ್ದಾಗ ಬಂದಿರುವ ಆಲೋಚನೆ (3)
8.ಈತ ತಿರುಪೆ ಬೇಡುವವನು (3)
9.ಮಾನವಂತ ಕೈಗೊಂಡಿರುವ ನಿಶ್ಚಯ (3)
10.ತೀವ್ರವಾದ ಆಸೆ (3)
11.ತಂದೆಯ ತಂದೆ (4)
13.ಬಾಳೆ ಹಣ್ಣಿನಿಂದ ಮಾಡಿರುವ ಖಾದ್ಯ (4)
14.ಅಡಿಕೆ ಹಾಳೆಯಿಂದ ಮಾಡಿರುವ ತಟ್ಟೆ (3)
15.ಮಾನವಂತನಿಗೆ ಮಾಡುತ್ತಿರುವ ಆದರ (3)



5702ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ಹಜಾಮತಿ 5.ಜಾಯಮಾನ
6.ಕಡೆಗೀಲು 8.ಷರಬತ್ತು
12.ವನಸುಮ 14.ಅಭಿಮಾನ
15.ಅನುಕಂಪ 16.ತರಗತಿ

ಮೇಲಿಂದ ಕೆಳಕ್ಕೆ:
1.ಪ್ರಜಾಪ್ರಭುತ್ವ
2.ಅಮಾನುಷ 3.ಹಕೀಕತ್ತು
4.ತಿಕ್ಕಲು 7.ಗೀಳು
9.ಬವಾನ 10.ಉಷ್ಣಮಾಪಕ
11.ನಾಭಿ 12.ವನಸ್ಪತಿ
13.ಮರುನುಡಿ 14.ಅನೃತ

ಸುಡೊಕು 6088

				8			6	7
	7		1		6			3
3		5		2		9		
	8	7					1	
		4	7	6	3	8		
5	9						7	4
		2		7		1		5
1	4		2		5		9	
	5			4		2		8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6087 ಸುಡೊಕು

2	7	9	4	5	3	6	8	1
6	4	3	1	8	7	2	5	9
8	1	5	2	6	9	7	3	4
3	8	4	7	2	6	1	9	5
7	9	2	8	1	5	4	6	3
5	6	1	9	3	4	8	2	7
9	2	7	5	4	8	3	1	6
1	5	6	3	7	2	9	4	8
4	3	8	6	9	1	5	7	2

ಬಿಡಿಎ ಕಚೇರಿ ಸ್ಥಳಾಂತರ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಪಶ್ಚಿಮ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಕಚೇರಿ, ನಾಲ್ಕು ಉಪ ವಿಭಾಗಗಳು ಮತ್ತು ಕಂದಾಯ ವಿಭಾಗದ ಕಚೇರಿಗಳನ್ನು ಸ್ಥಳಾಂತರಿಸಲಾಗಿದೆ. ವಿಜಯನಗರ ವಾಣಿಜ್ಯ ಸಂಕೀರ್ಣದಲ್ಲಿರುವ ಈ ಕಚೇರಿಗಳು ಮೈಸೂರು ರಸ್ತೆ ಕೆಂಗೇರಿಯ ಜ್ಞಾನಭಾರತಿ ಬಡಾವಣೆ, ಮೆಟ್ರೊ ಪಿಲ್ಲರ್ ಸಂಖ್ಯೆ 594ರ ಹತ್ತಿರದಲ್ಲಿರುವ ಕಚೇರಿಯಲ್ಲಿ ಜೂನ್ 10ರಿಂದ ಕಾರ್ಯನಿರ್ವಹಿಸಲಿವೆ.

ಸಿರಿಗಂಧ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ
Sirigandha House Building Co-operative Society Ltd.
(ನೋಂದಣಿ ಕ್ರಮಾಂಕ : HSG.1/28/HHS/38527/2009-10)
"ಪುಣ್ಯಕೋಟಿ, ನಂ.1587, 3ನೇ ಮುಖ್ಯರಸ್ತೆ, ಚಂದ್ರಾ ಬಡಾವಣೆ, ಬೆಂಗಳೂರು-560040, ದೂ : 080-23184471, 9980147199

ಸಂ.ಸಿರಿಗಂಧ/ವ.ಬ/42/2024-25 ದಿನಾಂಕ : 06-06-2024

ಹರಾಜು ಪ್ರಕಟಣೆ

ಬೆಂಗಳೂರು ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಕಂಬೀಪುರ ಗ್ರಾಮದಲ್ಲಿರುವ ಈ ಕೆಳಗೆ ವಿವರಿಸಿರುವ ತೇಗದ ಮರಗಳನ್ನು ಈ ಕೆಳಗೆ ನಮೂದಿಸಿರುವ ಷರತ್ತಿಗೊಳಪಟ್ಟು ದಿನಾಂಕ 19.06.2024 ರಂದು ಬೆಳಿಗ್ಗೆ 11.30 ಘಂಟೆಗೆ ಬಹಿರಂಗ ಹರಾಜು ಮಾಡಲಾಗುವುದು.

ಜಿಲ್ಲೆ	ತಾಲ್ಲೂಕು	ಹೋಬಳಿ	ಗ್ರಾಮ	ಸರ್ವೆ ನಂ.	ಮರಗಳ ಸಂಖ್ಯೆ
ಬೆಂಗಳೂರು	ಬೆಂಗಳೂರು ದಕ್ಷಿಣ	ಕೆಂಗೇರಿ	ಕಂಬೀಪುರ	16/3, 184/1, 184/2, 184/3, 184/4, 185/2, 186/1, 186/2, 187/3 ಮತ್ತು 252.	203

ಆಸಕ್ತಿ ಉಳ್ಳವರು ಈ ಹರಾಜಿನಲ್ಲಿ ಭಾಗವಹಿಸಿ ಮರಗಳನ್ನು ಖರೀದಿಸಬೇಕಾಗಿ ಕೋರಿದೆ.

ಷರತ್ತುಗಳು :
01. ಹರಾಜನ್ನು ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಕಂಬೀಪುರ ಗ್ರಾಮದಲ್ಲಿ ಮರಗಳಿರುವ ಸ್ಥಳದಲ್ಲಿ ಮಾಡಲಾಗುವುದು.
02. ಮೇಲ್ಕಂಡ ನಿಂತಿರುವ ತೇಗದ ಮರಗಳು ಎಲ್ಲಿವೆಯೋ, ಹೇಗಿವೆಯೋ ಹಾಗೆಯೇ ಹರಾಜು ಮಾಡಲಾಗುವುದು.
03. ಈ ಮರಗಳನ್ನು ಕಟಾವು ಮಾಡಿ ಸಾಗಾಣಿಕೆ ಮಾಡುವ ಮೊದಲು ನಿಯಮಾನುಸಾರ ಅರಣ್ಯ ಇಲಾಖೆಯ ಅಧಿಕಾರಿಗಳಿಂದ ಅನುಮತಿ ಪಡೆಯತಕ್ಕದ್ದು.
04. ಹರಾಜಿನಲ್ಲಿ ಭಾಗವಹಿಸುವವರು ರೂ.1,00,000/- (ಒಂದು ಲಕ್ಷಗಳು ಮಾತ್ರ) ಗಳನ್ನು ನಗದು ಅಥವಾ ಸಿರಿಗಂಧ ಗೃಹ ನಿರ್ಮಾಣ ಸಹಕಾರ ಸಂಘದ ಹೆಸರಿನಲ್ಲಿ ಪಡೆಯಲಾದ ಡಿ.ಡಿ ಮೂಲಕ ಠೇವಣಿ ಮಾಡತಕ್ಕದ್ದು.
05. ಹರಾಜಿನಲ್ಲಿ ಜಯಶೀಲರಾದ ಬಿಡ್ಡುದಾರರು ಹರಾಜಿನ ಶೇ.25% ಮೊತ್ತವನ್ನು ಹರಾಜು ಮುಗಿದ ಕೂಡಲೇ ಪಾವತಿಸತಕ್ಕದ್ದು. ತಪ್ಪಿದ್ದಲ್ಲಿ ಸದರಿಯವರು ಪಾವತಿಸಿರುವ ಠೇವಣಿ ಹಣವನ್ನು ಮುಟ್ಟುಗೋಲು ಮಾಡಿಕೊಳ್ಳಲಾಗುವುದು.
06. ಇನ್ನುಳಿದ ಶೇ.75% ರಷ್ಟು ಮೊತ್ತವನ್ನು ಮರಗಳನ್ನು ಕಟಾವು ಮಾಡುವುದಕ್ಕೆ ಮೊದಲು ಅಥವಾ ಹರಾಜು ಮುಗಿದ 30 ದಿನಗಳೊಳಗಾಗಿ ಪಾವತಿಸತಕ್ಕದ್ದು.
07. ಹರಾಜು ಮುಗಿದ ನಂತರ ಮರಗಳ ಸುರಕ್ಷತೆ ಬಿಡ್ಡುದಾರರ ಜವಾಬ್ದಾರಿಯಾಗಿರುತ್ತದೆ ಹಾಗೂ ಈ ಬಗ್ಗೆ ಸಹಕಾರ ಸಂಘ ಜವಾಬ್ದಾರಿಯಾಗಿರುವುದಿಲ್ಲ.
08. ಜಯಶೀಲರಾದ ಬಿಡ್ಡುದಾರರು ಈ ತೇಗದ ಮರಗಳನ್ನು ಹರಾಜು ನಡೆದ 90 ದಿನಗಳೊಳಗಾಗಿ ಕಟಾವು ಮಾಡಿ ಸಾಗಾಣಿಕೆ ಮಾಡಿಕೊಳ್ಳತಕ್ಕದ್ದು.
09. ಹರಾಜಿನ ಸಂದರ್ಭದಲ್ಲಿ ಹೆಚ್ಚಿನ ಮೊತ್ತದ ಬಿಡ್ಡನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಸಹಕಾರ ಸಂಘ ಹೊಂದಿರುತ್ತದೆ.
10. ಹರಾಜಿನಲ್ಲಿ ಖರೀದಿಸಿದ ತೇಗದ ಮರಗಳಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಪಾವತಿಸಬೇಕಾಗಬಹುದಾದ ತೆರಿಗೆ ಮತ್ತಿತರ ಮೊತ್ತಗಳನ್ನು ಬಿಡ್ಡುದಾರರೇ ಪಾವತಿಸಬೇಕಾಗಿರುತ್ತದೆ.

ಸಹಿ\-
ಕಾರ್ಯದರ್ಶಿ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560020.

ಸಂಖ್ಯೆ: ಬೆಂಅಪ್ರಾ/ಅಸ/ಅಅ-1/ಟಿ-404/2024-25 ದಿನಾಂಕ: 05-06-2024

ಪ್ರಕಟಣೆ

ಸರ್ಕಾರದಿಂದ ಅನುಮೋದನೆಗೊಂಡಿರುವ ಮಹಾಯೋಜನೆ – 2015 ರ ವಲಯ ನಿಯಮಾವಳಿಯಲ್ಲಿನ Chapter 4.13.2 (i) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ಶೈಕ್ಷಣಿಕ ಕಟ್ಟಡಕ್ಕೆ ನಕ್ಷೆ ಮಂಜೂರಾತಿ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ನಕ್ಷೆ ಮಂಜೂರಾತಿ ಕೋರಿರುವ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಶೈಕ್ಷಣಿಕ ಕಟ್ಟಡಕ್ಕೆ ನಕ್ಷೆ ಮಂಜೂರಾತಿ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಅಭಿಯಂತರ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗುಂ	ಕಟ್ಟಡ ನಕ್ಷೆ ಮಂಜೂರಾತಿ ಕೋರಿರುವ ಉದ್ದೇಶ
ಶ್ರೀ ಟಿ.ಎನ್. ಪರಮೇಶ್ವರ್, ನಂ. 203, 1ನೇ ಮುಖ್ಯರಸ್ತೆ, 5ನೇ ಅಡ್ಡರಸ್ತೆ, BHCS ಬಡಾವಣೆ, ಉತ್ತರಹಳ್ಳಿ, ಬೆಂಗಳೂರು – 560061.	ಬೆಂಗಳೂರು ದಕ್ಷಿಣ	ಕೆಂಗೇರಿ	ಭೀಮನಕುಪ್ಪೆ	193/1	2-29.6	ಶೈಕ್ಷಣಿಕ
				ಒಟ್ಟು	2-29.6	

ಷರಾ: ಅರ್ಜಿದಾರರು ಪ್ರಶ್ನಿತ ಜಮೀನುಗಳಲ್ಲಿ ಶೈಕ್ಷಣಿಕ ಉದ್ದೇಶದ ಕಟ್ಟಡ ನಿರ್ಮಿಸುವುದರಿಂದ ಅಕ್ಕಪಕ್ಕದ ಗ್ರಾಮದ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ದೊರಕುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತ, ಪ್ರಶ್ನಿತ ಜಮೀನಿನಲ್ಲಿ ಶೈಕ್ಷಣಿಕ ಉದ್ದೇಶಕ್ಕೆ ಕಟ್ಟಡ ನಕ್ಷೆ ಮಂಜೂರಾತಿ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ಅಭಿಯಂತರ ಅಧಿಕಾರಿ-1, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

ಕೊಳತೂರು ಬಳಿ ಮೇಲ್ಸೇತುವೆ: ಎನ್‌ಎಚ್‌ಎಐಗೆ ಹೈಕೋರ್ಟ್ ಸೂಚನೆ

ಮನವಿ ಪರಿಗಣಿಸಲು ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು-ಚೆನ್ನೈ ಕಾರಿಡಾರ್ ಮಾರ್ಗದಲ್ಲಿನ ಹೊಸಕೋಟೆ ತಾಲ್ಲೂಕಿನ ಕೊಳತೂರು ಜಂಕ್ಷನ್ ಬಳಿ ಮೇಲ್ಸೇತುವೆ ನಿರ್ಮಿಸುವಂತೆ ಕೋರಿ ಸ್ಥಳೀಯರು ಸಲ್ಲಿಸಿರುವ ಮನವಿಯನ್ನು ಎಂಟು ವಾರಗಳಲ್ಲಿ ಪರಿಗಣಿಸಿ ಕಾನೂನು ಪ್ರಕಾರ ಸೂಕ್ತ ತೀರ್ಮಾನ ಕೈಗೊಳ್ಳಿ' ಎಂದು ಹೈಕೋರ್ಟ್, ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ (ಎನ್‌ಎಚ್‌ಎಐ) ನಿರ್ದೇಶಿಸಿದೆ.

ಈ ಸಂಬಂಧ ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೊಸಕೋಟೆ ತಾಲ್ಲೂಕಿನ ಕೃಷಿಕರಾದ ಕೆ.ವಿ. ರವಿಕುಮಾರ್ ಸೇರಿದಂತೆ ಕೊಳತೂರು, ಅಪ್ಪಸಂದ್ರ, ಸೋಲೂರು, ಊರಹಳ್ಳಿ ಗ್ರಾಮಗಳ ಒಟ್ಟು 13 ನಿವಾಸಿಗಳು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್ ವಕೀಲ ಎಂ.ಶಿವ ಪ್ರಕಾಶ್, 'ಕೊಳತೂರು ಪ್ರಮುಖ ಗ್ರಾಮ. ರಾಷ್ಟ್ರೀಯ ಹೆದ್ದಾರಿಯಲ್ಲಿ ಬರುವ ಇದರ ರಸ್ತೆಯು 20 ಗ್ರಾಮಗಳನ್ನು ಸಂಪರ್ಕಿಸುವ ಮುಖ್ಯ ರಸ್ತೆಯಾಗಿದೆ. ಈ ಗ್ರಾಮ ಹಾಲು ಉತ್ಪಾದನೆಯಲ್ಲಿ ಜಿಲ್ಲೆಯಲ್ಲಿ 2ನೇ ಸ್ಥಾನದಲ್ಲಿದೆ. ಅಂತೆಯೇ, ಸಮೀಪದಲ್ಲೇ ಜಿಲ್ಲಾ ತಾಯಿ ಮಕ್ಕಳ ಆಸ್ಪತ್ರೆಯನ್ನು ಸುಮಾರು ₹40 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿದೆ. ಇಲ್ಲಿ ದಿನಕ್ಕೆ ಸರಾಸರಿ ಒಂದು ಸಾವಿರ ವಾಹನಗಳ ಸಂಚಾರವಿದೆ. ಮುಖ್ಯವಾಗಿ ಶಾಲಾ ಮಕ್ಕಳು ಮತ್ತು ಹಾಲು ಸಾಗಣೆ ವಾಹನಗಳು, ಉಗ್ರಾಣಗಳಿಂದ ತರಕಾರಿ, ಹಣ್ಣು, ಇತ್ಯಾದಿ ದಿನಬಳಕೆ ಸಾಮಗ್ರಿಗಳ ಸರಬರಾಜು ನೇರವಾಗಿ ಬೆಂಗಳೂರು-ಕೋಲಾರ ರಸ್ತೆಯ ಎನ್‌ಎಚ್-75ಕ್ಕೆ ತಲುಪುತ್ತದೆ' ಎಂದರು.

'ಬೆಂಗಳೂರು-ಚೆನ್ನೈ ಕಾರಿಡಾರ್ ರಸ್ತೆಯಿಂದ ಕೊಳತೂರು ಗ್ರಾಮದ ಮುಖ್ಯ ದ್ವಾರಕ್ಕೆ ಲಿಂಕ್ ರಸ್ತೆ ಕೊಟ್ಟು ಅಡ್ಡಿಪಡಿಸಲಾಗುತ್ತಿದೆ. ಇದರಿಂದ ಸಾರ್ವಜನಿಕರು ಮುಖ್ಯವಾಗಿ ತಾಯಿ ಮಕ್ಕಳ ಆಸ್ಪತ್ರೆಗೆ ಬರುವವರು ಸುತ್ತಿಕೊಂಡು ಬರಬೇಕಾಗಿದೆ. ಈ ಬಗ್ಗೆ ಸಂಬಂಧಿಸಿದವರಿಗೆ ಹಲವಾರು ಮನವಿ ಸಲ್ಲಿಸಿದ್ದರೂ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ (ಎನ್‌ಎಚ್‌ಎಐ) ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿಲ್ಲ. ಬೇರಾವುದೇ ರೀತಿಯ ಪರಿಹಾರ ಮಾರ್ಗವನ್ನೂ ತೋರಿಸಿಲ್ಲ' ಎಂದು ಆಕ್ಷೇಪಿಸಿದರು.

'ಕೊಳತೂರು ಮತ್ತು ಸುತ್ತಲಿನ 19 ಗ್ರಾಮಗಳನ್ನು ಸಂಧಿಸುವ ರಾಷ್ಟ್ರೀಯ ಹೆದ್ದಾರಿ-75 ಹಾಗೂ 648ರ ಬೆಂಗಳೂರು-ಚೆನ್ನೈ ಎಕ್ಸ್‌ಪ್ರೆಸ್ ವೇ ಸಂಪರ್ಕ ಕಲ್ಪಿಸುವ ಕೊಳತೂರು ಜಂಕ್ಷನ್ ಬಳಿ ಮೇಲ್ಸೇತುವೆ ನಿರ್ಮಿಸಬೇಕು. ಈ ನಿಟ್ಟಿನಲ್ಲಿ ಎನ್‌ಎಚ್‌ಎಐ ಸೂಕ್ತವಾದ ನೀಲನಕ್ಷೆ ಸಿದ್ಧಪಡಿಸಬೇಕು. ಇದಕ್ಕಾಗಿ 2023ರ ಸೆಪ್ಟೆಂಬರ್ 4ರಂದು ಸಲ್ಲಿಸಿರುವ ಮನವಿಯನ್ನು ಪರಿಗಣಿಸಲು ನಿರ್ದೇಶಿಸಬೇಕು' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ವಾದ ಆಲಿಸಿದ ನ್ಯಾಯಪೀಠ, 'ಅರ್ಜಿದಾರರ ಮನವಿ ಪತ್ರವನ್ನು ಎಂಟು ವಾರಗಳಲ್ಲಿ ಕಾನೂನು ಪ್ರಕಾರ ಪರಿಗಣಿಸಿ ನಿರ್ಧಾರವನ್ನು ತಿಳಿಸಿ' ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ನ್ಯಾಯಪೀಠ ನಿರ್ದೇಶಿಸಿತು.

ಎನ್‌ಎಸ್‌ಇ ವಿಶ್ವದಾಖಲೆ

ನವದೆಹಲಿ (ಪಿಟಿಐ): ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ (ಎನ್‌ಎಸ್‌ಇ) ಬುಧವಾರ ನಡೆದ ವಹಿವಾಟಿನಲ್ಲಿ 1,971 ಕೋಟಿ ಷೇರು ವಹಿವಾಟು ಪ್ರಕ್ರಿಯೆ ನಡೆದಿದ್ದು, ವಿಶ್ವದಾಖಲೆ ಆಗಿದೆ ಎಂದು ಎನ್‌ಎಸ್‌ಇ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಆಶಿಶ್‌ಕುಮಾರ್ ಚೌಹಾಣ್ ತಿಳಿಸಿದ್ದಾರೆ.

'ಒಂದೇ ದಿನದಲ್ಲಿ 1,971 ಕೋಟಿ ಆರ್ಡರ್‌ಗಳು ಮತ್ತು 28.5 ಕೋಟಿ ಟ್ರೇಡ್‌ಗಳನ್ನು ನಿರ್ವಹಣೆ ಮಾಡಲಾಗಿದೆ' ಎಂದು ಅವರು 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

ಷೇರು ಮಾರಾಟ ಮಾಡುವವರು ನಿರ್ದಿಷ್ಟ ಷೇರುಗಳನ್ನು ಮಾರಾಟಕ್ಕೆ ಇಡುವುದನ್ನು ಆರ್ಡರ್ ಬುಕ್ ಮಾಡುವುದು ಎಂದು ಕರೆಯಲಾಗುತ್ತದೆ. ಇಂತಹ ಷೇರುಗಳನ್ನು ಹೂಡಿಕೆದಾರರು ಖರೀದಿಸಿದರೆ ಅದು ಟ್ರೇಡ್ ಆದಂತೆ. ಅಲ್ಲಿಗೆ ಒಂದು ವಹಿವಾಟು ಮುಗಿಯುತ್ತದೆ. ಬುಧವಾರದಂದು 28.55 ಕೋಟಿ ವಹಿವಾಟುಗಳು ನಡೆದಿವೆ.

ಮೂರನೇ ಬಾರಿ ಬಾಹ್ಯಾಕಾಶಕ್ಕೆ ಸುನಿತಾ ವಿಲಿಯಮ್ಸ್

ಹ್ಯೂಸ್ಟನ್ (ಪಿಟಿಐ): ಭಾರತ ಮೂಲದ ಗಗನಯಾತ್ರಿ ಸುನಿತಾ ವಿಲಿಯಮ್ಸ್ ಅವರು ಮೂರನೇ ಬಾರಿ ಬಾಹ್ಯಾಕಾಶಕ್ಕೆ ತೆರಳಿದರು.

'ಬೋಯಿಂಗ್ ಸ್ಟಾರ್‌ಲೈನರ್' ಬಾಹ್ಯಾಕಾಶ ನೌಕೆಯು ಸುನಿತಾ ವಿಲಿಯಮ್ಸ್ ಮತ್ತು ಇನ್ನೊಬ್ಬ ಗಗನ ಯಾತ್ರಿ ಬಚ್ ವಿಲ್ಮೋರ್ ಅವರನ್ನು ಅಂತರರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರಕ್ಕೆ ಕೊಂಡೊಯ್ಯಿತು.

ತಾಂತ್ರಿಕ ದೋಷಗಳು ಕಂಡುಬಂದ ಕಾರಣ ಹಲವು ಬಾರಿ ಉಡಾವಣೆಯನ್ನು ಮುಂದೂಡಲಾಗಿತ್ತು. ಫ್ಲಾರಿಡಾದ 'ಕೇಪ್ ಕ್ಯಾನವೆರಲ್ ಸ್ಪೇಸ್ ಫೋರ್ಸ್' ಕೇಂದ್ರದಿಂದ ಈ ಬಾಹ್ಯಾಕಾಶ ನೌಕೆಯನ್ನು ಉಡಾವಣೆ ಮಾಡಲಾಯಿತು.

58 ವರ್ಷದ ಸುನಿತಾ ವಿಲಿಯಮ್ಸ್, ಬಾಹ್ಯಾಕಾಶ ನೌಕೆಯ ಪೈಲಟ್ ಆಗಿ ಕಾರ್ಯನಿರ್ವಹಿಸುತ್ತಿದ್ದು, 61 ವರ್ಷದ ವಿಲ್ಮೋರ್ ಈ ಕಾರ್ಯಾಚರಣೆಯ ಕಮಾಂಡರ್ ಹೊಣೆಯನ್ನು ವಹಿಸಿಕೊಂಡಿದ್ದಾರೆ.

ಗಗನಯಾತ್ರಿಗಳಾದ ಸುನಿತಾ ವಿಲಿಯಮ್ಸ್ ಮತ್ತು ಬಚ್ ವಿಲ್ಮೋರ್ – ಪಿಟಿಐ ಚಿತ್ರ

ನೌಕೆಯು ಇವರಿಬ್ಬರ ಜೊತೆಗೆ 345 ಕೆ.ಜಿ. ಸಾಮಗ್ರಿಗಳನ್ನು ಸಹ ಕೊಂಡೊಯ್ಯುತ್ತಿದೆ. ಬಾಹ್ಯಾಕಾಶ ನಿಲ್ದಾಣದಲ್ಲಿ ವಿಲಿಯಮ್ಸ್ ಮತ್ತು ವಿಲ್ಮೋರ್ ಒಂದು ವಾರ ಇರಲಿದ್ದಾರೆ. ಸುನಿತಾ ಅವರಿಗೆ ಮೂರನೇ ಗಗನಯಾತ್ರೆ ಇದಾಗಿದೆ.

'ಇದು ಉತ್ತಮ ಆರಂಭ. ಗಗನ ಯಾತ್ರಿಗಳು ಬಾಹ್ಯಾಕಾಶ ನಿಲ್ದಾಣಕ್ಕೆ ಸುರಕ್ಷಿತವಾಗಿ ತೆರಳಿ, ಹಿಂತಿರುಗಲಿದ್ದಾರೆ ಎನ್ನುವ ವಿಶ್ವಾಸವಿದೆ' ಎಂದು ಬೋಯಿಂಗ್ ಕಂಪನಿಯ ಸಿಇಒ ಟೆಡ್ ಕೊಲ್ಬೆರ್ಟ್ ತಿಳಿಸಿದ್ದಾರೆ.

ಸುಧಾ, ಮಯೂರ ಓದಿರಿ

ಮೀನುಗಾರರ ರಕ್ಷಣೆ

ಕೋಯಿಕ್ಕೋಡ್ (ಪಿಟಿಐ): ದೋಣಿಯ ಎಂಜಿನ್ ವಿಫಲಗೊಂಡಿದ್ದರಿಂದ ಪರಪ್ಪನಂಗಡಿ ಬಳಿ ಸಮುದ್ರದ ಮಧ್ಯದಲ್ಲಿ ಸಿಲುಕಿಕೊಂಡಿದ್ದ 31 ಮೀನುಗಾರರನ್ನು ರಕ್ಷಿಸಿ ದಡಕ್ಕೆ ಕರೆತರಲಾಗಿದೆ ಎಂದು ಮೀನುಗಾರಿಕೆ ಇಲಾಖೆಯ ಅಧಿಕೃತ ಪ್ರಕಟಣೆಯು ತಿಳಿಸಿದೆ.

ಚಿಕಿತ್ಸೆಯ ಶುಲ್ಕ ಪ್ರದರ್ಶನ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ವೈದ್ಯಕೀಯ ಸಂಸ್ಥೆಗಳು ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ಕಾಯ್ದೆ 2017ರ ಅನ್ವಯ ಚಿಕಿತ್ಸೆಗಳಿಗೆ ಸಂಬಂಧಿಸಿದಂತೆ ಕಡ್ಡಾಯವಾಗಿ ವಿಸ್ತೃತ ಬಿಲ್ ನೀಡಬೇಕು. ವಿವಿಧ ಶುಲ್ಕಗಳನ್ನು ಜಾಲತಾಣ, ಸೂಚನಾ ಫಲಕಗಳಲ್ಲಿ ಪ್ರಕಟಿಸಬೇಕು ಎಂದು ಆರೋಗ್ಯ ಇಲಾಖೆ ಸುತ್ತೋಲೆ ಹೊರಡಿಸಿದೆ.

ಕಾಯ್ದೆಯ ಪ್ರಕಾರ ರೋಗಿಗಳಿಗೆ ಮತ್ತು ಸಾರ್ವಜನಿಕರ ಮಾಹಿತಿಗೆ ಖಾಸಗಿ ವೈದ್ಯಕೀಯ ಸಂಸ್ಥೆಗಳು ಸಮಾಲೋಚನಾ ಶುಲ್ಕ, ತಪಾಸಣೆ, ವೈದ್ಯಕೀಯ ಚಿಕಿತ್ಸೆ, ಚಿಕಿತ್ಸಾ ವಿಧಾನ, ಆಸ್ಪತ್ರೆ ಶುಲ್ಕ, ಇತರ ಸೇವೆಗಳಿಗೆ ಸಂಬಂಧಿಸಿದ ಶುಲ್ಕ ಹಾಗೂ ವಿವರಗಳನ್ನು ಪ್ರಕಟಿಸಬೇಕು. ಈ ಮಾಹಿತಿಯನ್ನು ಸಾಮಾಜಿಕ ಜಾಲತಾಣ ಅಥವಾ ಸಂಸ್ಥೆಯ ಜಾಲತಾಣ, ಸೂಚನಾ ಫಲಕದಲ್ಲಿ ಪ್ರದರ್ಶಿಸಬೇಕು. ಎಲ್ಲ ಸಮಯದಲ್ಲೂ ಸಂಸ್ಥೆಯಲ್ಲಿ ರೋಗಿಗಳಿಗೆ ಮತ್ತು ಸಾರ್ವಜನಿಕರಿಗೆ ಸಿದ್ಧ ರೂಪದಲ್ಲಿ ಲಭ್ಯವಾಗುವ ಪುಸ್ತಿಕೆಗಳ ಅಥವಾ ಕಿರು ಹೊತ್ತಿಗೆಗಳ ರೂಪದಲ್ಲಿ ಶುಲ್ಕಗಳ ವಿವರವನ್ನು ಮುದ್ರಿಸಿಡುವುದು ಕಡ್ಡಾಯ ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಕೆಲವು ಖಾಸಗಿ ವೈದ್ಯಕೀಯ ಸಂಸ್ಥೆಗಳು ವಿಸ್ತೃತ ಬಿಲ್ಲನ್ನು ಒದಗಿಸದಿರುವುದು ಗಮನಕ್ಕೆ ಬಂದಿದೆ. ಕೆಲವು ಚಿಕಿತ್ಸೆಗಳಿಗೆ ಕ್ರೋಢೀಕೃತ ದರವನ್ನು ನಿಗದಿಪಡಿಸಿ, ಅಂತಹ ಕ್ರೋಢೀಕೃತ ದರವನ್ನು ಮಾತ್ರ ಬಿಲ್‌ನಲ್ಲಿ ನಮೂದಿಸಲಾಗುತ್ತಿದೆ.

ಆದ್ದರಿಂದ, ಎಲ್ಲ ಖಾಸಗಿ ವೈದ್ಯಕೀಯ ಸಂಸ್ಥೆಗಳು ರೋಗಿಗೆ ಒದಗಿಸಿದ ಪ್ರತಿ ಕಾರ್ಯವಿಧಾನ, ಚಿಕಿತ್ಸೆ, ಸೇವೆಗಳಿಗೆ ವಿಸ್ತೃತ ಬಿಲ್ ಒದಗಿಸಬೇಕು. ಈ ರೀತಿ ಬಿಲ್ ಒದಗಿಸದಿದ್ದಲ್ಲಿ ಕಾನೂನಿನ ಅಡಿ ಸೂಕ್ತ ಕ್ರಮ ಜರುಗಿಸಲಾಗುವುದು ಎಚ್ಚರಿಸಲಾಗಿದೆ.

ಹಸಿರೇ ಉಸಿರು... ವಿಶ್ವ ಪರಿಸರ ದಿನದ ಅಂಗವಾಗಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಹಾಗೂ ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು ಬುಧವಾರ ರಾಜಭವನದಲ್ಲಿ 'ಕ್ಯಾಸಿಯಾ ಫಿಸ್ಟುಲಾ' ಸಸಿಯನ್ನು ನೆಟ್ಟರು

ಡಿ.ಕೆ. ಸುರೇಶ್ ಭೇಟಿಯಾದ ಎಸ್‌ಟಿಎಸ್, ಹೆಬ್ಬಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಪಕ್ಷ ಬಿಜೆಪಿಯಿಂದ ದೂರವಾಗಿ ಕಾಂಗ್ರೆಸ್ ಕಡೆ ವಾಲಿರುವ ಶಾಸಕರಾದ ಎಸ್.ಟಿ. ಸೋಮಶೇಖರ್ ಮತ್ತು ಶಿವರಾಮ ಹೆಬ್ಬಾರ್ ಅವರು ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಸೋಲು ಕಂಡ ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ. ಸುರೇಶ್ ಅವರನ್ನು ಬುಧವಾರ ಭೇಟಿ ಮಾಡಿದರು.

ಸದಾಶಿವನಗರದಲ್ಲಿರುವ ಸುರೇಶ್ ನಿವಾಸಕ್ಕೆ ಬಂದ ಸೋಮಶೇಖರ್ ಮತ್ತು ಹೆಬ್ಬಾರ್ ಕೆಲಹೊತ್ತು ಮಾತುಕತೆ ನಡೆಸಿದರು. ಸಚಿವ ಜಮೀರ್ ಅಹಮದ್ ಖಾನ್, ಚಿತ್ರದುರ್ಗದ ಪರಾಜಿತ ಅಭ್ಯರ್ಥಿ ಬಿ.ಎನ್. ಚಂದ್ರಪ್ಪ, ಸಚಿವ ಎನ್. ಚಲುವರಾಯಸ್ವಾಮಿ, ಶಾಸಕರಾದ ಪಿ.ಎಂ. ನರೇಂದ್ರ ಸ್ವಾಮಿ, ರವಿ ಗಣಿಗ, ರಮೇಶ್ ಬಂಡಿಸಿದ್ದೇಗೌಡ ಕೂಡಾ ಸುರೇಶ್ ಅವರನ್ನು ಭೇಟಿ ಮಾಡಿ ಚರ್ಚಿಸಿದರು.

ಜನರಿಗೆ ತಪ್ಪಿನ ಅರಿವಾಗಲಿದೆ: ಎಸ್.ಟಿ. ಸೋಮಶೇಖರ್ ಮಾತನಾಡಿ, '28 ಲೋಕಸಭಾ ಸದಸ್ಯರ ಪೈಕಿ, ಹೆಚ್ಚು ಕೆಲಸ ಮಾಡಿದವರು, ಕೇಂದ್ರದ ಅನೇಕ ಯೋಜನೆಗಳನ್ನು ತಂದವರು, ಸರ್ಕಾರದ ಕಾರ್ಯಕ್ರಮಗಳನ್ನು ಮನೆ ಮನೆಗೆ ತಲುಪಿಸಿದವರು ಡಿ.ಕೆ. ಸುರೇಶ್. ಆದರೆ, ಜನ ಈ ರೀತಿ ತೀರ್ಪು ಕೊಟ್ಟಿದ್ದಾರೆ. ಮುಂದೆ ಜನರಿಗೆ ತಪ್ಪಿನ ಅರಿವಾಗಲಿದೆ' ಎಂದರು.

'ಈ ಬಾರಿ ಎಲ್ಲರೂ ಡಿ.ಕೆ. ಸುರೇಶ್ ಅವರನ್ನು ಗುರಿ ಮಾಡಿದ್ದರು. 24X7 ರಾಜಕಾರಣ ಮಾಡಿದವರು ಅವರು. ಅವರಂತೆ ಯಾರೂ ಕೆಲಸ ಮಾಡಿಲ್ಲ. ಜನ ಯಾಕೆ ಈ ನಿಲುವು ತೆಗೆದುಕೊಂಡರೋ ಗೊತ್ತಿಲ್ಲ' ಎಂದರು.

ರಾಜ್ಯಮಟ್ಟದ ಲೇಖನ ಸ್ಪರ್ಧೆ

ಬೆಂಗಳೂರು: ಡಾ.ಬಿ.ಆರ್.ಅಂಬೇಡ್ಕರ್ ಅವರ 133ನೇ ಜಯಂತಿ ಅಂಗವಾಗಿ 'ಎಲ್ಲರಿಗಾಗಿ ಅಂಬೇಡ್ಕರ್' ಎಂಬ ಶೀರ್ಷಿಕೆಯ ಅಡಿಯಲ್ಲಿ ಶೇಷಾದ್ರಿಪುರಂ ಸಂಜೆ ಕಾಲೇಜಿನ ಅಂಬೇಡ್ಕರ್ ಅಧ್ಯಯನ ಕೇಂದ್ರವು ಪದವಿ ವಿದ್ಯಾರ್ಥಿಗಳಿಗಾಗಿ ರಾಜ್ಯಮಟ್ಟದ ಲೇಖನ ಸ್ಪರ್ಧೆಯನ್ನು ಆಯೋಜಿಸಿದೆ.

ಲೇಖನಗಳನ್ನು ಜೂನ್ 30ರ ಒಳಗೆ godhoolikannadasangha@sedc.ac.in ಮೇಲ್ ಮಾಡಬೇಕು. ಪ್ರಾಂಶುಪಾಲರು, ಶೇಷಾದ್ರಿಪುರಂ ಸಂಜೆ ಕಾಲೇಜು, ನಂ-27, ನಾಗಪ್ಪ ಬೀದಿ, ಶೇಷಾದ್ರಿಪುರಂ, ಬೆಂಗಳೂರು-560020 ಇಲ್ಲಿಗೆ ತಲುಪುವಂತೆ ಅಂಚೆ ಮೂಲಕವೂ ಕಳುಹಿಸಬಹುದು.

ಲೇಖನದ ವಿಷಯಗಳು: ಅಂಬೇಡ್ಕರ್ ಚಿಂತನೆಗಳು ಹಾಗೂ ಸಾಮಾಜಿಕ ನ್ಯಾಯ, ಆರ್ಥಿಕ ವ್ಯವಸ್ಥೆ, ಕೃಷಿ, ವಾಣಿಜ್ಯ ವ್ಯವಹಾರ, ಯುವಜನತೆ, ಶಿಕ್ಷಣ, ಸಂವಿಧಾನ, ರಾಜಕೀಯ ವ್ಯವಸ್ಥೆ, ಮೀಸಲಾತಿ, ಸ್ತ್ರೀ ಸಬಲೀಕರಣ, ಅಧ್ಯಾತ್ಮ. ಈ ವಿಷಯಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಂಡು ಲೇಖನ ಸಿದ್ಧಪಡಿಸಿ ಕಳುಹಿಸಬೇಕು ಎಂದು ಅಂಬೇಡ್ಕರ್ ಅಧ್ಯಯನ ಕೇಂದ್ರದ ಸಂಚಾಲಕ ಸತ್ಯಮಂಗಲ ಮಹಾದೇವ, ಪ್ರಾಂಶುಪಾಲ ಎನ್.ಎಸ್. ಸತೀಶ್ ತಿಳಿಸಿದ್ದಾರೆ.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PERSONAL

Change of Name

CHANGE OF NAME
I, **MADHAVI MENON** Residing at #C-104, August park Apartments, 1st A Cross, Kaggadasapura, Behind C.A.S.D.I.C, C.V. Raman Nagar, Bangalore North, C.V. Raman Nagar P.O, Bangalore Dist, Karnataka-560093, have changed my name to **MADHAVI. S. MENON** vide affidavit dated 5.6.2024 before Notary A.R. Muneer Ahmed, Bangalore. Henceforth I shall be known **MADHAVI. S. MENON** only.

I, MANJULA B K W/o SHIVARAM A S., R/at No.77 Kalathur Layout Gangamma Circle Jalahalli Bangalore-560013 have changed my name to MANJULA A S, vide affidavit dated: 5/6/2024 Before Notary Kundan Babu.M Bangalore

I, SYED DAWOOD have changed my name as SYED BADESAB Vide affidavit dated 20/05/2024 before notary Mohammed Hussain. K, Bangalore

AUTOMOTIVE

2 / 3 Wheelers Selling

Autorickshaws

E-RICKSHAW CLEARANCE Sale in as is Condition, 7 numbers and spares. Closing Bussiness with Huge Discount. Area Summanahalli, Bengaluru. WhatsApp 9620869322.

BUSINESS

Business Offers

Business For Sale

UNISEX SALON and Spa for Sale at Kengeri, Fully furnished 1300 sqft. Contact: 9902948898/ 9069865258

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

CONNECT ಕ್ಲಾಸಿಫೈಡ್ಸ್

RENTAL PROPERTIES

Accommodation Available

Commercial

SPACE AVAILABLE for play school at Site No.4, MCH Layout, Jakkur, Bangalore-560064 If interested Contact: Sri K.Subba Rao 9945103589

Thanksgiving

Thank you St Expedite. I want to thank my beloved St. Expedite from the core of my Heart for listening to my prayer and accepting it. You have listened to my Heart's desires and fulfilled all of the wishes. Apologies for the delay.
- Jayashree

ನಗರದಲ್ಲಿ ಇಂದು

ಸನ್ಮಾನ ಕಾರ್ಯಕ್ರಮ, ವಿಶೇಷ ಉಪನ್ಯಾಸ: ಶಶಿಧರ ಶೆಟ್ಟಿ, ಅಧ್ಯಕ್ಷತೆ: ಜಯಕರ ಎಸ್.ಎಂ., ಉಪಸ್ಥಿತಿ: ಎನ್. ದಶರಥ್, ಸತೀಶ್ ಗೌಡ ಎನ್., ಆಯೋಜನೆ: ಬೆಂಗಳೂರು ವಿಶ್ವವಿದ್ಯಾಲಯದ ಕಾನೂನು ಕಾಲೇಜು ಮತ್ತು ಕಾನೂನು ಅಧ್ಯಯನ ವಿಭಾಗ, ಸ್ಥಳ: ವಿ.ಬಿ. ಕುಟಿನ್ಹೊ ಒಳಾಂಗಣ ಸಭಾಂಗಣ, ಜ್ಞಾನಭಾರತಿ ಆವರಣ, ಬೆಳಿಗ್ಗೆ 10

ಶನೈಶ್ಚರ ಸ್ವಾಮಿ ಜಯಂತಿ: ಮಹಾ ಬ್ರಹ್ಮ ಕಳಶ ಸ್ಥಾಪನೆ ಹಾಗೂ ಮಹಾ ಕುಂಭಾಭಿಷೇಕ, ಸಾನಿಧ್ಯ: ಆನಂದ ಗುರೂಜಿ, ಅತಿಥಿ: ದಿನೇಶ್ ಗುಂಡೂರಾವ್, ಆಯೋಜನೆ ಮತ್ತು ಸ್ಥಳ: ಶನಿದೇವರ ದೇವಾಲಯ ಮತ್ತು ಶ್ರೀರಾಮ ಕೃಷ್ಣ ಭಜನಾ ಮಂದಿರ, 2ನೇ ಅಡ್ಡರಸ್ತೆ, ಮುನೇಶ್ವರ ಬ್ಲಾಕ್, ಪ್ಯಾಲೇಸ್ ಗುಟ್ಟಹಳ್ಳಿ, ಬೆಳಿಗ್ಗೆ 11

‘ಉತ್ತರದ ಪ್ರಾಚೀನ ಸಾಮ್ರಾಜ್ಯಗಳಿಗೆ ಕನ್ನಡಿಗರ ಕೊಡುಗೆ’ ಕುರಿತು ಉಪನ್ಯಾಸ: ಪ್ರವೀಣ್ ಕುಮಾರ್.ಕೆ., ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ಹರಿನಾಮ ಸಂಕೀರ್ತನೆ: ಗಾಯನ: ಅಹಿಕಾ ನಾಗದೀಪ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, 1ನೇ ಮುಖ್ಯರಸ್ತೆ, ಪವಮಾನಪುರ, ಸಂಜೆ 7

ದಾಸರ ಪದಗಳ ಗಾಯನ: ಲಾವಣ್ಯ ವೆಂಕಟೇಶ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, 11ನೇ ಮುಖ್ಯರಸ್ತೆ, ಜಯನಗರ 5ನೇ ಬಡಾವಣೆ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.
nagaradalli_indu@prajavani.co.in

9ಕ್ಕೆ ನೇತ್ರ ತಪಾಸಣೆ ಉಚಿತ

ಬೆಂಗಳೂರು: ಸ್ನೇಹ ಸಮ್ಮಿಲನ ಫೌಂಡೇಷನ್ ಹಾಗೂ ಬೊಮ್ಮಸಂದ್ರದ ನಾರಾಯಣ ನೇತ್ರಾಲಯ ಜಂಟಿಯಾಗಿ ಇದೇ 9ರಂದು ಅತ್ತಿಬೆಲೆಯ ಕಲಾ ಸಂಗಮದಲ್ಲಿ (ಸೇಂಟ್ ಡೊಮಿನಿಕ್ಸ್ ಸ್ಕೂಲ್ ಸಮೀಪ) ನೇತ್ರ ಉಚಿತ ತಪಾಸಣೆ, ಶಸ್ತ್ರಚಿಕಿತ್ಸೆ ಮತ್ತು ಕನ್ನಡಕ ವಿತರಣಾ ಶಿಬಿರ ಹಮ್ಮಿಕೊಂಡಿದೆ.

ಬೆಳಿಗ್ಗೆ 8.30ರಿಂದ ಮಧ್ಯಾಹ್ನ 12.30ರವರೆಗೆ ಶಿಬಿರ ನಡೆಯಲಿದೆ.

ವಿವರಕ್ಕೆ 9845919905 ಅಥವಾ 9448684989ಕ್ಕೆ ಸಂಪರ್ಕಿಸಲು ಪ್ರಕಟಣೆಯಲ್ಲಿ ಮಾಹಿತಿ ನೀಡಲಾಗಿದೆ.

ಪಿಎಂ ಮೋದಿ ಐತಿಹಾಸಿಕ ಮೂರನೆಯ ಅವಧಿಗೆ ವಿಜೇತರಾಗಿದ್ದಾರೆ

ಆನೇಕಲ್ ತಾಲ್ಲೂಕಿನಲ್ಲಿ ನಡೆದಿದ್ದ ರೇವ್ ಪಾರ್ಟಿ

ಸಿಸಿಬಿ ಕಸ್ಟಡಿಗೆ ನಟಿ ಹೇಮಾ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಆನೇಕಲ್ ತಾಲ್ಲೂಕಿನ ಜಿ.ಆರ್.ಫಾರ್ಮ್ ಹೌಸ್‌ನಲ್ಲಿ ನಡೆದಿದ್ದ ರೇವ್ ಪಾರ್ಟಿಯಲ್ಲಿ ಮಾದಕ ವಸ್ತು ಸೇವನೆ ಹಾಗೂ ಪ್ರಕರಣದ ತನಿಖೆಯ ದಿಕ್ಕು ತಪ್ಪಿಸುವ ಉದ್ದೇಶದಿಂದ ವಿಡಿಯೊ ಮಾಡಿ ಹರಿಬಿಟ್ಟ ಆರೋಪದಲ್ಲಿ ಬಂಧನಕ್ಕೆ ಒಳಗಾಗಿರುವ ತೆಲುಗು ನಟಿ ಹೇಮಾ ಅವರನ್ನು ಹೆಚ್ಚಿನ ವಿಚಾರಣೆಗಾಗಿ ಸಿಸಿಬಿ ಪೊಲೀಸರು ತಮ್ಮ ವಶಕ್ಕೆ ಪಡೆದುಕೊಂಡಿದ್ದಾರೆ.

ರೇವ್ ಪಾರ್ಟಿ ಮೇಲೆ ಸಿಸಿಬಿ ಪೊಲೀಸರು ದಾಳಿ ನಡೆಸಿದ್ದರು. ನಟಿ ಹೇಮಾ ಪಾರ್ಟಿಯಲ್ಲಿ ಪಾಲ್ಗೊಂಡಿದ್ದು ತನಿಖೆಯಿಂದ ಗೊತ್ತಾಗಿತ್ತು. ವಿಚಾರಣೆಗೆ ಹಾಜರಾಗುವಂತೆ ಸಿಸಿಬಿ ಎರಡು ಬಾರಿ ನೋಟಿಸ್ ಜಾರಿ ಮಾಡಿದ್ದರೂ ಹೇಮಾ ವಿಚಾರಣೆಗೆ ಗೈರಾಗಿದ್ದರು. ಅದಾದ ಮೇಲೆ ಜೂನ್ 3ರಂದು ಸಿಸಿಬಿ ಕಚೇರಿಗೆ ವಿಚಾರಣೆಗೆ ಹಾಜರಾಗಿದ್ದರು. ನಟಿ ಹೇಮಾ ಗೊಂದಲದ ಹೇಳಿಕೆ ಹಾಗೂ ದಾಳಿ ಸಂದರ್ಭದಲ್ಲಿ ಸುಳ್ಳು ಹೆಸರು ಹಾಗೂ ಮೊಬೈಲ್ ನೀಡಿದ ಆರೋಪದಲ್ಲಿ ಬಂಧಿಸಿ, ಪರಪ್ಪನ ಅಗ್ರಹಾರ ಜೈಲಿಗೆ ಕಳುಹಿಸಲಾಗಿತ್ತು.

ನಟಿ ಹೇಮಾ

ಬುಧವಾರ ಆನೇಕಲ್‌ನ ಕೋರ್ಟ್‌ಗೆ ಹಾಜರುಪಡಿಸಿ ಆರೋಪಿಯನ್ನು ಮೂರು ದಿನ ಸಿಸಿಬಿ ವಶಕ್ಕೆ ನೀಡುವಂತೆ ತನಿಖಾಧಿಕಾರಿಗಳು ಮನವಿ ಮಾಡಿದ್ದರು. ನ್ಯಾಯಾಲಯವು 24 ಗಂಟೆ ವಿಚಾರಣೆಗೆ ಅವಕಾಶ ನೀಡಿದೆ. ಗುರುವಾರ ಸಂಜೆ 5 ಗಂಟೆಗೆ ಮತ್ತೆ ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗುವುದು ಎಂದು ಸಿಸಿಬಿ ಮೂಲಗಳು ಹೇಳಿವೆ.

ತಂದೆಯೊಂದಿಗೆ ಗಲಾಟೆ: ಪುತ್ರನ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪುಟ್ಟೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಜರಗನಹಳ್ಳಿಯ ಮನೆಯೊಂದರಲ್ಲಿ ನಡೆದ ಗಲಾಟೆ ವೇಳೆ ಐ.ಟಿ ಕಂಪನಿ ಉದ್ಯೋಗಿ ಯಶವಂತ್ (23) ಅವರನ್ನು ಚಾಕುವಿನಿಂದ ಇರಿದು ಕೊಲೆ ಮಾಡಲಾಗಿದೆ.

ಯಶವಂತ್

‘ಕೌಟುಂಬಿಕ ವಿಚಾರಕ್ಕೆ ಮನೆಯಲ್ಲಿ ತಂದೆ ಹಾಗೂ ತಾಯಿ ನಡುವೆ ನಿತ್ಯ ಗಲಾಟೆ ನಡೆಯುತ್ತಿತ್ತು. ಮಂಗಳವಾರ ರಾತ್ರಿಯೂ ತಂದೆ ಬಸವರಾಜ್ (53) ಹಾಗೂ ತಾಯಿ ಭಾಗ್ಯಲಕ್ಷ್ಮಿ ಮಧ್ಯೆ ಜಗಳ ಆಗುತ್ತಿದ್ದ ವೇಳೆ ಯಶವಂತ್ ಮಧ್ಯಪ್ರವೇಶಿಸಿ ತಂದೆಗೆ ಬುದ್ಧಿಮಾತು ಹೇಳಿದ್ದರು.

’ನಾನು ಉದ್ಯೋಗ ಮಾಡಿಕೊಂಡು ಮನೆಗೆ ಬೇಕಾದ ಅಗತ್ಯ ಸಾಮಗ್ರಿ ತಂದು ಹಾಕುತ್ತಿದ್ದೇನೆ. ಕುಟುಂಬದ ಉದ್ದಾರಕ್ಕೆ ಶ್ರಮ ಹಾಕುತ್ತಿದ್ದೇನೆ. ಈ ರೀತಿ ಜಗಳದಿಂದ ಕಿರಿಕಿರಿ ಉಂಟಾಗುತ್ತಿದೆ ಎಂದು ಯಶವಂತ್ ಅವರು ತಂದೆಗೆ ಹೇಳಿದ್ದರು. ಆದರೂ ಕೇಳದೆ ಜಗಳ ಮುಂದುವರಿಸಿದ್ದರು. ಗಲಾಟೆ ವಿಕೋಪಕ್ಕೆ ತಿರುಗಿ, ಬಸವರಾಜ್ ಅವರು ಚಾಕುವಿನಿಂದ ಇರಿದಿದ್ದಾರೆ. ಬಲವಾದ ಪೆಟ್ಟು ಬಿದ್ದಿದ್ದರಿಂದ ಯಶವಂತ್ ಅವರು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಬಸವರಾಜ್ ಲಾರಿ ಚಾಲಕರಾಗಿ ಕೆಲಸ ಮಾಡುತ್ತಿದ್ದರು. ಅವರಿಗೆ ನಿತ್ಯ ಮದ್ಯ ಸೇವಿಸುವ ಅಭ್ಯಾಸವಿತ್ತು. ಭಾಗ್ಯಲಕ್ಷ್ಮಿ ಅವರು ಪತಿಯ ವಿರುದ್ಧ ದೂರು ನೀಡಿದ್ದು, ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ. ಬಸವರಾಜ್ ಅವರು ತಲೆಮರೆಸಿಕೊಂಡಿದ್ದಾರೆ. ಹುಡುಕಾಟ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

ಕುದುರೆ ರೇಸ್ ಬೆಟ್ಟಿಂಗ್: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುದುರೆ ರೇಸ್ ಬೆಟ್ಟಿಂಗ್‌ನಲ್ಲಿ ತೊಡಗಿದ್ದ ಆರೋಪಿ ವೀರೇಂದ್ರಕುಮಾರ್ ಭಂಡಾರಿ (41) ಅವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

‘ವಿಜಯನಗರದ ಆರ್.ಪಿ.ಸಿ ಬಡಾವಣೆಯ ವೀರೇಂದ್ರಕುಮಾರ್, ಪೊಲೀಸ್ ಭಾತ್ಮಿದಾರನೆಂದು ಹೇಳಿಕೊಂಡು ಸುತ್ತಾಡುತ್ತಿದ್ದ. ಕುದುರೆ ರೇಸ್ ಬೆಟ್ಟಿಂಗ್ ಪ್ರಕರಣದಲ್ಲಿ ಈತನನ್ನು ಸೆರೆ ಹಿಡಿಯಲಾಗಿದೆ. ₹ 55,800 ನಗದು ಹಾಗೂ ಎರಡು ಮೊಬೈಲ್ ಜಪ್ತಿ ಮಾಡಲಾಗಿದೆ’ ಎಂದು ಸಿಸಿಬಿ ಪೊಲೀಸರು ಹೇಳಿದರು.

‘ಪೊಲೀಸ್ ಹೆಸರು ಹೇಳಿಕೊಂಡು ಆರೋಪಿ ಹಲವು ಅಕ್ರಮ ಚಟುವಟಿಕೆಯಲ್ಲಿ ತೊಡಗಿದ್ದನೆಂಬ ಮಾಹಿತಿ ಇದ್ದು, ಪರಿಶೀಲಿಸಲಾಗುತ್ತಿದೆ’ ಎಂದು ಹೇಳಿದರು.

‘ಜೂನ್ 1ರಂದು ಊಟಿಯಲ್ಲಿ ಕುದುರೆ ರೇಸ್ ನಡೆದಿತ್ತು. ಈ ರೇಸ್ ಮೇಲೆಯೇ ಆರೋಪಿ ಬೆಟ್ಟಿಂಗ್ ನಡೆಸುತ್ತಿದ್ದ. ಮೊಬೈಲ್‌ನಲ್ಲಿ ಹಲವು ಆ್ಯಪ್ ಇನ್‌ಸ್ಟಾಲ್ ಮಾಡಿಕೊಂಡಿದ್ದ ಈತ, ಅದರ ಸಹಾಯದಿಂದ ಜನರನ್ನು ಸಂಪರ್ಕಿಸಿ ಹಣ ಕಟ್ಟಿಸಿಕೊಳ್ಳುತ್ತಿದ್ದ. ಈ ಬಗ್ಗೆ ಮಾಹಿತಿ ಲಭ್ಯವಾಗುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಮಾಧವನಗರದ ಕ್ರೆಸೆಂಟ್ ರಸ್ತೆಯಲ್ಲಿ ಆರೋಪಿಯನ್ನು ಬಂಧಿಸಲಾಗಿದೆ’ ಎಂದು ತಿಳಿಸಿದರು.

ಸುಧಾ, ಮಯೂರ ಓದಿರಿ

KLE ACADEMY OF HIGHER EDUCATION AND RESEARCH, BELAGAVI
(Deemed-to-be-University established u/s 3 & 12B of the UGC Act, 1956)
Accredited at A+ Grade by NAAC (3rd Cycle) | Placed in Category 'A' by MoE (GoI)
BELAGAVI - 590010, KARNATAKA | kledeemeduniversity.edu.in
KLE EMPOWERING PROFESSIONALS

Enrol for skill-based courses
Explore endless possibilities

ADMISSIONS OPEN 2024-25

BPT
BACHELOR OF PHYSIOTHERAPY
@ KLE Institute of Physiotherapy, Belagavi. Ph: 0831-2473906
@ KLE College of Physiotherapy, Hubballi. Ph: 9036981180

B.Pharm
BACHELOR OF PHARMACY

Pharm.D
DOCTOR OF PHARMACY
@ KLE College of Pharmacy, Belagavi. Ph: 0831-2471399
@ KLE College of Pharmacy, Hubballi. Ph: 0836-2373174
@ KLE College of Pharmacy, Bengaluru. Ph: 080-23325611

Scan here for more info

For further details
www.kledeemeduniversity.edu.in
0831- 2444 444

MEDICAL | DENTAL | PHARMACY | AYURVEDA | NURSING | PHYSIOTHERAPY | HOMOEOPATHY

MBBS
Ministry Of Health Of Russia
SMOLENSK STATE MEDICAL UNIVERSITY, RUSSIA
Invites Indian students for direct Government Admissions
Recognized by India, WHO, USA & UK, Min. Qual. 50% in XII in PCB
Satisfies all requirements of NMC of India

UNIVERSITY - 104 years old University, Smolensk is 380 km west of Moscow, Very high standards of education, strict disciplinary system. **2050** Indian students (**900** Girls) studying, **330** getting degree in **2024.** Duration 6 years including internship and License. English Medium in all years, Closed type campus system, **8** attached hospitals (**9000** Beds).
MCI SCREENING TEST – Our graduates of **2008** to **2023** have given **BEST** results among graduates of all foreign medical colleges (Official web sites of Indian Embassy, Moscow and NBE conducting Screening Test confirm this).
SPECIAL HOSTELS ONLY FOR INDIAN STUDENTS WITH INDIAN MESS
Fee (Tuition+Hostel+Med.Ins.) – **USD 6000** (Approx. Rs. 4,94,000/-) per year and one time payment of Rs.1,50,000/- (By Bank Draft only) which includes – Admission procedure, invitation letter, student visa, air ticket Delhi - Moscow.
Scholarship to all Indian students. Bank loans from Indian banks are available.
Contact Foreign advisor to Chancellor: Dr.Alok Aeron+79605805555(Russia)
Official web site: www.sgmu.info
DM us on insta: @sgmu.info
Admission details: admission.sgmu.live
INFORMATION CENTERS (Parents of Students or Our Graduates):
Hubli-Dharwad & Belgavi: Dr. Suchita Halli - 9916187559
Bellary: Mr. N. Thirumala Reddy – 9441071440

KLE SOCIETY
BELAGAVI, KARNATAKA, INDIA
Tel: 0831-2404040 | Web : klesociety.org
310 Institutions
1,38,000+ Students
18,000+ Faculty
Since 1916

KLE'S INDEPENDENT PU COLLEGE
NAGARABHAVI, BENGALURU - 72

WANTED
Applications are invited for the post of Teaching Staff Requirement in the following subjects

SUBJECT	NO. OF STAFF REQUIRED
BUSINESS STUDIES	02
STATISTICS	01
ECONOMICS	02
ACCOUNTANCY	01
ENGLISH	02
AUDITORIUM TECHNICIAN	01
PHYSICAL DIRECTOR	01

QUALIFICATION
- **Teaching staff** – M.A. / M.Com. / M.Sc. with minimum 60% marks
- **Auditorium Technician** – Technical diploma or degree in a related field
- **English Lecturer** – MA in English with B.Ed
- **Physical Director** – Master degree in Physical education

Send updated resume to the mail Id
info@klepunagarbhavi.edu.in
on or before **8th June, 2024 before 05.00 PM.**

FOR MORE DETAILS CONTACT - 9632707222

Belagavi
Date : 06/06/2024

Dr. Prabhakar Kore
Chairman, KLE Society, Belagavi

Flipkart Offer
Discount Upto ₹2000

Hero MotoCorp Ltd. Regd. Office: The Grand Plaza, Plot No.2, Nelson Mandela Road, Vasant Kunj Phase - II, New Delhi - 110070, India. | CIN: L35911DL1984PLC017354 | For further information, contact your nearest Hero MotoCorp authorised outlet or visit us on www.HeroMotoCorp.com. Accessories and features shown may not be a part of standard fitment. Always wear a helmet while riding a two-wheeler. ^^Based on offers from empaneled dealers on Wheels of Trust platform. ~~Finance scheme is at the sole discretion of the financier, subject to its respective T&Cs. Terms and Conditions apply.

Exchange Powered By Wheels of Trust^^
SCAN FOR BEST RESALE VALUE

Authorised Dealers: Bengaluru, Peenya: Sai Hero, Ph: 9289922830, **Magadi Road: Poorna Hero**, Ph: 9289923212, **Banashankari: Sai Hero**, Ph: 9289922476, **Banaswadi: Bhagath Hero**, Ph: 9289922738, **Hosur Road: RT Krishna Hero**, Ph: 9289923177, **Byatarayanapura: Bimal Hero**, Ph: 9289922863, **Lalbagh Road:** Prakash Hero, Ph: 9289922117, **Rajaji Nagar: Max Hero**, Ph: 9289923023, **Marathalli: Vaayuratha Hero**, Ph: 9289923811, **Kamakshipalya: Poorna Motors**, Ph: 9606922534, **JP Nagar: Sai Hero**, Ph: 99002 36280, **Kanakpura Road: Sai Hero**, 8904677394, **Hoskote: Bhagath Hero**, Ph: 8884600051, **K R Puram: Bhagath Hero**, Ph: 7829488706, **Jigani: Rt Krishna Hero**, Ph: 8762860999, **RT Nagar: Bimal Hero**, Ph: 9535327710, **Doddaballapura: Bimal Hero**, 9742202125, **Tumkur: Sai Hero**, Ph: 9289922986, **B.H. Road: Sai Hero**, Ph, 7022752841, **Tiptur: Sai Hero Ph**, 9164840456, **Kunigal: Sai Hero**, Ph: 7022752858, **Kolar: Sai Balaji Hero**, Ph, 9821745024. **Associate Dealer: Madiwala:** 9731660639, **Banashankari 3rd Stage:** 9513353864, **Bannerghatta Road:** 41209619, **Kengeri:** 9739275523, **Yelahanka:** 28462524, 9341025589, **Mysore Road:** 9611997733, **Devanahalli,** 9964560599, **Kanakapura,** 9880212346, **Bagepalli:** 282828, **Srinivaspur:** 9738504002, **Sidlaghatta:** 254827, **Nelamangala:** 27723395, **Pavagada:** 9740324639, **Madhugiri:** 9972278989, **Vijayapura:** 9449619920, **Sira:** 9448417393, **Chandapura:** 9481329064 **Also Available At: Dunnasandra:** 8310166369, **HSR Layout:** 7428893265, **Mathikere:** 9035027951, **Domlur:** 7353919910- **J. P. Nagar:** 9035024274, **RT Nagar:** 9535327710, **Attibele:** 8050609104, **B Narayanapura:** 9945472149, **Varthur:** 9900877227, **Papareddypalya:** 9916678309, **Anekal:** 9739519252, **Konankunte:** 9886122251, **Sarjapur Main Road:** 8762860999, **Bidadi:** 9844767719, **Ramanagara:** 9663399909, **Jigani:** 9986498884, **Chikkanayakanahalli:** 9880807399, **Turuvekere:** 9448403205, **Koratagere:** 9731713711, **Peresandra:** 9901502049, **Vidyaranyapura:** 9606934533,
For Buy/sell/exchange Old Any Vehicle Contact **VV Puram, Bengaluru: Olety Sai Hero Sure:** 98450 74491.

ರಾಜಧಾನಿಯಲ್ಲಿ ಪರಿಸರ ಕಳಕಳಿ

ಭಾರತೀಯ ಸಮಾಜ ಸೇವಾ ಟ್ರಸ್ಟ್ ನಿಡುಮಾಮಿಡಿ ಮಠದಲ್ಲಿ ಆಯೋಜಿಸಿದ್ದ 'ವಾರ್ಷಿಕ ಪರಿಸರ ಸಂರಕ್ಷಣಾ ಸೇವಾ ಪ್ರಶಸ್ತಿ ಪ್ರದಾನ' ಕಾರ್ಯಕ್ರಮಕ್ಕೆ ಸಸಿ ನೆಡುವ ಮೂಲಕ ಚಾಲನೆ ನೀಡಲಾಯಿತು. ನಿಡುಮಾಮಡಿ ಮಠದ ವೀರಭದ್ರ ಚನ್ನಮಲ್ಲ ಸ್ವಾಮೀಜಿ, ಸಾಹಿತಿ ಚಂದ್ರಶೇಖರ ಕಂಬಾರ, ಜಾನಪದ ವಿದ್ವಾಂಸ ಗೊ.ರು. ಚನ್ನಬಸಪ್ಪ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸಿ. ಸೋಮಶೇಖರ್, ಟ್ರಸ್ಟ್‌ನ ಅಧ್ಯಕ್ಷ ಶಿವಮಲ್ಲು ಭಾಗವಹಿಸಿದ್ದರು

ವಿಶ್ವ ಪರಿಸರ ದಿನದ ಅಂಗವಾಗಿ ಆಡುಗೋಡಿಯಲ್ಲಿರುವ ಸಿಎಆರ್ (ನಗರ ಸಶಸ್ತ್ರ ಮೀಸಲು ಪಡೆ) ದಕ್ಷಿಣ ವಿಭಾಗದ ಮೈದಾನದಲ್ಲಿ ಬಿ. ದಯಾನಂದ, ಎ.ಎನ್. ಯಲ್ಲಪ್ಪರೆಡ್ಡಿ ಅವರು ಸಸಿ ನೆಟ್ಟರು

ಪ್ರಜಾವಾಣಿ ಚಿತ್ರ

ಸ್ವಯಂ ಜಾಗೃತಿ ಸೇವಾ ಟ್ರಸ್ಟ್‌ನ ಸದಸ್ಯರು ಹಾಗೂ ವಿದ್ಯಾರ್ಥಿಗಳು ನಾಗರಬಾವಿಯ ಮಾನಸನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸಸಿ ನೆಟ್ಟರು. ಟ್ರಸ್ಟ್‌ನ ರಾಜ್ಯ ಘಟಕದ ಅಧ್ಯಕ್ಷ ಅಜಯ್ ಕುಮಾರ್ ಭಾಗವಹಿಸಿದ್ದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ಪರಿಸರ ದಿನದ ಅಂಗವಾಗಿ ನಗರದ ವಿವಿಧೆಡೆ ಸಸಿ ನೆಡುವ ಮತ್ತು ಪರಿಸರ ಜಾಗೃತಿ ಮೂಡಿಸುವ ಕಾರ್ಯಕ್ರಮಗಳು ಬುಧವಾರ ನಡೆದವು.

ವಿವಿಧ ಸಂಘ–ಸಂಸ್ಥೆಗಳು, ಶೈಕ್ಷಣಿಕ ಸಂಸ್ಥೆಗಳು, ಉದ್ಯಮಗಳು ಹಸಿರು ಕಾಳಜಿ ಮೂಡಿಸುವ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದವು.

ಶಿಲ್ಪಾ ಫೌಂಡೇಷನ್ ಸಂಸ್ಥೆಯು ವಿಷನ್ ನೆಟ್ ಮತ್ತು ಸಾಫ್ಟ್ ಟೆಕ್ ಇಂಡಿಯಾ ಸಹಯೋಗದಲ್ಲಿ ಪರಿಸರವಾದಿ ಪ್ರಕೃತಿ ಪ್ರಸನ್ನ ಅವರ ನೇತೃತ್ವದಲ್ಲಿ 'ಭವಿಷ್ಯದ ನಾಳೆಗಳಿಗಾಗಿ' ಟಾಟಾನಗರದಲ್ಲಿ ಸಸಿಗಳನ್ನು ನೆಡುವ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಯಿತು.

ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಆವರಣದಲ್ಲಿ ಗಿಡ ನೆಡುವ ಮೂಲಕ ಪರಿಸರ ದಿನಾಚರಣೆ ಮಾಡಲಾಯಿತು. ಸಂಸ್ಥೆಯ ನಿರ್ದೇಶಕ ಡಾ.ಕೆ.ಎಸ್. ರವೀಂದ್ರನಾಥ್ ಭಾಗವಹಿಸಿದ್ದರು.

ಹೃದಯ ಸ್ಪರ್ಶ ಟ್ರಸ್ಟ್‌ನಿಂದ ನಗರದ ಅಂಬೇಡ್ಕರ್ ಕ್ರೀಡಾಂಗಣದಲ್ಲಿ ವಿಶ್ವ ಪರಿಸರ ದಿನ ಆಚರಿಸಲಾಯಿತು. ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ ಭಾಗವಹಿಸಿ 'ಪರಿಸರ ರಕ್ಷಣೆಗೆ ಸಾರ್ವಜನಿಕರು ಕೈ ಜೋಡಿಸಬೇಕು' ಎಂದರು.

ಸ್ವಯಂ ಜಾಗೃತಿ ಸೇವಾ ಟ್ರಸ್ಟ್ ವತಿಯಿಂದ ನಾಗರಬಾವಿಯ ಮಾನಸನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಗಿಡ ನೆಡುವ ಮೂಲಕ ವಿಶ್ವ ಪರಿಸರ ದಿನಾಚರಣೆ ಆಚರಿಸಲಾಯಿತು.

ವಿಶ್ವ ಪರಿಸರ ದಿನದ ಅಂಗವಾಗಿ ಬಿಎಂಟಿಸಿಯ ಮಾಹಿತಿ ತಂತ್ರಜ್ಞಾನ ನಿರ್ದೇಶಕಿ ಶಿಲ್ಪಾ ಎಂ., ಅವರು ಪೀಣ್ಯ ಘಟಕ 9ರಲ್ಲಿ ಆವರಣದಲ್ಲಿ ಸಸಿ ನೆಟ್ಟರು. ಉತ್ತಮ ಕಾರ್ಯ, ಶಿಸ್ತುಬದ್ಧ ಸಮವಸ್ತ್ರ ಧರಿಸಿದ ಚಾಲನಾ ಸಿಬ್ಬಂದಿಗೆ ಪ್ರಶಸ್ತಿ ಪತ್ರ ಹಾಗೂ ನಗದು ಬಹುಮಾನ ನೀಡಿ ಸನ್ಮಾನಿಸಲಾಯಿತು.

ಪ್ರಶಸ್ತಿ ಪ್ರದಾನ: ವಿಶ್ವ ಪರಿಸರ ದಿನದ ಅಂಗವಾಗಿ ಭಾರತೀಯ ಸಮಾಜ ಸೇವಾ ಟ್ರಸ್ಟ್ ವತಿಯಿಂದ ನಿಡುಮಾಮಿಡಿ ಮಠದಲ್ಲಿ ಆಯೋಜಿಸಿದ್ದ 'ವಾರ್ಷಿಕ ಪರಿಸರ ಸಂರಕ್ಷಣಾ ಸೇವಾ ಪ್ರಶಸ್ತಿ ಪ್ರದಾನ' ಕಾರ್ಯಕ್ರಮಕ್ಕೆ ಸಸಿ ನೆಡುವ ಮೂಲಕ ಬುಧವಾರ ಚಾಲನೆ ನೀಡಲಾಯಿತು. ಪರಿಸರ, ಶೈಕ್ಷಣಿಕ, ಸಾಂಸ್ಕೃತಿಕ, ಸಾಮಾಜಿಕ, ಕ್ರೀಡಾ, ವೃಕ್ಷ ಹಾಗೂ ಭಜನಾ ವಿಭಾಗಗಳಲ್ಲಿ ಸಾಧನೆ ಮಾಡಿದವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ವಿಶ್ವ ಪರಿಸರ ದಿನದ ಅಂಗವಾಗಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ ಕುಲಪತಿ ಎಸ್.ವಿ. ಸುರೇಶ ಅವರು ಸಸಿ ನೆಡುವ ಮೂಲಕ ಚಾಲನೆ ನೀಡಿದರು. 'ಹವಾಮಾನ ವೈಪರೀತ್ಯದಿಂದ ನಾವೆಲ್ಲರೂ ಈ ಸುಡುಬಿಸಿಲನ್ನು ಕಾಣುತ್ತಿದ್ದೇವೆ. ಹೀಗಾಗಿ ಪರಿಸರವನ್ನು ಉಳಿಸಿ, ಬೆಳೆಸಿಕೊಂಡು ಹೋಗುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯ. ಶಾಲಾ ಕಾಲೇಜುಗಳಲ್ಲಿ ದಿನದಲ್ಲಿ ಒಂದು ಗಂಟೆಯಾದರೂ ಪರಿಸರ ಸಂರಕ್ಷಣೆಯ ಕುರಿತು ಪಾಠ ಮಾಡಬೇಕು' ಎಂದರು.

ಜಯನಗರದಲ್ಲಿ ಬಾಂಧವ ನಾಗರಾಜು ಅವರು ಶಾಲಾ ಮಕ್ಕಳೊಂದಿಗೆ ಸಸಿ ನೆಟ್ಟರು

ವಿಶ್ವ ಪರಿಸರ ದಿನ

ಸಸಿ ನೆಡುವ ವಿಶೇಷ ಅಭಿಯಾನ

ಬೆಂಗಳೂರು: ಬೆಂಗಳೂರು ಕಮಿಷನರೇಟ್ ವ್ಯಾಪ್ತಿಯಲ್ಲಿ ಒಂದು ಕೋಟಿ ಸಸಿ ನೆಡಲು ಪೊಲೀಸರು ವಿಶೇಷ ಅಭಿಯಾನಕ್ಕೆ ಆಡುಗೋಡಿಯಲ್ಲಿರುವ ಸಿಎಆರ್ (ನಗರ ಸಶಸ್ತ್ರ ಮೀಸಲು ಪಡೆ) ದಕ್ಷಿಣ ವಿಭಾಗದ ಮೈದಾನದಲ್ಲಿ ಬುಧವಾರ ಚಾಲನೆ ನೀಡಲಾಯಿತು.

ವಿಶ್ವ ಪರಿಸರ ದಿನದ ಅಂಗವಾಗಿ ಗೋ ಗ್ರೀನ್ ರೆವೆಲ್ಯೂಷನ್ ಸಂಘಟನೆ ಸಹಯೋಗದಲ್ಲಿ ಪೊಲೀಸರು ಈ ಅಭಿಯಾನ ರೂಪಿಸಿದ್ದಾರೆ. ಪೊಲೀಸ್ ಠಾಣೆಗಳು, ಪೊಲೀಸ್ ವಸತಿ ಗೃಹಗಳ ಆವರಣ ಹಾಗೂ ಇತರೆ ಸಾರ್ವಜನಿಕ ಸ್ಥಳಗಳಲ್ಲಿ ಸಸಿ ನೆಡುವ ಗುರಿ ಇದೆ ಎಂದು ಪೊಲೀಸ್ ಕಮಿಷನರ್ ಬಿ. ದಯಾನಂದ್ ಹೇಳಿದರು. ಪರಿಸರ ತಜ್ಞ ಎ.ಎನ್. ಯಲ್ಲಪ್ಪರೆಡ್ಡಿ ಭಾಗವಹಿಸಿದ್ದರು.

ಆರ್ಟ್ ಆಫ್ ಲಿವಿಂಗ್ ಸಂಸ್ಥೆಯಲ್ಲಿ ಶ್ರೀಶ್ರೀ ರವಿಶಂಕರ ಗುರೂಜಿ ಅವರು ಸಸಿ ನೆಟ್ಟರು

ದೇಶದಾದ್ಯಂತ 1 ಕೋಟಿ ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ಪರಿಸರ ದಿನದ ಅಂಗವಾಗಿ ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ ಆವರಣದಲ್ಲಿ ಶ್ರೀಶ್ರೀ ರವಿಶಂಕರ್ ಗುರೂಜಿ ಅವರು ಸಸಿ ನೆಡುವುದರ ಮೂಲಕ ದೇಶದಾದ್ಯಂತ 1 ಕೋಟಿ ಸಸಿಗಳನ್ನು ನೆಡುವ ಕಾರ್ಯಕ್ರಮಕ್ಕೆ ಬುಧವಾರ ಚಾಲನೆ ನೀಡಿದರು.

ಶ್ರೀಶ್ರೀ ರವಿಶಂಕರ ಗುರೂಜಿ, 'ಸಂಸ್ಥೆಯ ವತಿಯಿಂದ ದೇಶದ 22 ರಾಜ್ಯಗಳಲ್ಲಿ 2,300 ಸ್ವಯಂ ಸೇವಕರು ಹಾಗೂ ಸಂಸ್ಥೆಯ ಶಿಕ್ಷಕರ ಸಹಯೋಗದಲ್ಲಿ 1 ಕೋಟಿ ಸಸಿಗಳನ್ನು ನೆಡಲಾಗುವುದು. ಇದರಲ್ಲಿ ಸಾವಿರಾರು ರೈತರು ತಮ್ಮ ತೋಟದಲ್ಲಿ ಬೆಳೆದ ಗಿಡಗಳನ್ನು ಕೊಡುಗೆಯಾಗಿ ನೀಡಲಿದ್ದಾರೆ. ಇಂತಹ ರೈತರಿಗೆ ಆರ್ಟ್ ಆಫ್ ಲಿವಿಂಗ್ ಸಂಸ್ಥೆಯು ಹಣ್ಣಿನ ಗಿಡಗಳನ್ನು ನೀಡಲಿದ್ದು, ಇದರಿಂದ ರೈತರಿಗೆ ಆರ್ಥಿಕವಾಗಿ ಸಹಾಯವಾಗಲಿದೆ' ಎಂದು ತಿಳಿಸಿದರು.

'ರಾಜ್ಯದಲ್ಲಿ 4 ಲಕ್ಷ ಸಸಿಗಳನ್ನು ನೆಡಲಿದ್ದು, ವಿಶ್ವ ಹವಾಮಾನ ದಿನದ ಅಂಗವಾಗಿ 'ಲ್ಯಾಂಡ್ ರೆಸ್ಟೊರೇಷನ್, ಡೆಸರ್ಟಿಫಿಕೇಷನ್ ಆ್ಯಂಡ್ ಡ್ರಾಟ್ ರೆಸೀಲಿಯೆನ್ಸ್' ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅಂತರ್ಜಲಮಟ್ಟ ಹೆಚ್ಚಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಪರಿಸರ ಸಂರಕ್ಷಣೆಯ ಜೊತೆಗೆ ಸಾಮಾಜಿಕ ಸಬಲೀಕರಣ ಒಳಗೊಂಡಿರುವ 'ಸೀಡ್ ರಾಖಿ ಯೋಜನೆ'ಯನ್ನು ಆರಂಭಿಸಲಿದೆ. ಇದರಿಂದ, ಬುಡಕಟ್ಟು ಜನಾಂಗದ ಮಹಿಳೆಯರಿಗೆ ಲಾಭವಾಗಲಿದೆ' ಎಂದು ಹೇಳಿದರು.

'ಪ್ರಾಕೃತಿಕ ಕೃಷಿಗೆ ಮರಳಿ ಬಂದಿರುವ ಅನೇಕ ರೈತರು ಬಹು ಬೆಳೆ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕು. ಟೊಮೆಟೊ, ಕುಂಬಳಕಾಯಿ, ಸೌತೇಕಾಯಿ ಸೇರಿದಂತೆ ಅನೇಕ ತರಕಾರಿಗಳನ್ನು ಮನೆಯಲ್ಲಿಯೇ ಬೆಳೆದುಕೊಳ್ಳಬೇಕು' ಎಂದು ಸಲಹೆ ನೀಡಿದರು.

ಪಾಸ್‌ಪೋರ್ಟ್ ಪರಿಶೀಲನೆಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಟ್ಟುಗೋಲು ಹಾಕಿಕೊಂಡಿರುವ ಪಾಸ್‌ಪೋರ್ಟ್ ಹಿಂದಿರುಗಿಸಲು ಕೇಂದ್ರ ಸರ್ಕಾರಕ್ಕೆ ನಿರ್ದೇಶಿಸಬೇಕು ಎಂದು ಕೋರಿರುವ ಶುಶ್ರೂಷಕಿಯ ಮನವಿಯನ್ನು ನಾಲ್ಕು ವಾರಗಳಲ್ಲಿ ಪರಿಗಣಿಸಿ ನಿರ್ಧಾರ ತಿಳಿಸಿ' ಎಂದು ಹೈಕೋರ್ಟ್, ವಿದೇಶಾಂಗ ಸಚಿವಾಲಯಕ್ಕೆ ನಿರ್ದೇಶಿಸಿದೆ.

ಯೆಮೆನ್‌ನಲ್ಲಿನ ನರ್ಸ್ ಶೇನಿ ಜಾಯ್ ಪಾಸ್‌ಪೋರ್ಟ್ ಅನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿತ್ತು.

ಯಾವ ಸಚಿವರ ತಲೆದಂಡವೂ ಆಗುವುದಿಲ್ಲ: ಮುನಿಯಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲೋಕಸಭೆ ಚುನಾವಣೆ ಫಲಿತಾಂಶದ ಕಾರಣಕ್ಕೆ ರಾಜ್ಯದಲ್ಲಿಸಚಿವರಲ್ಲಿ ಯಾರ ತಲೆದಂಡವೂ ಆಗುವುದಿಲ್ಲ. ಯಾಕೆಂದರೆ, ಕಾಂಗ್ರೆಸ್ ಪಕ್ಷದ ಮತ ಕಡಿಮೆ ಆಗಿಲ್ಲ' ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಹೇಳಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ಬಿಜೆಪಿ- ಜೆಡಿಎಸ್ ಒಂದಾಗಿದ್ದರಿಂದ ಹಳೆ ಮೈಸೂರು ಭಾಗದಲ್ಲಿ ನಮಗೆ (ಕಾಂಗ್ರೆಸ್) ಸೋಲಾಗಿದೆ. ಅದನ್ನು ನಾವು ಒಪ್ಪಿಕೊಳ್ಳಬೇಕು' ಎಂದರು.

ಪಕ್ಷದಲ್ಲಿ ಉನ್ನತಾಧಿಕಾರ ಸಮಿತಿ ರಚಿಸುವ ಕುರಿತು ಪ್ರತಿಕ್ರಿಯಿಸಿದ ಅವರು, 'ಒಂದು ಪ್ರಮುಖರ ಸಮಿತಿ ಇರಬೇಕೆಂದು ನಾನು ಈಗಾಗಲೇ ಹೇಳಿದ್ದೇನೆ. ಆ ಸಮಿತಿ ಸೇರಿ ತೀರ್ಮಾನ ಮಾಡಬೇಕು. ಆಗ ಕೆಲವು ವಿಚಾರಗಳಲ್ಲಿ ಸಾಮಾಜಿಕ ನ್ಯಾಯ ಸಿಗಲಿದೆ. ಚುನಾವಣೆಯನ್ನು ಕೇವಲ ಒಬ್ಬರಿಂದ ಗೆಲ್ಲಲು ಸಾಧ್ಯವಿಲ್ಲ' ಎಂದು ಹೇಳಿದರು.

ನನ್ನಿಂದ ಒಳೇಟು ಬಿದ್ದಿಲ್ಲ: 'ನಾಯಕರ ಒಗ್ಗಟ್ಟಿನ ಕೊರತೆಯಿಂದ ಕೋಲಾರ ಕ್ಷೇತ್ರ ಗೆಲ್ಲುವಲ್ಲಿ ನಾವು ವಿಫಲರಾಗಿದ್ದೇವೆ. ಈ ವಿಚಾರವನ್ನು ನಾನು ಹೈಕಮಾಂಡ್ ಮತ್ತು ರಾಜ್ಯ ನಾಯಕರ ಗಮನಕ್ಕೆ ಹಲವು ಬಾರಿ ತಂದರೂ ಸಮಸ್ಯೆ ಬಗೆಹರಿಸಲು ಸಾಧ್ಯವಾಗಿಲ್ಲ. ಶಾಸಕರ ಒಗ್ಗಟ್ಟಿನ ಕೊರತೆ ಹಾಗೂ ಸ್ವಪ್ರತಿಷ್ಠೆಗಳ ಕಾರಣದಿಂದ ಕೋಲಾರ ಮತ್ತು ಚಿಕ್ಕಬಳ್ಳಾಪುರ ಕ್ಷೇತ್ರಗಳಲ್ಲಿ ನಾವು ಸೋಲು ಅನುಭವಿಸಿದ್ದೇವೆ. ನನ್ನಿಂದ ಒಳೇಟು ಬಿದ್ದಿಲ್ಲ' ಎಂದರು.

'ಕೋಲಾರದಲ್ಲಿ ಈಗಲೂ ಕಾಲ ಮಿಂಚಿಲ್ಲ. ಮುಂಬರುವ ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ ಸ್ಥಾನಗಳನ್ನು ಗೆಲ್ಲಬೇಕಾದರೆ ಒಗ್ಗಟ್ಟಿನಿಂದ ಕೆಲಸ ಮಾಡಬೇಕಿದೆ. ನಾನು ಈ ವಿಚಾರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ಗಮನಕ್ಕೆ ತಂದಿದ್ದೇನೆ. ಅವರು ಸಮಸ್ಯೆ ಬಗೆಹರಿಸಿದ್ದರೆ ಕೋಲಾರದಲ್ಲಿ ಸೋಲಾಗುತ್ತಿರಲಿಲ್ಲ. ಅಲ್ಲಿನ ನಾಯಕರಿಗೆ ಈಗಲಾದರೂ ಬುದ್ಧಿ ಹೇಳಿ, ಸಮಸ್ಯೆ ಸರಿಪಡಿಸಲಿ' ಎಂದು ಅವರು ತಿಳಿಸಿದರು.

'ಕೆಲವು ಸಚಿವರ ಕ್ಷೇತ್ರಗಳಲ್ಲಿಯೇ ಹಿನ್ನಡೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ನಿರೀಕ್ಷಿಸಿದಷ್ಟು ಫಲಿತಾಂಶ ಬಂದಿಲ್ಲ. ಕೆಲವು ಸಚಿವರು ಪ್ರತಿನಿಧಿಸುವ ಕ್ಷೇತ್ರಗಳಲ್ಲಿ ಹಿನ್ನಡೆ ಆಗಿದೆ. ಅದನ್ನು ಒಪ್ಪಿಕೊಳ್ಳಲೇಬೇಕು' ಎಂದು ಗೃಹ ಸಚಿವ ಜಿ. ಪರಮೇಶ್ವರ ಅವರು ಹೇಳಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, '50 ಸಾವಿರಕ್ಕಿಂತ ಕಡಿಮೆ ಮತಗಳ ಅಂತರದಲ್ಲಿ ಸೋಲು ಕಂಡ ಕ್ಷೇತ್ರಗಳಲ್ಲಿ ಇನ್ನಷ್ಟು ಪರಿಶ್ರಮ ಹಾಕಬೇಕಿತ್ತು' ಎಂದು ಅಭಿಪ್ರಾಯಪಟ್ಟರು.

'ತುಮಕೂರಿನ ಸೋಲಿನ ಬಗ್ಗೆ ಪಕ್ಷದ ನಾಯಕರಿಗೆ ನಾನು ಮತ್ತು ಸಚಿವ ಕೆ.ಎನ್. ರಾಜಣ್ಣ ಉತ್ತರ ಕೊಡುತ್ತೇವೆ. ಬಿಜೆಪಿ–ಜೆಡಿಎಸ್ ಮೈತ್ರಿ ತುಮಕೂರಿನಲ್ಲಿ ಬಿಜೆಪಿ ಅಭ್ಯರ್ಥಿಗೆ ಅನುಕೂಲ ಮಾಡಿಕೊಟ್ಟಿದೆ' ಎಂದೂ ಪರಮೇಶ್ವರ ಅವರು ಹೇಳಿದರು.

ನಗರದಲ್ಲಿ ಸಾಧಾರಣ ಮಳೆ

ಬೆಂಗಳೂರು: ನಗರದ ವಿವಿಧೆಡೆ ಬುಧವಾರ ಸಾಧಾರಣ ಮಳೆಯಾಯಿತು. ಗುಡುಗು ಮಿಂಚಿನ ಅಬ್ಬರವಿಲ್ಲದೇ ತಣ್ಣಗೆ ಸುರಿಯಿತು.

ಕೆಲವು ಕಡೆಗಳಲ್ಲಿ ಮರಗಳು ಧರೆಗೆ ಉರುಳಿವೆ. ಬೊಮ್ಮನಹಳ್ಳಿ, ಆರ್.ಆರ್. ನಗರ, ಎಂ.ಜಿ.ರಸ್ತೆ, ಆರ್.ಟಿ. ನಗರ, ಯಲಹಂಕ ಸಹಿತ ವಿವಿಧೆಡೆ ಉತ್ತಮವಾಗಿ ಮಳೆ ಸುರಿಯಿತು. ಹಲವು ಪ್ರದೇಶಗಳಲ್ಲಿ ಸೋನೆ ಸುರಿಯಿತು.

ಮಳೆ ಪ್ರಮಾಣ: ಎಚ್. ಗೊಲ್ಲಹಳ್ಳಿಯಲ್ಲಿ 3 ಸೆಂ.ಮೀ. ಕೆಂಗೇರಿಯಲ್ಲಿ 2.9 ಮಿ.ಮೀ., ಹೆಮ್ಮಿಗೆಪುರದಲ್ಲಿ 2.8 ಸೆಂ.ಮೀ., ಹಂಪಿನಗರದಲ್ಲಿ 2.5 ಸೆಂ.ಮೀ., ಪೀಣ್ಯ ಕೈಗಾರಿಕಾ ವಲಯದಲ್ಲಿ 2.4 ಸೆಂ.ಮೀ., ಹೆರೋಹಳ್ಳಿಯಲ್ಲಿ 2.3 ಸೆಂ.ಮೀ., ಮಾರುತಿ ಮಂದಿರ ವಾರ್ಡ್‌ನಲ್ಲಿ 2.2 ಸೆಂ.ಮೀ., ನಾಯಂಡಹಳ್ಳಿಯಲ್ಲಿ 2.2. ಸೆಂ.ಮೀ., ರಾಜರಾಜೇಶ್ವರಿ ನಗರದಲ್ಲಿ 2.1 ಸೆಂ.ಮೀ., ಜಕ್ಕೂರು 1.9 ಸೆಂ.ಮೀ., ವಿದ್ಯಾಪೀಠ 1.8 ಸೆಂ.ಮೀ., ಕೊಡಿಗೆಹಳ್ಳಿ 1.7 ಸೆಂ.ಮೀ., ವಿದ್ಯಾರಣ್ಯಪುರ 1.4 ಸೆಂ.ಮೀ., ಯಲಹಂಕ 1.4 ಸೆಂ.ಮೀ., ಚಾಮರಾಜಪೇಟೆ 1.3 ಸೆಂ.ಮೀ., ಉತ್ತರಹಳ್ಳಿ 1.3 ಸೆಂ.ಮೀ., ಗೊಟ್ಟಿಗೆರೆ 1.1ಸೆಂ.ಮೀ. ಮಳೆಯಾಗಿದೆ.

ನಗರದಲ್ಲಿ ಬುಧವಾರ ಸುರಿದ ಮಳೆಗೆ ರಾಜಾರಾಮ್ ಮೋಹನ್‌ರಾಯ್ ರಸ್ತೆಯಲ್ಲಿ ನಿಂತಿದ್ದ ನೀರಿನಲ್ಲಿ ವಾಹನಗಳು ಸಾಗಿದವು –ಪ್ರಜಾವಾಣಿ ಚಿತ್ರ

ಮುರಿದುಬಿದ್ದ 35 ಮರಗಳು: ನಗರದಲ್ಲಿ ಬುಧವಾರ 21 ಮರಗಳು ಧರೆಗೆ ಉರುಳಿವೆ. 59 ಕಡೆಗಳಲ್ಲಿ ರೆಂಬೆಕೊಂಬೆಗಳು ಮುರಿದು ಬಿದ್ದಿವೆ.

ಬೆಂಗಳೂರು ದಕ್ಷಿಣ ವಲಯದಲ್ಲಿ 3 ಮರಗಳು, 10 ಕೊಂಬೆಗಳು, ಆರ್‌ಆರ್‌ನಗರ ವಲಯದಲ್ಲಿ 3 ಮರಗಳು 7 ಕೊಂಬೆಗಳು, ಬೊಮ್ಮನಹಳ್ಳಿ ವಲಯದಲ್ಲಿ 2 ಮರಗಳು, 6 ಕೊಂಬೆಗಳು, ಪಶ್ಚಿಮ ವಲಯದಲ್ಲಿ 5 ಮರಗಳು, 10 ಕೊಂಬೆಗಳು, ಮಹಾದೇವಪುರದಲ್ಲಿ 1 ಮರ, 4 ಕೊಂಬೆಗಳು, ಯಲಹಂಕ ವಲಯದಲ್ಲಿ 2 ಮರ, 7 ಕೊಂಬೆಗಳು, ಪೂರ್ವ ವಲಯದಲ್ಲಿ 3 ಮರಗಳು, 10 ಕೊಂಬೆಗಳು, ದಾಸರಹಳ್ಳಿ ವಲಯದಲ್ಲಿ 2 ಮರಗಳು, 5 ಕೊಂಬೆಗಳು ಮುರಿದು ಬಿದ್ದಿವೆ.

ಭಾನುವಾರ ಮತ್ತು ಸೋಮವಾರ 292 ಮರಗಳು ಮುರಿದು ಬಿದ್ದಿದ್ದವು. 691 ರೆಂಬೆಗಳು ತುಂಡಾಗಿದ್ದವು. ಮಂಗಳವಾರ 13 ಮರಗಳು, 61 ಕೊಂಬೆಗಳು ಮುರಿದು ಬಿದ್ದಿದ್ದವು.

ಮರ: 1553ಕ್ಕೆ ಕರೆ ಮಾಡಿ

ಬೆಂಗಳೂರು: ನಗರದಲ್ಲಿ ಭಾನುವಾರ ರಾತ್ರಿ ಬಿರುಗಾಳಿಯೊಂದಿಗೆ ಸುರಿದ ಭಾರಿ ಮಳೆಯಿಂದ ಹಲವು ಭಾಗಗಳಲ್ಲಿ ಮರ, ರೆಂಬೆ/ಕೊಂಬೆಗಳು ಬಿದ್ದಿವೆ. ಇವುಗಳನ್ನು ತೆರವು ಮಾಡುವ ಕಾರ್ಯವನ್ನು ಬಿಬಿಎಂಪಿ ನಿರಂತರವಾಗಿ ಮಾಡುತ್ತಿದೆ. ಇನ್ನೂ ಸಮಸ್ಯೆಗಳಿದ್ದರೆ 1533ಕ್ಕೆ ಕರೆಮಾಡಬಹುದು.

ಚಿಕ್ಕ-ಚಿಕ್ಕ ರೆಂಬೆ, ಎಲೆಗಳು ರಸ್ತೆ ಬದಿ, ಪಾದಚಾರಿ ಮಾರ್ಗ ಅಥವಾ ಸ್ಥಳದಲ್ಲೇ ಇದ್ದು, ಅದರಿಂದ ನಾಗರಿಕರಿಗೆ ಹಾಗೂ ವಾಹನ ಸವಾರರಿಗೆ ಸಮಸ್ಯೆಆಗುತ್ತಿದ್ದರೆ ಪಾಲಿಕೆಯ ಉಚಿತ ಸಹಾಯವಾಣಿಗೆ ಕರೆ ಮಾಡಬಹುದು. ಅರಣ್ಯ ವಿಭಾಗದ ಮರ ತೆರವು ತಂಡವು ಸ್ಥಳಕ್ಕೆ ತೆರಳಿ ತೆರವುಗೊಳಿಸಲಿದೆ ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

ಅತ್ಯಾಚಾರ ಪ್ರಕರಣ: 2ನೇ ಬಾರಿಗೆ ಪ್ರಜ್ವಲ್‌ನ ವೈದ್ಯಕೀಯ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ಯಾಚಾರ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿರುವ ಹಾಸನದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ಎಸ್‌ಐಟಿ ಅಧಿಕಾರಿಗಳು ಬುಧವಾರ ಬೌರಿಂಗ್ ಆಸ್ಪತ್ರೆಯಲ್ಲಿ ಎರಡನೇ ಬಾರಿಗೆ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದರು.

'ಆಸ್ಪತ್ರೆಯ ತಜ್ಞ ವೈದ್ಯರ ನೇತೃತ್ವದಲ್ಲಿ ಮೂರು ಹಂತದಲ್ಲಿ ವೈದ್ಯಕೀಯ ಪರೀಕ್ಷೆ ನಡೆಸಲಾಗಿದೆ' ಎಂದು ಮೂಲಗಳು ಹೇಳಿವೆ. ಜೂನ್ 1ರಂದು ನ್ಯಾಯಾಲಯಕ್ಕೆ ಹಾಜರು ಪಡಿಸುವುದಕ್ಕೂ ಮೊದಲು ಸಹ ವೈದ್ಯಕೀಯ ಪರೀಕ್ಷೆ ನಡೆಸಲಾಗಿತ್ತು.

'ಹೊಳೆನರಸೀಪುರ ಹಾಗೂ ಬೆಂಗಳೂರಿನ ಬಸವನಗುಡಿಯಲ್ಲಿರುವ ಪ್ರಜ್ವಲ್ ಮನೆಯಲ್ಲಿ ಗುರುವಾರ ಬೆಳಿಗ್ಗೆ ಮಹಜರ್ ನಡೆಸಲಾಗುವುದು. ಹಾಸನದಲ್ಲಿ ಪ್ರಜ್ವಲ್ ನೆಲೆಸಿದ್ದ ಸರ್ಕಾರಿ ವಸತಿಗೃಹದಲ್ಲಿ ಈಗಾಗಲೇ ಅಗತ್ಯ ದಾಖಲೆಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ' ಎಂದು ಮೂಲಗಳು ಹೇಳಿವೆ.

ಅತ್ಯಾಚಾರ ಪ್ರಕರಣ ದಾಖಲಾಗುತ್ತಿದ್ದಂತೆಯೇ ಪ್ರಜ್ವಲ್, ಜರ್ಮನಿಗೆ ತೆರಳಿ ತಲೆಮರೆಸಿ ಕೊಂಡಿದ್ದರು. ನ್ಯಾಯಾಲಯ ಬಂಧನ ವಾರಂಟ್ ಜಾರಿ ಮಾಡಿದ ಬಳಿಕ ನಗರಕ್ಕೆ ವಾಪಸ್ ಆಗಿದ್ದರು. ಮೇ 31ರಂದು ಮಧ್ಯರಾತ್ರಿ ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ ಎಸ್‌ಐಟಿ ಬಂಧಿಸಿತ್ತು.

'ಜೂನ್ 1ರಂದು ನ್ಯಾಯಾಲಯಕ್ಕೆ ಹಾಜರುಪಡಿಸಿ, 6 ದಿನ ಕಸ್ಟಡಿಗೆ ಪಡೆದುಕೊಂಡು ವಿಚಾರಣೆ ನಡೆಸಲಾಗುತ್ತಿದೆ. ಗುರುವಾರ ಸಂಜೆಗೆ ಎಸ್‌ಐಟಿ ಕಸ್ಟಡಿ ಅಂತ್ಯವಾಗಲಿದೆ' ಎಂದು ಮೂಲಗಳು ಹೇಳಿವೆ.

'ಈ ಪ್ರಕರಣದಲ್ಲಿ ಪುರುಷತ್ವ ಸಾಮರ್ಥ್ಯದ ಪರೀಕ್ಷೆ ನಡೆಸುವ ಅವಶ್ಯಕತೆಯಿದ್ದು, ಆರೋಪಿಯನ್ನು ಮತ್ತೆ ಕಸ್ಟಡಿಗೆ ನೀಡುವಂತೆ ನ್ಯಾಯಾಲಯಕ್ಕೆ ಮನವಿ ಮಾಡಲಾಗುವುದು' ಎಂದು ಮೂಲಗಳು ಹೇಳಿವೆ.

ಮೌನಕ್ಕೆ ಜಾರಿದ ಪ್ರಜ್ವಲ್: 'ಚುನಾವಣೆಯಲ್ಲಿ ಸೋತ ಮಾಹಿತಿ ತಿಳಿದುಕೊಂಡು ಪ್ರಜ್ವಲ್ ಸೆಲ್‌ನಲ್ಲಿ ಮೌನಕ್ಕೆ ಜಾರಿದ್ದಾರೆ. ಬುಧವಾರ ವೈದ್ಯಕೀಯ ಪರೀಕ್ಷೆ ನಡೆಸಿದ ಬಳಿಕ ಎಸ್‌ಐಟಿ ಕಚೇರಿಯಲ್ಲಿ ಮತ್ತೆ ವಿಚಾರಣೆ ನಡೆಸಲಾಯಿತು. ಮೊದಲ ಎರಡು ದಿನ ತನಿಖೆಗೆ ಸಹಕಾರ ನೀಡಿರಲಿಲ್ಲ. ಯಾವುದೇ ಪ್ರಶ್ನೆ ಕೇಳಿದರೂ ಗೊತ್ತಿಲ್ಲ. ವಕೀಲರನ್ನು ಕೇಳಿ ಹೇಳುತ್ತೇನೆ. ನ್ಯಾಯಾಲಯಕ್ಕೆ ತಿಳಿಸುತ್ತೇನೆ ಎನ್ನುತ್ತಿದ್ದರು. ಈಗ ತನಿಖೆಗೆ ಸಹಕಾರ ನೀಡುತ್ತಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಜಾಲತಾಣದಲ್ಲಿ ಶಾಸಕ ಪ್ರದೀಪ್ ರಾಜೀನಾಮೆ ಪತ್ರ!

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಚಿಕ್ಕಬಳ್ಳಾಪುರ ಕಾಂಗ್ರೆಸ್ ಶಾಸಕ ಪ್ರದೀಪ್ ಈಶ್ವರ್ ನಕಲಿ ರಾಜೀನಾಮೆ ಪತ್ರ ವಾಟ್ಸ್ ಆ್ಯಪ್‌ನಲ್ಲಿ ವ್ಯಾಪಕವಾಗಿ ಹರಿದಾಡುತ್ತಿದೆ.

ಈ ಪತ್ರ ಅಸಲಿಯೊ, ನಕಲಿಯೊ ಎನ್ನುವ ಬಗ್ಗೆ ವಾಟ್ಸ್ ಆ್ಯಪ್ ಗ್ರೂಪ್‌ಗಳಲ್ಲಿ ಚರ್ಚೆ ನಡೆದಿದ್ದು, 'ಇದು ನಕಲಿ ರಾಜೀನಾಮೆ ಪತ್ರ. ಅವರು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿಲ್ಲ. ಇದೊಂದು ಸುಳ್ಳು ಸುದ್ದಿ. ಯಾವುದೇ ಕಾರಣಕ್ಕೂ ಅವರು ರಾಜೀನಾಮೆ ನೀಡುವುದಿಲ್ಲ' ಎಂದು ಶಾಸಕರ ಆಪ್ತ ಸಹಾಯಕ 'ಎಂಎಲ್‌ಎ ಮಿಡಿಯಾ ಗ್ರೂಪ್'ನಲ್ಲಿ ಸ್ಪಷ್ಟಪಡಿಸಿದ್ದಾರೆ.

'ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದಲ್ಲಿ ಡಾ.ಕೆ.ಸುಧಾಕರ್ ಒಂದೇ ಒಂದು ಮತವನ್ನು ಹೆಚ್ಚು ಪಡೆದರೆ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುತ್ತೇನೆ' ಎಂದು ಲೋಕಸಭೆ ಚುನಾವಣೆ ಪ್ರಚಾರದ ವೇಳೆ ಪ್ರದೀಪ್ ಈಶ್ವರ್ ಹೇಳಿದ್ದರು. ಇಲ್ಲಿ ಸುಧಾಕರ್ 20 ಸಾವಿರಕ್ಕೂ ಹೆಚ್ಚು ಮತ ಪಡೆದಿದ್ದಾರೆ.

ಹಾಗಾಗಿ ಪ್ರದೀಪ್ ಮಾತುಗಳು ತೀವ್ರ ಟ್ರೋಲ್ ಆಗುತ್ತಿವೆ. ಬಿಜೆಪಿ ಮುಖಂಡರು ಮತ್ತು ಕಾರ್ಯಕರ್ತರು 'ಪ್ರದೀಪ್ ರಾಜೀನಾಮೆ ಯಾವಾಗ' ಎಂದು ಸಾಮಾಜಿಕ ಜಾಲತಾಣಗಳಲ್ಲಿ ಪ್ರಶ್ನಿಸುತ್ತಿದ್ದಾರೆ.

ಪತ್ರದಲ್ಲಿ ಏನಿದೆ?: 'ಬಾಲ್ಯದಿಂದಲೂ ಪುಣ್ಯಕೋಟಿ ಕತೆಯನ್ನು ಆದರ್ಶವಾಗಿಸಿಕೊಂಡು 'ಕೊಟ್ಟ ಮಾತು, ಇಟ್ಟ ಹೆಜ್ಜೆ ತಪ್ಪಬಾರದು' ಅನ್ನೋ ಮಾತನ್ನು ಜೀವನದುದ್ದಕ್ಕೂ ಪಾಲಿಸುತ್ತ ಬಂದವನು ನಾನು. ನಾನು ಕೆಲ ದಿನಗಳ ಹಿಂದೆ ಮಾಜಿ ಸಚಿವರಾದ ಡಾ.ಕೆ.ಸುಧಾಕರ್ ಅವರು ಲೋಕಸಭಾ ಚುನಾವಣೆಯಲ್ಲಿ ಚಿಕ್ಕಬಳ್ಳಾಪುರ ಕ್ಷೇತ್ರದಿಂದ ಒಂದು ಮತವನ್ನು ಲೀಡ್ ತೆಗೆದುಕೊಂಡರೆ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಸಾರ್ವಜನಿಕವಾಗಿ ಹೇಳಿರುತ್ತೇನೆ'

'ಸುಧಾಕರ್ ಸುಮಾರು 20 ಸಾವಿರ ಮತಗಳನ್ನು ನನ್ನ ಕ್ಷೇತ್ರದಲ್ಲಿ ಮುನ್ನಡೆ ಪಡೆದುಕೊಂಡಿರುವುದರಿಂದ ನಾನು ಆಡಿದ ಮಾತಿಗೆ ಬದ್ಧನಾಗಿ ಸ್ವ ಇಚ್ಛೆಯಿಂದ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿದ್ದೇನೆ' ಎಂದು ಶಾಸಕರ ನಕಲಿ ಲೆಟರ್ ಹೆಡ್ ಪತ್ರದಲ್ಲಿದೆ.

ಶಾಸಕರ ಮನೆ ಮೇಲೆ ಕಲ್ಲು ತೂರಾಟ

ಚಿಕ್ಕಬಳ್ಳಾಪುರ: ನಗರದ ಕಂದವಾರ ಟೀಚರ್ಸ್ ಕಾಲೊನಿಯಲ್ಲಿರುವ ಶಾಸಕ ಪ್ರದೀಪ್ ಈಶ್ವರ್ ಅವರ ಗೃಹ ಕಚೇರಿ ಮೇಲೆ ಮಂಗಳವಾರ ರಾತ್ರಿ ಕಿಡಿಗೇಡಿಗಳು ಕಲ್ಲು ತೂರಿದ್ದಾರೆ.

ಗೃಹ ಕಚೇರಿಯ ಕಿಟಕಿಯೊಂದರ ಗಾಜು ಒಡೆದಿದೆ. ಸ್ಥಳಕ್ಕೆ ಚಿಕ್ಕಬಳ್ಳಾಪುರ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದ್ದು, ಪೊಲೀಸ್ ಭದ್ರತೆ ಒದಗಿಸಲಾಗಿದೆ.

'ಶಾಸಕ ಪ್ರದೀಪ್ ಈಶ್ವರ್ ಅವರ ಬಾಡಿಗೆ ಮನೆಯಲ್ಲಿ ಕೆಲಸ ಮಾಡಿಕೊಂಡಿರುತ್ತೇವೆ. ಮಂಗಳವಾರ ರಾತ್ರಿ 10.30ರಿಂದ 11ರ ವೇಳೆ ಯಾರೊ ದುಷ್ಕರ್ಮಿಗಳು ಮನೆಯ ಹಿಂಭಾಗದಲ್ಲಿ ಕಲ್ಲು ಎಸೆಯುವ ಶಬ್ದ ಕೇಳಿಸಿತು. ನಾವು ಸ್ಥಳಕ್ಕೆ ಹೋಗಿ ನೋಡಿದಾಗ ಮೂವರು ಅಪರಿಚಿತರು ದ್ವಿಚಕ್ರ ವಾಹನಗಳಲ್ಲಿ ಕಲ್ಲುಗಳೊಂದಿಗೆ ಬಂದಿದ್ದರು' ಎಂದು ಶಾಸಕರ ಮನೆಯ ಕೆಲಸಗಾರರು ದೂರಿನಲ್ಲಿ ತಿಳಿಸಿದ್ದಾರೆ.

ನೈಋತ್ಯ ರೈಲ್ವೆ G20
ಟೆಂಡರ್ ಸೂಚನೆ ಸಂ. 12/SBC/24
ದಿನಾಂಕ: 28.05.2024
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ	ಕಾಮಗಾರಿಗಳ ಹೆಸರು	ಅಂದಾಜು ಮೌಲ್ಯ
1	ಹಿರಿಯ ವಿಭಾಗೀಯ ಇಂಜಿನಿಯರ್ / ಉತ್ತರ / ಬೆಂಗಳೂರು ಕಾರ್ಯವ್ಯಾಪ್ತಿ: ಉಪ ಕಾಮಗಾರಿ I: ಸಹಾಯಕ ವಿಭಾಗೀಯ ಇಂಜಿನಿಯರ್ / ಯಶವಂತಪುರ ಉಪ ವಿಭಾಗ: ಹೆಗ್ಗೆರೆ ಹಾಲ್ಟ್, ಮಲ್ಲಸಂದ್ರ, ಗುಬ್ಬಿ, ನಿಟ್ಟೂರು, ಸಂಪಿಗೆ ರಸ್ತೆ ಮತ್ತು ಯಲಹಂಕ ಪಿಎಫ್ ನಂ 4/5 ನಿಲ್ದಾಣಗಳಲ್ಲಿ ದಿವ್ಯಾಂಗರಿಗಾಗಿ ಉದ್ದೇಶಿತ ಶೌಚಾಲಯ ನಿರ್ಮಾಣ. ಉಪ ಕಾಮಗಾರಿ II: ಸಹಾಯಕ ವಿಭಾಗೀಯ ಇಂಜಿನಿಯರ್/ಯಶವಂತಪುರ ಉಪವಿಭಾಗ: ಸಹಾಯಕ ವಿಭಾಗೀಯ ಇಂಜಿನಿಯರ್ / ಯಶವಂತಪುರ ಉಪವಿಭಾಗದ ಚಿಕ್ಕ ಬಾಣಾವರ, ಗೊಲ್ಲಹಳ್ಳಿ, ದೊಡ್ಡಬೆಲೆ, ನಿಡವಂಡ, ದೊಬ್ಬಸ್‌ಪೇಟೆ, ಹಿರೇಹಳ್ಳಿ, ಕ್ಯಾತಸಂದ್ರ, ಹೆಗ್ಗೆರೆ ಹಾಲ್ಟ್, ಗುಬ್ಬಿ, ನಿಟ್ಟೂರು, ಲೊಟ್ಟೆಗೊಲ್ಲಹಳ್ಳಿ, ಕೊಡಿಗೇಹಳ್ಳಿ, ಯಲಹಂಕ, ರಾಜಾನುಕುಂಟೆ, ನಂದಿ ಹಾಲ್ಟ್, ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಮಲ್ಲಸಂದ್ರ ಮತ್ತು ಸಂಪಿಗೆ ರೋಡ್ ನಿಲ್ದಾಣಗಳಲ್ಲಿ ಶೌಚಾಲಯಗಳು, ಕುಡಿಯುವ ನೀರಿನ ಬೂತ್‌ಗಳು, ರೇಲಿಂಗ್, ಜಾರು ರಹಿತ ವಾಕ್‌ವೇಗಳು, ಇಳಿಜಾರುಗಳು ಮತ್ತು ಟ್ರಾಲಿ ಪಾತ್‌ನಂತಹ ದಿವ್ಯಾಂಗ ಸೌಲಭ್ಯಗಳನ್ನು ಒದಗಿಸುವುದು. ಉಪ ಕಾಮಗಾರಿ III: ಬೈಯ್ಯಪ್ಪನಹಳ್ಳಿ – ಧರ್ಮಾವರಂ ವಿಭಾಗ: ಸಹಾಯಕ ವಿಭಾಗೀಯ ಇಂಜಿನಿಯರ್ / ಹಿಂದೂಪುರ ಉಪವಿಭಾಗದ ನಾಗಸಮುದ್ರಂ–ಧರ್ಮಾವರಂ ನಿಲ್ದಾಣಗಳ ನಡುವೆ ಕಿಮೀ 176/400–500 ರಲ್ಲಿ ಆರ್‌ಯುಬಿ ಸಂಖ್ಯೆ 121/B ರಲ್ಲಿ (ಹಳೆಯ ಎಲ್‌ಸಿ ಸಂಖ್ಯೆ 113 ರಲ್ಲಿ) ಪ್ರಸ್ತಾವಿತ ಒಳಚರಂಡಿ ವ್ಯವಸ್ಥೆ. ನಿರ್ವಹಣೆ ಅವಧಿ 12 ತಿಂಗಳುಗಳು.	ರೂ. 2,32,83,583/-
2	ಬೆಂಗಳೂರು ವಿಭಾಗ: ಡಿಎಸ್‌ಡಿಸಿ ರೈಲುಗಳ ಓಡಾಟದ ಮತ್ತು ಆರ್‌ಒಬಿ / ಆರ್‌ಯುಬಿ (26 ಸಂಖ್ಯೆಗಳು) ನಿರ್ಮಿಸುವ ಮೂಲಕ ಎಲ್‌ಸಿಗಳ ನಿರ್ಮೂಲನೆ ದೃಷ್ಟಿಯಿಂದ ಆರ್‌ಒಬಿ ಗಳ ಪುನರ್ನಿರ್ಮಾಣಕ್ಕೆ ಸಂಬಂಧಿಸಿದಂತೆ ಡಿಪಿಆರ್ ತಯಾರಿಕೆ ಮತ್ತು ಸಲ್ಲಿಕೆ.	ರೂ. 93,40,827/-
3	ಹಿರಿಯ ವಿಭಾಗೀಯ ಇಂಜಿನಿಯರ್ / ದಕ್ಷಿಣ / ಬೆಂಗಳೂರು ಕಾರ್ಯವ್ಯಾಪ್ತಿ: ಸಹಾಯಕ ವಿಭಾಗೀಯ ಇಂಜಿನಿಯರ್ / ಕುಣಿಗಲ್ ಉಪವಿಭಾಗದಲ್ಲಿ 14 ಆರ್ ಯುಬಿ ಗಳಿಗೆ ಪ್ರಮಾಣಿತ ಎತ್ತರದ ಗೇಜ್‌ಗಳನ್ನು ಒದಗಿಸುವುದು: 73, 85, 93, 95, 96, 110, 113, 351, 356, 358, 365, 367, 368 ಮತ್ತು 374. ನಿರ್ವಹಣೆ ಅವಧಿ 6 ತಿಂಗಳುಗಳು.	ರೂ. 2,07,68,816/-
4	ಚಿಕ್ಕ ಬಾಣಾವರ – ಹಾಸನ ವಿಭಾಗ: 13/055–14/005 ರಿಂದ (SL) 0.95 ಕಿಮೀ ಉದ್ದಕ್ಕೆ ಥ್ರೂ ರೈಲ್ ಔಟ್ ರಿನ್ಯೂಯಲ್ ಮತ್ತು ನೆಲಮಂಗಲ ಯಾರ್ಡ್‌ನಲ್ಲಿ ಪಾಯಿಂಟ್ ಸಂಖ್ಯೆ 51B (CS+CMSC) ರ ಥ್ರೂ ಟರ್ನ್ ಔಟ್ ರಿನ್ಯೂಯಲ್.	ರೂ. 18,14,392/-
5	ಉಪ ಕಾಮಗಾರಿ I: ಬೆಂಗಳೂರು – ತುಮಕೂರು: ಸಹಾಯಕ ವಿಭಾಗೀಯ ಇಂಜಿನಿಯರ್/ಯಶವಂತಪುರ ಉಪವಿಭಾಗದಲ್ಲಿ ಕಿಮೀ 93/000–200 ರಲ್ಲಿ ಸೇತುವೆ ಸಂಖ್ಯೆ 268 ಅನ್ನು ಬಲಪಡಿಸುವುದು. ಉಪ ಕಾಮಗಾರಿ II: ಬೈಯ್ಯಪ್ಪನಹಳ್ಳಿ – ಧರ್ಮಾವರಂ ವಿಭಾಗದ ಸೇತುವೆಗಳ ಅಪ್ರೋಚ್ ನಲ್ಲಿ ಸೈನ್ ಬೋರ್ಡ್‌ಗಳನ್ನು ಜೋಡಿಸುವುದು; ಸೇತುವೆ ಸಂಖ್ಯೆ 535 ಅಪ್, 516 ಅಪ್, 490, 480, 434, 319, 288, 285, 281, 268, 266, 259, 224, 214 ಮತ್ತು 197 (ಒಟ್ಟು 15 ಸೇತುವೆಗಳು). ಉಪ ಕಾಮಗಾರಿ III: ಸೇತುವೆಗಳ ಅಪ್ರೋಚ್ ನಲ್ಲಿ ಸೈನ್ ಬೋರ್ಡ್‌ಗಳನ್ನು ಜೋಡಿಸುವುದು; ಯಲಹಂಕ – ಬಂಗಾರಪೇಟೆ ವಿಭಾಗದ ಸೇತುವೆ ಸಂಖ್ಯೆ 257, ಬೆಂಗಳೂರು–ತುಮಕೂರು ವಿಭಾಗದ 352 ಎ (ಒಟ್ಟು 2 ಸೇತುವೆಗಳು). ನಿರ್ವಹಣೆ ಅವಧಿಯು 6 ತಿಂಗಳು ಅಥವಾ ಒಂದು ಮಾನ್ಸೂನ್ ಅವಧಿ ಯಾವುದು ನಂತರದ ಅವಧಿ ಆಗುವುದೋ ಅದು.	ರೂ. 98,68,175/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 26–06–2024, 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಹಿರಿಯ ವಿಭಾಗೀಯ ಇಂಜಿನಿಯರ್ / ಕೋ–ಆರ್ಡ್ ಬೆಂಗಳೂರು
PUB/126/AAV/PRB/SWR/2024-25
South Western Railway-SWR SWRRLY SWRRLY

ನೈಋತ್ಯ ರೈಲ್ವೆ G20
ಟೆಂಡರ್ ಪ್ರಕಟಣೆ ಸಂ. ಸ್ಲೈಡಿಂಗ್‌ಬೂಮ್_ರಿಅಲೈನ್‌ಇಟಿವೈಎಲ್‌ಸಿ,
ದಿನಾಂಕ : 31–05–2024
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಬೆಂಗಳೂರು ವಿಭಾಗದಲ್ಲಿ	ರೂ. 2,07,53,973.70
ಇಂಟರ್‌ಲಾಕ್ಡ್ ಎಲ್‌ಸಿ ಗೇಟ್‌ಗಳಲ್ಲಿ ಸುಗಮ ಕಾರ್ಯ ನಿರ್ವಹಣೆಗಾಗಿ ಸ್ಲೈಡಿಂಗ್ ಬೂಮ್ ಒದಗಿಸುವುದು ಮತ್ತು ಇ ಟೈಪ್ ಲಾಕ್‌ಗಳ ರಿಅಲೈನ್‌ಮೆಂಟ್.	

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 24–06–2024 ರಂದು 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಹಿರಿಯ ವಿಭಾಗೀಯ ಸಿಗ್ನಲ್ ಮತ್ತು ಟೆಲಿಕಮ್ಯುನಿಕೇಶನ್ ಇಂಜಿನಿಯರ್, ಬೆಂಗಳೂರು
ಪಿಯುಬಿ/135/ಎಎವಿ/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024-25
South Western Railway - SWR SWRRLY SWRRLY

PUBLIC NOTICE

My client intends to purchase the agricultural land mentioned in the Schedule hereunder from the owner Sri. N. Ramesh. son of Late Nagarajappa ("Owner"). The Owner represents that he is the absolute owner of the Schedule Property, and he has good marketable, right, title and interest therein and there is no other person/s having any right or claim over the Schedule Property. The Owner further represents that except the Agreement of Sale dated 08-10-2020 with Sri. J. Somashekar, he has not entered into any Agreements/Memorandum of Understanding etc., with any other person/s and further represents that he has not mortgaged, created any, right, interest, lien or encumbered the Schedule Property or any part thereof in any manner with any person/s. Any person/s having objection/s or claims, shall with documentary evidence lodge their objection/s or claims within fifteen (15) days from the date of this Notice with the Undersigned, failing which, my client shall proceed with the above-mentioned transaction.

SCHEDULE PROPERTY

All that piece and parcel of agricultural land being portion of the Survey No. 3/1 (old Survey No. 3) measuring 30 guntas, situated at Gulyanandigunda Village, Tubagere Hobli, Doddaballapur Taluk, Bengaluru Rural District and bounded on the:
East by:Road and Property bearing Survey No. 3/2;
West by:Property bearing Survey No. 4;
North by:Remaining portion of the same Survey number;
South by:Remaining portion of the same Survey number.

Sd/-
Jayanth M. Pattanshetti.,Advocate,
Jayanth Pattanshetti Associates LLP
102, Ground Floor,"Rams Infantry Manor",
No. 70 Infantry Road,Bengaluru- 560 001.
Ph: 41238516/41238367

ನೈಋತ್ಯ ರೈಲ್ವೆ G20
ಟೆಂಡರ್ ಸೂಚನೆ ಸಂ.: 20/2024
ದಿನಾಂಕ: 30.05.2024
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:
ಸಂಕ್ಷಿಪ್ತ ವಿವರಣೆ:

1 ಯಂತ್ರದ, ಎಲೆಕ್ಟ್ರಿಕ್ ಚಾಲಿತ, ರೋಟರಿ ಸ್ಕ್ರೂ ಏರ್–ಕೂಲ್ಡ್, ಮೈಕ್ರೋಪ್ರೊಸೆಸರ್ ಆಧಾರಿತ 500 CFM, 10.0 - 10.5 Kg/cm2 ಸ್ಟೇಷನರಿ ಏರ್ ಕಂಪ್ರೆಸರ್‌ನ ವಿನ್ಯಾಸ, ಸರಬರಾಜು, ಸ್ಥಾಪನೆ, ಕಾರ್ಯಾರಂಭ ಮತ್ತು ಪ್ರೂವ್ ಔಟ್.
ಟೆಂಡರ್ ಸಂಖ್ಯೆ: L8245805 ಪ್ರಮಾಣ: 01 ಸೆಟ್.
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 28–06–2024, 10:30 ಗಂಟೆಯವರೆಗೆ

2 ಎಲ್ಲಾ ವ್ಯಾಗನ್/ಕೋಚ್ ಪ್ರಕಾರಗಳಿಗೆ (ಟ್ವಿನ್ ಪೈಪ್ ಮತ್ತು ಸಿಂಗಲ್ ಪೈಪ್ ಸಿಸ್ಟಮ್ ಎರಡಕ್ಕೂ) ಸ್ವಯಂಚಾಲಿತ ಪಿಎಲ್‌ಸಿ ಆಧಾರಿತ ರೇಕ್ ಟೆಸ್ಟ್ ರಿಗ್‌ನ ಪೂರೈಕೆ, ಸ್ಥಾಪನೆ ಮತ್ತು ಕಾರ್ಯಾರಂಭ
ಟೆಂಡರ್ ಸಂಖ್ಯೆ: L8245804 ಪ್ರಮಾಣ: 04 ಸಂ.
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 24–06–2024, 10:30 ಗಂಟೆಯವರೆಗೆ

3 ವಿಭಾಗ – I ನ ಷರತ್ತು 2 ರ ಪ್ರಕಾರ ನಿಯತಾಂಕಗಳಂತೆ ಡೀಸೆಲ್ ಎಂಜಿನ್ ಚಾಲಿತ, ರೋಟರಿ ಸ್ಕ್ರೂ, 450 CFM 10.0 Kg/cm2 ನ ಏರ್–ಕೂಲ್ಡ್ ಸ್ಟೇಷನರಿ ಏರ್ ಕಂಪ್ರೆಸರ್ ನ ವಿನ್ಯಾಸ, ಪೂರೈಕೆ, ಸ್ಥಾಪನೆ, ಪರೀಕ್ಷೆ, ಕಾರ್ಯಾರಂಭ ಮತ್ತು ಪ್ರೂವನ್ ಔಟ್.
ಟೆಂಡರ್ ಸಂಖ್ಯೆ: L8245800 ಪ್ರಮಾಣ: 02 ಸೆಟ್‌ಗಳು
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 21–06–2024, 10:30 ಗಂಟೆಯವರೆಗೆ

4 3–ಫೇಜ್ ಮೆಮು ಡಿಎಂಸಿ ಗಳಿಗೆ ಆರ್‌ಡಿಎಸ್‌ಓ ನಿರ್ದಿಷ್ಟತೆಯ ಸಂಖ್ಯೆ RDSO/PE/SPEC/EMU/0096-2008 (rev 4 ಅಥವಾ ಇತ್ತೀಚಿನ) ರ ಪ್ರಕಾರ 3–ಫೇಸ್ ಮೆಮು ಪ್ರೊಪಲ್ಷನ್ ಸಿಸ್ಟಮ್‌ಗೆ ಸೂಕ್ತವಾದ ಐಸಿಎಫ್‌ನ ಅನುಮೋದಿತ ಜಿಎ ಡ್ರಾಯಿಂಗ್ ಪ್ರಕಾರ ಮಾರ್ಷಲಿಂಗ್ ಬಾಕ್ಸ್‌ನಲ್ಲಿ ಹಾರ್ಟಿಂಗ್ ಕನೆಕ್ಟರ್‌ಗಳ ಜೊತೆಗೆ ಎಲೆಕ್ಟ್ರಿಕಲ್ ವೈರಿಂಗ್ ಸರಂಜಾಮು ಸೇರಿದಂತೆ ಬಿಡಿಭಾಗಗಳೊಂದಿಗೆ ಪೂರ್ಣಗೊಂಡ ಟ್ರಾಕ್ಷನ್ ಟ್ರಾನ್ಸ್‌ಫಾರ್ಮರ್.
ಟೆಂಡರ್ ಸಂಖ್ಯೆ: L8249001A ಪ್ರಮಾಣ: 01 ಸಂ.
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 24–06–2024, 10:30 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಹಿರಿಯ ವಿಭಾಗೀಯ ಸಾಮಗ್ರಿ ಪ್ರಬಂಧಕರು ಬೆಂಗಳೂರು
PUB/133/AAV/PRB/SWR/2024-25
South Western Railway-SWR SWRRLY SWRRLY

ರಾಮನಗರ ಜಿಲ್ಲಾ ಪಂಚಾಯತ್
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ,
ಪಂಚಾಯತ್ ಭವನ, ಬಿ. ಎಂ. ರಸ್ತೆ, ರಾಮನಗರ – 562 159.
ಸಂಖ್ಯೆ : ರಾ.ಜಿ.ಪಂ./ರಾ.ಗ್ರಾ.ಉ.ಖಾ.ಯೋ./ಸಿ.ಆರ್./03/2024–25
ದಿನಾಂಕ : 22–05–2024

ಟೆಂಡರ್ ಪ್ರಕಟಣೆ

ರಾಮನಗರ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳಿಗೆ ಭೇಟಿ ನೀಡಲು ಹಾಗೂ ಕಛೇರಿ ಕಾರ್ಯಗಳನ್ನು ನಿರ್ವಹಿಸಲು ಅನುಕೂಲವಾಗುವಂತೆ ಒಂಬುಡ್ಸ್‌ಮನ್ ರಾಮನಗರ ಜಿಲ್ಲಾ ಪಂಚಾಯತ್ ಇವರಿಗೆ 2024–25 ನೇ ಸಾಲಿಗೆ ಕಛೇರಿ ಉಪಯೋಗಕ್ಕಾಗಿ ಟ್ರಾವೆಲ್ಸ್ / ವಾಹನದ ಮಾಲೀಕರಿಂದ ಡೀಜೈರ್ ಕಾರ್‌ನ್ನು ಬಾಡಿಗೆ ಆಧಾರದ ಮೇಲೆ ಪಡೆಯಲು ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಕರೆಯಲಾಗಿದೆ.

1) ಟೆಂಡರ್ ಪ್ರಕಟಣೆ ದಿನಾಂಕ : 22–05–2024, 2) ಟೆಂಡರ್ ಅರ್ಜಿ ನಮೂನೆಯನ್ನು ವಿತರಣೆ ಮಾಡಲು ಪ್ರಾರಂಭಿಸುವ ದಿನಾಂಕ ಮತ್ತು ಸಮಯ : 22–05–2024 ರ ಬೆಳಿಗ್ಗೆ 11.00 ಗಂಟೆಯಿಂದ, 3) ಟೆಂಡರ್ ಅರ್ಜಿ ನಮೂನೆಯನ್ನು ವಿತರಣೆ ಮಾಡುವ ಸ್ಥಳ : ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ರಾಮನಗರ ಜಿಲ್ಲಾ ಪಂಚಾಯತ್, 4) ಟೆಂಡರ್ ಅರ್ಜಿ ನಮೂನೆಯನ್ನು ಪಡೆಯಲು ಕೊನೆಯ ದಿನಾಂಕ ಮತ್ತು ಸಮಯ : 10–06–2024 ರ ಅಪರಾಹ್ನ 3.00 ಗಂಟೆಗೆ, 5) ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ : 10–06–2024 ರ ಸಂಜೆ 4.00 ಗಂಟೆಗೆ, 6) ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ : ಎ) ತಾಂತ್ರಿಕ ಬಿಡ್ : 15–06–2024 ರ ಬೆಳಿಗ್ಗೆ 11.00 ಗಂಟೆಗೆ, ಬಿ) ಆರ್ಥಿಕ ಬಿಡ್ : 15–06–2024 ರ ಅಪರಾಹ್ನ 12.30 ಗಂಟೆಗೆ.

ಹೆಚ್ಚಿನ ಮಾಹಿತಿಗಾಗಿ ಹಾಗೂ ಟೆಂಡರ್ ಡಾಕ್ಯೂಮೆಂಟ್‌ಗಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಮಹಾತ್ಮಾ ಗಾಂಧೀ ನರೇಗಾ ಶಾಖೆ, ರಾಮನಗರ ಇವರನ್ನು ಸಂಪರ್ಕಿಸಬಹುದು.

ಸಹಿ/– ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಜಿಲ್ಲಾ ಪಂಚಾಯತ್, ರಾಮನಗರ.
ಡಿಐಪಿಆರ್/ರಾಮನಗರ/15/ಮಣಿಪಾಲ್/2024–25

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಹಲವು ಜಿಲ್ಲೆಗಳಲ್ಲಿ ವರ್ಷಧಾರೆ, ಸಿಡಿಲು ಬಡಿದು ಇಬ್ಬರು ಮಹಿಳೆಯರು ಸೇರಿ ನಾಲ್ವರ ಸಾವು

ಕೆಲವೆಡೆ ಮಿಂಚು, ಗುಡುಗು ಸಹಿತ ಮಳೆ

ಪ್ರಜಾವಾಣಿ ವಾರ್ತೆ

ಧಾರವಾಡದಲ್ಲಿ ಬುಧವಾರ ಸಂಜೆ ಮಳೆ ಸುರಿಯಿತು –ಪ್ರಜಾವಾಣಿ ಚಿತ್ರ

ಹುಬ್ಬಳ್ಳಿ/ಕಲಬುರಗಿ: ಧಾರವಾಡ, ಬೆಳಗಾವಿ, ಕಲಬುರಗಿ, ಗದಗ ಜಿಲ್ಲೆ ಸೇರಿದಂತೆ ರಾಜ್ಯದ ಹಲವೆಡೆ ಬುಧವಾರ ಮಳೆಯಾಯಿತು.

ಧಾರವಾಡ ಮತ್ತು ಹುಬ್ಬಳ್ಳಿಯಲ್ಲಿ ಸಂಜೆ ಶುರುವಾದ ಮಳೆಯು ರಾತ್ರಿಯವರೆಗೂ ಮುಂದುವರೆಯಿತು. ಬೆಳಗಾವಿ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಮತ್ತು ಗದಗ ಜಿಲ್ಲೆ ಮುಂಡರಗಿ ತಾಲ್ಲೂಕಿನ ಡಂಬಳ ಭಾಗದಲ್ಲಿ ಉತ್ತಮ ಮಳೆಯಾಯಿತು.

ಬಳ್ಳಾರಿ ಜಿಲ್ಲೆಯ ಕೊಟ್ಟೂರು ತಾಲ್ಲೂಕಿನ ದೂಪದಹಳ್ಳಿ ಗ್ರಾಮದ ಹೊರವಲಯದಲ್ಲಿ ಕುರಿಗಾಹಿ ಮದ್ದಾನಪ್ಪ (20) ಮತ್ತು ವಿಜಯಪುರ ಜಿಲ್ಲೆಯ ಬಬಲೇಶ್ವರ ತಾಲ್ಲೂಕಿನ ಕಾಖಂಡಕಿ ಗ್ರಾಮದ ಹೊರವಲಯದಲ್ಲಿ ಕುರಿಗಾಹಿ ಅಮೋಘ ಸೋಮನಿಂಗ ಶಿವಣಗಿ (38) ಎಂಬುವರು ಸಿಡಿಲು ಬಡಿದು ಮೃತಪಟ್ಟರು. ಜೊತೆಗೆ 20 ಆಡುಗಳು ಸಾವನ್ನಪ್ಪಿವೆ.

ಅರಕಲಗೂಡು(ಹಾಸನ ವರದಿ): ತಾಲ್ಲೂಕಿನ ದೊಡ್ಡಮಗ್ಗೆ ಗ್ರಾಮದ ಹೊಲದಲ್ಲಿ ಬುಧವಾರ ಮಧ್ಯಾಹ್ನ ಸಿಡಿಲು ಬಡಿದು ಇಬ್ಬರು ಮಹಿಳೆಯರು ಸ್ಥಳದಲ್ಲೇ ಮೃತಪಟ್ಟು, ಮೂವರು ತೀವ್ರವಾಗಿ ಗಾಯಗೊಂಡರು.

ದ್ಯಾವಮ್ಮ (60) ಪುಟ್ಟಮ್ಮ (60) ಮೃತರು. ಗಾಯಾಳುಗಳಾದ ಮರೀಗೌಡ, ಉಷಾ, ಸರೋಜಾ ಅವರನ್ನು ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಮಧ್ಯಾಹ್ನ ಒಂದು ಗಂಟೆ ಸಮಯದಲ್ಲಿ ಜಮೀನಿನಲ್ಲಿ ಅವರೆಲ್ಲರೂ ಜೋಳ ಬಿತ್ತನೆ ಮಾಡುತ್ತಿದ್ದರು. ಮಳೆ ಬಂದಿದ್ದರಿಂದ ರಕ್ಷಣೆಗಾಗಿ ಮರದ ಕೆಳಗೆ ನಿಂತಿದ್ದಾಗ ಸಿಡಿಲು ಬಡಿಯಿತು.

ಆಸ್ಪತ್ರೆಗೆ ಭೇಟಿ ನೀಡಿದ ಶಾಸಕ ಎ.ಮಂಜು, ಮೃತರ ಕುಟುಂಬಗಳಿಗೆ ಹಾಗೂ ಗಾಯಾಳುಗಳಿಗೆ ಸಾಂತ್ವನ ಹೇಳಿದರು. ಪರಿಹಾರ ವಿತರಣೆಗೆ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಕಲಬುರಗಿಯಲ್ಲಿ ಬಿಸಿಲು, ಮೋಡಕವಿದ ವಾತಾವರಣದೊಂದಿಗೆ ನಗರ ಸೇರಿದಂತೆ ಜಿಲ್ಲೆಯ ಹಲವೆಡೆ ಗುಡುಗು, ಮಿಂಚು ಸಹಿತ ಜೋರು ಮಳೆ ಸುರಿಯಿತು.

ಕಳೆದ ಎರಡು ದಿನಗಳಿಂದ ಸಂಜೆ ವೇಳೆ ಬಿರುಸಿನ ಮಳೆಯಾಗುತ್ತಿದೆ. ಬುಧವಾರವೂ ಮುಂದುವರಿದು, ಸುಮಾರು 40 ನಿಮಿಷಗಳ ಕಾಲ ಸುರಿಯಿತು. ಕಾಳಗಿ, ಚಿಂಚೋಳಿ ಸೇರಿದಂತೆ ಹಲವೆಡೆ ಗುಡುಗು ಮಿಂಚಿನೊಂದಿಗೆ ಅರ್ಧ ಗಂಟೆ ಧಾರಾಕಾರ ಮಳೆಯಾಯಿತು.

ಬೀದರ್ ನಗರ ಸೇರಿದಂತೆಸುತ್ತಲಿನ ಭಾಗಗಳಲ್ಲಿ ಗುಡುಗು ಸಹಿತ ವರ್ಷಧಾರೆ ಯಾಗಿದೆ.

ಶಿವಮೊಗ್ಗ/ದಾವಣಗೆರೆ ವರದಿ: ಶಿವಮೊಗ್ಗ ನಗರ ಸೇರಿದಂತೆ ಜಿಲ್ಲೆಯ ಕೆಲವೆಡೆ ಬುಧವಾರ ಉತ್ತಮ ಮಳೆಯಾಗಿದೆ. ಶಿಕಾರಿಪುರದಲ್ಲಿ ಗುಡುಗು, ಸಿಡಿಲು ಸಹಿತ ಧಾರಾಕಾರ ಮಳೆ ಸುರಿದಿದೆ.

ದಾವಣಗೆರೆ ನಗರ ಸೇರಿದಂತೆ ಜಿಲ್ಲೆಯ ವಿವಿಧೆಡೆ ಸಾಧಾರಣ ಮಳೆಯಾಗಿದೆ. ನಗರದಲ್ಲಿ ಮಧ್ಯಾಹ್ನ ಹಾಗೂ ಸಂಜೆ ಕೆಲ ಹೊತ್ತು ಜೋರು ಮಳೆ ಸುರಿಯಿತು.

ಚಿಕ್ಕಮಗಳೂರು ವರದಿ: ಜಿಲ್ಲೆಯಲ್ಲಿ ಮೋಡ ಕವಿದ ವಾತಾವರಣ ಮುಂದುವರಿದಿದ್ದು, ಅಲ್ಲಲ್ಲಿ ಸಾಧಾರಣ ಮಳೆಯಾಗಿದೆ. ಚಿಕ್ಕಮಗಳೂರು, ಆಲ್ದೂರು, ಬಾಳೆಹೊನ್ನೂರು, ಕೊಪ್ಪ, ಕಳಸ ಭಾಗದಲ್ಲಿ ಹದ ಮಳೆಯಾಗಿದ್ದರೆ, ಬೀರೂರು ಸುತ್ತಮುತ್ತ ಸಾಧಾರಣ ಮಳೆಯಾಗಿದೆ.

ಕೋಲಾರ ವರದಿ: ನಗರ ಹಾಗೂ ಗ್ರಾಮಾಂತರ ಭಾಗದಲ್ಲಿ ಬುಧವಾರ ಮಧ್ಯಾಹ್ನ ಧಾರಾಕಾರ ಮಳೆ ಸುರಿದಿದೆ. ಸಂಜೆ 5 ಗಂಟೆವರೆಗೆ ಬಂಗಾರಪೇಟೆ ತಾಲ್ಲೂಕಿನ ಮಾವಳ್ಳಿ ಪಂಚಾಯಿತಿ ವ್ಯಾಪ್ತಿಯಲ್ಲಿ 4.8 ಸೆಂ.ಮೀ (48 ಮಿ.ಮೀ.) ಮಳೆಯಾಗಿದೆ.

ರಾಜ್ಯದ ಕೆಲವೆಡೆ ಭಾರಿ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ಕೆಲ ಜಿಲ್ಲೆಗಳಲ್ಲಿ ಎರಡು ದಿನ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆ ಬಗ್ಗೆ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕಲಬುರಗಿ, ಯಾದಗಿರಿ, ವಿಜಯಪುರ, ಬೆಳಗಾವಿ, ದಾವಣಗೆರೆ, ಶಿವಮೊಗ್ಗ, ಚಿಕ್ಕಮಗಳೂರು ಹಾಗೂ ಮೈಸೂರು ಜಿಲ್ಲೆಗೆ ಗುರುವಾರ 'ಯೆಲ್ಲೊ ಅಲರ್ಟ್' ನೀಡಲಾಗಿದೆ. ಈ ಜಿಲ್ಲೆಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆಯಿದೆ. 30ರಿಂದ 40 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಸಂಭವವೂ ಇದೆ. ಉಡುಪಿ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಬಾಗಲಕೋಟೆ, ಬೀದರ್, ಧಾರವಾಡ, ಗದಗ, ಹಾವೇರಿ, ಕೊಪ್ಪಳ ಹಾಗೂ ರಾಯಚೂರು ಜಿಲ್ಲೆಯ ಹಲವೆಡೆ ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

'ಇದೇ 11ರವರೆಗೂ ಕರಾವಳಿಯ ಎಲ್ಲ ಜಿಲ್ಲೆಗಳು, ದಕ್ಷಿಣ ಒಳನಾಡಿನ ಬಹುತೇಕ ಜಿಲ್ಲೆಗಳು ಹಾಗೂ ಉತ್ತರ ಒಳನಾಡಿನ ಕೆಲ ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗುವ ಸಂಭವವಿದೆ. ಕಲಬುರಗಿ ಸೇರಿ ಐದು ಜಿಲ್ಲೆಗಳಿಗೆ ಶುಕ್ರವಾರವೂ 'ಯೆಲ್ಲೊ ಅಲರ್ಟ್' ನೀಡಲಾಗಿದೆ. ಬೆಂಗಳೂರಿನಲ್ಲಿ ಮುಂದಿನ ಎರಡು ವಾರ ಮೋಡ ಕವಿದ ವಾತಾವರಣ ಇರಲಿದ್ದು, ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ' ಎಂದು ಇಲಾಖೆ ಹೇಳಿದೆ.

'ವೃಕ್ಷ ಸಂರಕ್ಷಣಾ ಕಾಯ್ದೆಗೆ ತಿದ್ದುಪಡಿ'

ಪ್ರಜಾವಾಣಿ ವಾರ್ತೆ

ಈಶ್ವರ ಖಂಡ್ರೆ

ಭಾಲ್ಕಿ (ಬೀದರ್ ಜಿಲ್ಲೆ): 'ರಾಜ್ಯದ ಅರಣ್ಯ, ಗೋಮಾಳ, ಸರ್ಕಾರಿ ಭೂಮಿ ಹಾಗೂ ಪಟ್ಟಾ ಭೂಮಿಯಲ್ಲಿ ಬೃಹತ್ ಮರಗಳ ಅಕ್ರಮ ಕಡಿತಲೆ ಪ್ರಕರಣಗಳು ವರದಿಯಾಗುತ್ತಿರುವ ಕಾರಣ ಗಿಡ–ಮರಗಳನ್ನು ಉಳಿಸಲು ವೃಕ್ಷ ಸಂರಕ್ಷಣಾ ಕಾಯ್ದೆ–1976ಕ್ಕೆ ತಿದ್ದುಪಡಿ ತರಲು ಚಿಂತನೆ ನಡೆದಿದೆ' ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದರು.

ವಿಶ್ವ ಪರಿಸರ ದಿನದ ಅಂಗವಾಗಿ ಪಟ್ಟಣದಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಅನುಮತಿ ಇಲ್ಲದೆ ಯಾರೇ ನಿಯಮಬಾಹಿರವಾಗಿ, ಅಕ್ರಮವಾಗಿ ಮರ ಕಡಿದರೆ ಮರದ ಮಾರುಕಟ್ಟೆ ಮೌಲ್ಯಕ್ಕಿಂತ ಹೆಚ್ಚು ದಂಡದೊಂದಿಗೆ ಜೈಲು ಶಿಕ್ಷೆ ವಿಧಿಸಲು ಅವಕಾಶ ಕಲ್ಪಿಸಿ ಕಾಯ್ದೆಗೆ ತಿದ್ದುಪಡಿ ತರುವ ಅಗತ್ಯವಿದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಈ ಬಗ್ಗೆ ಪರಿಶೀಲಿಸಲಾಗುತ್ತಿದೆ' ಎಂದು ಹೇಳಿದರು.

'ಹಾಸನ, ಉತ್ತರ ಕನ್ನಡ, ಕೊಡಗು ಮತ್ತು ಶಿವಮೊಗ್ಗ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಅಕ್ರಮವಾಗಿ ನೂರಾರು ಮರ ಕಡಿತಲೆ ಮಾಡಿದ ದೂರುಗಳು ಬಂದಿವೆ. ಪ್ರಾಣವಾಯು ನೀಡುವ, ತಾಪಮಾನ ಹೆಚ್ಚಾಗದಂತೆ ತಡೆಯುವ ಹಾಗೂ ಭೂಫಲವತ್ತತೆ ಕಾಪಾಡುವ ವೃಕ್ಷಗಳ ಸಂರಕ್ಷಣೆ ಅಗತ್ಯವಿದೆ' ಎಂದರು.

'ಬೆಲೆ ಬಾಳುವ ಮರಗಳ ಸಂರಕ್ಷಣೆಗಾಗಿ ಪಟ್ಟಾ ಭೂಮಿ, ಗೋಮಾಳ ಮತ್ತು ಸರ್ಕಾರಿ ಭೂಮಿಯಲ್ಲಿರುವ ಬೀಟೆ, ಶ್ರೀಗಂಧ, ತೇಗ ಮೊದಲಾದ ಬೆಲೆಬಾಳುವ ಮರಗಳ ಜಿಯೋ ಟ್ಯಾಗ್ ಮಾಡಲು ಸೂಚಿಸಲಾಗಿದ್ದು, ಅಕ್ರಮವಾಗಿ ಮರ ಕಡಿಯುವುದಕ್ಕೆ ಕಡಿವಾಣ ಬೀಳಲಿದೆ' ಎಂದು ಹೇಳಿದರು.

'ರಸ್ತೆ, ರೈಲು ಮಾರ್ಗ, ವಿದ್ಯುತ್ ಪ್ರಸರಣ ಮಾರ್ಗ, ಕೊಳವೆ ಮಾರ್ಗ ಸೇರಿದಂತೆ ಯಾವುದೇ ಮೂಲಸೌಕರ್ಯ ಯೋಜನೆ, ಗಣಿಗಾರಿಕೆ, ಜಲಾಶಯ, ಬಡಾವಣೆ ನಿರ್ಮಾಣ, ಕೈಗಾರಿಕೆ ಸ್ಥಾಪನೆಯಂತಹ ಯಾವುದೇ ಯೋಜನೆ ಇರಲಿ, ಇದರಿಂದ ಪರಿಸರದ ಮೇಲೆ ಆಗುವ ಪರಿಣಾಮದ ಸಮಗ್ರ ಅಧ್ಯಯನ ಮಾಡುವ ಅಗತ್ಯವಿದೆ ಎಂಬುದನ್ನು ಇಲಾಖೆ ಮನಗಂಡಿದೆ. ಯಾವುದೇ ಹೊಸ ಯೋಜನೆಗೆ ಬಿಡಿ ಬಿಡಿಯಾಗಿ (ಇಷ್ಟು ಕಿ.ಮೀ.ನಿಂದ ಇಂತಿಷ್ಟು ಕಿ.ಮೀ. ವರೆಗೆ) ಮರ ಕಡಿಯಲು ಅನುಮತಿ ನೀಡುವುದಕ್ಕೆ ಕಡಿವಾಣ ಹಾಕಿ, ಒಂದು ಯೋಜನೆಗೆ ಒಂದೇ ಬಾರಿ ಅನುಮತಿ ನೀಡಿ, ಪರ್ಯಾಯ ಅರಣ್ಯ ಬೆಳೆಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲು ಚಿಂತಿಸಲಾಗುತ್ತಿದೆ' ಎಂದರು.

ನಾಗರಾಜಗೆ ಖಾದ್ರಿ ಶಾಮಣ್ಣ ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಖಾದ್ರಿ ಶಾಮಣ್ಣ ಟ್ರಸ್ಟ್ ನೀಡುವ 'ಖಾದ್ರಿ ಶಾಮಣ್ಣ ಪತ್ರಿಕೋದ್ಯಮ ಪ್ರಶಸ್ತಿ'ಗೆ 'ಪ್ರಜಾವಾಣಿ'ಯ ಡೆಪ್ಯೂಟಿ ಎಡಿಟರ್ ಎಂ.ನಾಗರಾಜ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿಯು ₹15 ಸಾವಿರ ನಗದು, ಫಲಕ ಹೊಂದಿದೆ.

ಮೈಸೂರಿನವರಾದ ಎಂ. ನಾಗರಾಜ ಅವರು ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಮೈಸೂರು ಮಿತ್ರ, ಮಹಾನಂದಿ, ಸಾಧ್ವಿ ಪತ್ರಿಕೆಗಳಲ್ಲಿ ಪತ್ರಕರ್ತರಾಗಿ ಕೆಲಸ ಮಾಡಿದ್ದ ಅವರು ಮೂರು ದಶಕಗಳಿಂದ 'ಪ್ರಜಾವಾಣಿ'ಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಆರಂಭದಲ್ಲಿ ವರದಿಗಾರರಾಗಿದ್ದ ಅವರು ಹಾಸನ ಜಿಲ್ಲಾ ವರದಿಗಾರ, ಬೆಂಗಳೂರು ಕಚೇರಿಯಲ್ಲಿ ವರದಿಗಾರ, ವಿಭಾಗದ ಮುಖ್ಯಸ್ಥ, ಹುಬ್ಬಳ್ಳಿ ಆವೃತ್ತಿಯ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿ, ಮತ್ತೆ ಬೆಂಗಳೂರಿನ ಕಚೇರಿಯಲ್ಲಿ ಸುದ್ದಿ ಸಂಪಾದಕರಾಗಿದ್ದರು. ಸದ್ಯ ಡೆಪ್ಯೂಟಿ ಎಡಿಟರ್ ಆಗಿದ್ದಾರೆ.

ಭ್ರೂಣಹತ್ಯೆ ಪ್ರಕರಣ: ಆರೋಪಿ ಕವಿತಾಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಮಹಾಲಿಂಗಪುರ (ಬಾಗಲಕೋಟೆ ಜಿಲ್ಲೆ): ಅನಧಿಕೃತವಾಗಿ ಕಟ್ಟಡ ನಿರ್ಮಿಸಿಕೊಂಡ ಆರೋಪದ ಮೇಲೆ ಭ್ರೂಣ ಹತ್ಯೆಯ ಆರೋಪಿ ಕವಿತಾ ಬಾಡನವರ ಅವರ ಮನೆ ಗೋಡೆಗೆ ಪುರಸಭೆ ಮುಖ್ಯಾಧಿಕಾರಿ ಈರಣ್ಣ ದಡ್ಡಿ ಬುಧವಾರ ನೋಟಿಸ್ ಅಂಟಿಸಿದ್ದಾರೆ.

'ಪುರಸಭೆ ವ್ಯಾಪ್ತಿಯಲ್ಲಿ ಮನೆ ನಿರ್ಮಿಸಲಾಗಿದೆ. ಕಟ್ಟಡ ಹಾಗೂ ಪುರಸಭೆ ಆಸ್ತಿ ದಾಖಲೆ ಪರಿಶೀಲಿಸಿದಾಗ, ಮೂರನೇ ಮಹಡಿವರೆಗೂ ವಾಸಕ್ಕೆ ಎಂದು ಅನಧಿಕೃತವಾಗಿ ಕಟ್ಟಡ ನಿರ್ಮಿಸಲಾಗಿದೆ. ನೆಲ ಮತ್ತು ಮೊದಲ ಮಹಡಿಗೆ ಮಾತ್ರ ಸ್ವಯಂ ಘೋಷಿತ ಆಸ್ತಿ ತೆರಿಗೆ ಪಾವತಿಸಿದ್ದು ಕಂಡುಬಂದಿದೆ' ಎಂದು ನೋಟಿಸ್‌ನಲ್ಲಿ ಉಲ್ಲೇಖಿಸಲಾಗಿದೆ.

'ಈ ಕಟ್ಟಡದಲ್ಲಿ 2022ರಲ್ಲಿ ಹಾಗೂ ಕಳೆದ ಮೇ 29ರಂದು ಕ್ರಿಮಿನಲ್ ಚಟುವಟಿಕೆ ನಡೆದಿದೆ. ಹೀಗಾಗಿ, ಆಸ್ತಿಗೆ ಸಂಬಂಧಿಸಿದಂತೆ ಕಟ್ಟಡ ಪರವಾನಗಿ ಮತ್ತು ಆಸ್ತಿ ಮಾಲೀಕತ್ವದ ದಾಖಲೆಗಳನ್ನು ಈ ನೋಟಿಸ್ ತಲುಪಿದ 15 ದಿನದೊಳಗೆ ಖುದ್ದಾಗಿ ಕಚೇರಿಗೆ ಸಲ್ಲಿಸಬೇಕು. ತಪ್ಪಿದಲ್ಲಿ ಅನಧಿಕೃತ ಕಟ್ಟಡವನ್ನು ತೆರವುಗೊಳಿಸುವ ಕುರಿತು ಕ್ರಮ ಕೈಗೊಳ್ಳಲಾಗುವುದು' ಎಂದು ನೋಟಿಸ್‌ನಲ್ಲಿ ತಿಳಿಸಲಾಗಿದೆ.

ಜಿಲ್ಲಾ ಆರೋಗ್ಯ ಅಧಿಕಾರಿಗೆ ಪತ್ರ ಬರೆದಿರುವ ಪುರಸಭೆ ಮುಖ್ಯಾಧಿಕಾರಿ, 'ಗರ್ಭಪಾತ ಮತ್ತು ಭ್ರೂಣಹತ್ಯೆಗೆ ಸಂಬಂಧಿಸಿದಂತೆ 2019 ಮತ್ತು 2022ರಲ್ಲಿ ತಮ್ಮ ಇಲಾಖೆಯಿಂದ ವಿಚಾರಣೆ ಮತ್ತು ಮನೆ ಮೇಲೆ ದಾಳಿ ಮಾಡಲಾಗಿದೆ. ಈ ಪ್ರಕರಣಗಳ ಕುರಿತು ಪುರಸಭೆಗೆ ಈವರೆಗೆ ಯಾವುದೇ ಮಾಹಿತಿ ಸಲ್ಲಿಸಿಲ್ಲ ಏಕೆ? ತಾವು ಈ ಹಿಂದೆ ನಡೆದ ಮತ್ತು ಪ್ರಸ್ತುತ ಪ್ರಕರಣಗಳ ಕುರಿತು ಸವಿಸ್ತಾರ ಮಾಹಿತಿ ತಕ್ಷಣ ಸಲ್ಲಿಸಬೇಕು' ಎಂದು ಕೋರಿದ್ದಾರೆ.

ಗುತ್ತಿಗೆದಾರನಿಂದ ಆತ್ಮಹತ್ಯೆ ಬೆದರಿಕೆ

ಪ್ರಜಾವಾಣಿ ವಾರ್ತೆ

ಪಾವಗಡ (ತುಮಕೂರು): 'ಗುಣಮಟ್ಟದ ರಸ್ತೆ ಕಾಮಗಾರಿ ಮುಗಿಸಿದರೂ ವಿಶ್ವೇಶ್ವರಯ್ಯ ಜಲ ನಿಗಮ ಉದ್ದೇಶಪೂರ್ವಕವಾಗಿ ಹಣ ಬಿಡುಗಡೆ ಮಾಡುತ್ತಿಲ್ಲ' ಎಂದು ಸುಜಿತ್ ಎಂಬ ಗುತ್ತಿಗೆದಾರ ಆತ್ಮಹತ್ಯೆ ಮಾಡಿಕೊಳ್ಳುವ ಎಚ್ಚರಿಕೆ ನೀಡಿದ್ದಾರೆ.

ತಮಗೆ ಬರಬೇಕಾದ ಬಾಕಿ ಹಣ ಪಾವತಿಸದಿದ್ದರೆ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಮತ್ತು ತಮ್ಮ ಸಾವಿಗೆ ವಿಶ್ವೇಶ್ವರಯ್ಯ ಜಲ ನಿಗಮದ ವ್ಯವಸ್ಥಾಪಕ ನಿರ್ದೇಶಕರೇ ಕಾರಣ ಎಂದು ಹೇಳಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಕಿಲಾರ್ಲಹಳ್ಳಿ– ಕನ್ನಮೇಡಿ ರಸ್ತೆ ಕಾಮಗಾರಿ ಪೂರ್ಣಗೊಳಿಸಿ ಹಲವು ತಿಂಗಳು ಕಳೆದರೂ ವಿಶ್ವೇಶ್ವರಯ್ಯ ಜಲ ನಿಗಮ ತನಗೆ ಸೇರಬೇಕಾದ ₹50 ಲಕ್ಷ ಹಣ ಬಿಡುಗಡೆ ಮಾಡಿಲ್ಲ. ಕಾಮಗಾರಿ ಸರಿ ಇಲ್ಲ ಎಂದು ನಿಗಮದ ವ್ಯವಸ್ಥಾಪಕ ತನಿಖೆ ನಡೆಸಿದ್ದರು. ಕಾಮಗಾರಿ ಗುಣಮಟ್ಟ ಸರಿಯಾಗಿಯೇ ಇದೆ ಎಂದು ತನಿಖಾ ವರದಿ ಹೇಳಿದೆ. ಆದರೂ, ತಾಲ್ಲೂಕಿನವರೇ ಆದ ನಿಗಮದ ವ್ಯವಸ್ಥಾಪಕ ನಿರ್ದೇಶಕ ಸಣ್ಣ ಚಿತ್ತಯ್ಯ ಉದ್ದೇಶಪೂರ್ವಕವಾಗಿ ಹಣ ತಡೆ ಹಿಡಿದಿದ್ದಾರೆ ಎಂದು ಗುತ್ತಿಗೆದಾರ ಆರೋಪಿಸಿದ್ದಾರೆ.

ಸುಜಿತ್

'ಸಾಲ ಮಾಡಿ ಕಾಮಗಾರಿ ಮುಗಿಸಿದ್ದೇನೆ. ಸ್ಥಳೀಯ ರಾಜಕೀಯ ಕಾರಣಗಳಿಗಾಗಿ ದುರುದ್ದೇಶದಿಂದ ವ್ಯವಸ್ಥಾಪಕ ನಿರ್ದೇಶಕರು ಹೀಗೆ ಮಾಡುತ್ತಿದ್ದಾರೆ. ಬೇರೆ ಹಲವು ಗುತ್ತಿಗೆದಾರರ ಹಣ ಬಿಡುಗಡೆ ಮಾಡಲಾಗಿದೆ. ನನ್ನೊಬ್ಬನ ಬಿಲ್ ಮಾತ್ರ ತಡೆ ಹಿಡಿಯಲಾಗಿದೆ' ಎಂದು ಸುಜಿತ್ ಆರೋಪ ಮಾಡಿದ್ದಾರೆ.

'ಬುಧವಾರ ಕಚೇರಿಗೆ ಕರೆಸಿಕೊಂಡ ಕೆಲವು ಅಧಿಕಾರಿಗಳು ನನಗೆ ಬೆದರಿಕೆ ಹಾಕಿದ್ದಾರೆ. ಇದರಲ್ಲಿ ಸಣ್ಣ ಚಿತ್ತಯ್ಯ ಅವರ ತಪ್ಪೇನಿಲ್ಲ ಎಂದು ನನ್ನಿಂದ ಹೇಳಿಸಿ ವಿಡಿಯೊ ಮಾಡಿಸಿಕೊಂಡಿದ್ದಾರೆ. ನನಗೆ ನ್ಯಾಯ ಕೊಡಿಸಿ' ಎಂದು ಅವರು ಗೋಗರೆದಿದ್ದಾರೆ. ಈ ವಿಡಿಯೊ ತಾಲ್ಲೂಕಿನಲ್ಲಿ ಸಂಚಲನ ಮೂಡಿಸಿದೆ.

'ಮೋದಿ ಯಶಸ್ವಿಯಾಗಿ ಸರ್ಕಾರ ಮುನ್ನಡೆಸುವರು'

ಬೆಂಗಳೂರು: ನರೇಂದ್ರ ಮೋದಿ ಅವರಿಗೆ ಎಂತಹ ಪರಿಸ್ಥಿತಿಯನ್ನೂ ನಿಭಾಯಿಸುವ ರಾಜಕೀಯ ಮುತ್ಸದ್ದಿತನವಿದ್ದು, ಎನ್‌ಡಿಎ ಒಕ್ಕೂಟದ ಸರ್ಕಾರವನ್ನು ಯಶಸ್ವಿಯಾಗಿ ಮುನ್ನಡೆಸಲಿದ್ದಾರೆ ಎಂದು ಹಾವೇರಿ–ಗದಗ ಸಂಸದ ಬಸವರಾಜ ಬೊಮ್ಮಾಯಿ ವಿಶ್ವಾಸ ವ್ಯಕ್ತಪಡಿಸಿದರು.

ಬುಧವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ನಾನು ಲೋಕಸಭೆಗೆ ಬಹಳ ವಿಶೇಷ ಸಂದರ್ಭದಲ್ಲಿ ಆಯ್ಕೆಯಾಗಿದ್ದೇನೆ. ಪ್ರಧಾನಿ, ಹಿರಿಯರ ಮಾತಿನಂತೆ ಸ್ಪರ್ಧೆ ಮಾಡಿದೆ. ಅವರ ಲೆಕ್ಕಾಚಾರ ಸರಿಯಾಗಿದೆ. 2014ರಲ್ಲಿ ಪಕ್ಷಕ್ಕೆ ಬಹುಮತ ತಂದುಕೊಟ್ಟರು. ಎರಡನೇ ಬಾರಿ ಬಹುಮತವನ್ನು ಹೆಚ್ಚಿಸಿ ಎನ್‌ಡಿಎ ವಿಸ್ತಾರ ಮಾಡಿದ್ದಾರೆ. ಮೂರನೇ ಬಾರಿ ಎನ್‌ಡಿಎ ಒಕ್ಕೂಟಕ್ಕೆ ಬಹುಮತ ತಂದುಕೊಟ್ಟಿದ್ದಾರೆ' ಎಂದರು.

ಟಿಎಸ್‌ಎಸ್: ನಿಯಮ ಮೀರಿ ಸಾಲ, ಪ್ರಕರಣ ದಾಖಲು

ಶಿರಸಿ: ಸಂಘದ ನಿಯಮಾವಳಿಗೆ ವಿರುದ್ಧವಾಗಿ ಹಾಗೂ ವಂಚನೆಯ ಉದ್ದೇಶದಿಂದ ನೂರಾರು ಕೋಟಿ ಸಾಲ ನೀಡಿ ಸಂಘಕ್ಕೆ ನಷ್ಟ ಮಾಡಿದ ಆರೋಪದ ಮೇಲೆ ಇಲ್ಲಿನ ತೋಟಗಾರ್ಸ್ ಸೇಲ್ ಸೊಸೈಟಿ (ಟಿಎಸ್‌ಎಸ್) ಹಿಂದಿನ ಪ್ರಧಾನ ವ್ಯವಸ್ಥಾಪಕ ರವೀಶ ಅಚ್ಯುತ ಹೆಗಡೆ ಮತ್ತು ಹಿಂದಿನ ಕಾರ್ಯಾಧ್ಯಕ್ಷ ರಾಮಕೃಷ್ಣ ಶ್ರೀಪಾದ ಹೆಗಡೆ ಕಡವೆ ಸೇರಿ ಐವರ ವಿರುದ್ಧ ಮಾರುಕಟ್ಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಂಘದ ಪ್ರಭಾರಿ ಪ್ರಧಾನ ವ್ಯವಸ್ಥಾಪಕ ವಿಜಯಾನಂದ ಭಟ್ ಪ್ರಕರಣ ದಾಖಲಿಸಿದ್ದು, 'ರವೀಶ ಹೆಗಡೆ ಹಾಗೂ ರಾಮಕೃಷ್ಣ ಹೆಗಡೆ ಕಡವೆ ಜತೆಯಾಗಿ ಸಂಘದ ನಿವೃತ್ತ ಸಿಬ್ಬಂದಿ ಅನಿಲಕುಮಾರ ಸಿದ್ದಪ್ಪ ಮುಷ್ಠಗಿ ಹೆಸರಿನಲ್ಲಿ ₹44.09 ಕೋಟಿ, ಸದಸ್ಯರಾದ ಪ್ರವೀಣ ಹೆಗಡೆ ಹೆಸರಲ್ಲಿ ₹33.66 ಕೋಟಿ, ಮಹಾಬಲೇಶ್ವರ ಗಣಪತಿ ಹೆಗಡೆ ಹೆಸರಿನಲ್ಲಿ ₹22.88 ಕೋಟಿ ಸಾಲವನ್ನು ಸ್ವಂತಕ್ಕೆ ಲಾಭ ಮಾಡಿಕೊಳ್ಳುವ ಮತ್ತು ಸಂಘಕ್ಕೆ ನಷ್ಟ ಮಾಡುವ ದುರುದ್ದೇಶದಿಂದ ನೀಡಿದ್ದಾರೆ' ಎಂದು ದೂರಿನಲ್ಲಿ ಆರೋಪಿಸಿದ್ದಾರೆ.

'ಸಾಲಗಾರನ ಆಸ್ತಿ ಮೌಲ್ಯ, ಮರುಪಾವತಿಯ ಮಾರ್ಗ ಪರಿಶೀಲಿಸಿಲ್ಲ. ಇದರಿಂದ ಸಂಘಕ್ಕೆ ತುಂಬ ನಷ್ಟವಾಗಿದ್ದು, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ದೂರಿನಲ್ಲಿ ಕೋರಿದ್ದಾರೆ.

ನಿಧನ ವಾರ್ತೆ

ಯಕ್ಷಗಾನ ಕಲಾವಿದ ಪೇತ್ರಿ ಮಾಧವ ನಾಯ್ಕ

ಉಡುಪಿ: ಬಡಗುತಿಟ್ಟು ಯಕ್ಷಗಾನದ ಹಿರಿಯ ಕಲಾವಿದ ಪೇತ್ರಿ ಮಾಧವ ನಾಯ್ಕ (84) ಪೇತ್ರಿಯ ಸ್ವಗೃಹದಲ್ಲಿ ಬುಧವಾರ ನಿಧನರಾದರು.

ಅವರಿಗೆ ಪತ್ನಿ, ಪುತ್ರಿ, ಐವರು ಪುತ್ರರು ಇದ್ದಾರೆ.

ಮಾರಣಕಟ್ಟೆ, ಮಂದಾರ್ತಿ, ಪೆರ್ಡೂರು, ಸಾಲಿಗ್ರಾಮ, ಅಮೃತೇಶ್ವರಿ, ಕೊಲ್ಲೂರು ಹಾಗೂ ಮುಲ್ಕಿ ಮೇಳಗಳಲ್ಲಿ 23 ವರ್ಷ ಮತ್ತು ಶಿವರಾಮ ಕಾರಂತರ ನೇತೃತ್ವದ ಯಕ್ಷರಂಗದಲ್ಲಿ 30 ವರ್ಷ ವೇಷಧಾರಿಯಾಗಿ ಕಲಾಸೇವೆ ಸಲ್ಲಿಸಿದ್ದರು. ಯಕ್ಷರಂಗದ ಪ್ರಮುಖ ವೇಷಧಾರಿಯಾಗಿ ವಿವಿಧ ದೇಶಗಳನ್ನು ಸಂಚರಿಸಿದ್ದರು.

ಅವರಿಗೆ ಕರ್ನಾಟಕ ರಾಜ್ಯೋತ್ಸವ, ಯಕ್ಷಗಾನ ಅಕಾಡೆಮಿ ಸೇರಿ ಹಲವು ಪ್ರಶಸ್ತಿಗಳು ಸಂದಿವೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಚೇರಿ, ಬೃ.ಬೆಂ.ಮ.ಪಾಲಿಕೆ ಕೇಂದ್ರ ಕಚೇರಿ, ನೆಲ ಮಹಡಿ, ಅನೆಕ್ಸ್–03 ಕಟ್ಟಡ, ನರಸಿಂಹರಾಜ ಚೌಕ, ಬೆಂಗಳೂರು–560 002.

ಸಂಖ್ಯೆ:ಉ.ಅ.ಸಂ/ಟೆಂಡರ್/01/2024–25 ದಿನಾಂಕ: 05.06.2024

ಟೆಂಡರ್ ಪ್ರಕಟಣೆ

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೃ.ಬೆಂ.ಮ.ಪಾಲಿಕೆ ಬೆಂಗಳೂರು ಇವರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ 1ನೇ ದರ್ಜೆ ಅಥವಾ ಸಿಪಿಡಬ್ಲ್ಯೂಡಿ–ದರ್ಜೆ–1, ಕೆಪಿಡಬ್ಲ್ಯೂಡಿ–ದರ್ಜೆ–1, ಅರಣ್ಯ–ದರ್ಜೆ–1, ಸಾಲ್ವೆನ್ಸಿಯೊಂದಿಗೆ/ರೈಲ್ವೇಸ್/ಎಂಇಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿಸಿಕೊಂಡಿರುವ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಪಟ್ಟಿಯಲ್ಲಿ ತಿಳಿಸಿರುವಂತೆ ಬೃ.ಬೆಂ.ಮ.ಪಾಲಿಕೆ ಪ್ರದೇಶದಲ್ಲಿ 2024–25ನೇ ಸಾಲಿಗೆ ಮುಂಗಾರು ಪ್ಲಾಂಟೇಷನ್ ಬೆಳೆಸುವಿಕೆ ಮತ್ತು ನಿರ್ವಹಣೆ ಹಾಗೂ ಅವುಗಳನ್ನು 2025–26 ಮತ್ತು 2026–27ನೇ ಸಾಲಿನ ವರೆಗೆ ನಿರ್ವಹಿಸಲು ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ	ಕಾಮಗಾರಿಗಳ ಹೆಸರು/ವರ್ಗೀಕರಣ
1	ಬೃ.ಬೆಂ.ಮ.ಪಾಲಿಕೆ ಯಲಹಂಕ ವಲಯ, ಯಲಹಂಕ ವಿಧಾನಸಭಾ ಕ್ಷೇತ್ರದಲ್ಲಿರುವ ಕೆರೆಗಳ ಒಳಾಂಗಣದಲ್ಲಿ 2024–25ನೇ ಸಾಲಿಗೆ ಮುಂಗಾರು ಪ್ಲಾಂಟೇಷನ್ ಬೆಳೆಸುವಿಕೆ ಮತ್ತು ನಿರ್ವಹಣೆ ಹಾಗೂ ಅವುಗಳನ್ನು 2025–26 ಮತ್ತು 2026–27ನೇ ಸಾಲಿನ ವರೆಗೆ ನಿರ್ವಹಿಸುವುದು – 4500 ಸಸಿಗಳು (ಪ.ಪಂಗಡ) ಅಂದಾಜು ಮೊತ್ತ: ರೂ.9472500/– ಇಎಂಡಿ: ರೂ.94725/–
2	ಬೃ.ಬೆಂ.ಮ.ಪಾಲಿಕೆ ಯಲಹಂಕ ವಲಯ, ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದಲ್ಲಿರುವ ಕೆರೆಗಳ ಒಳಾಂಗಣದಲ್ಲಿ 2024–25ನೇ ಸಾಲಿಗೆ ಮುಂಗಾರು ಪ್ಲಾಂಟೇಷನ್ ಬೆಳೆಸುವಿಕೆ ಮತ್ತು ನಿರ್ವಹಣೆ ಹಾಗೂ ಅವುಗಳನ್ನು 2025–26 ಮತ್ತು 2026–27ನೇ ಸಾಲಿನ ವರೆಗೆ ನಿರ್ವಹಿಸುವುದು – 6500 ಸಸಿಗಳು (ಸಾಮಾನ್ಯರು) ಅಂದಾಜು ಮೊತ್ತ: ರೂ.13682500/– ಇಎಂಡಿ: ರೂ.205237.5
3	ಬೃ.ಬೆಂ.ಮ.ಪಾಲಿಕೆ ಯಲಹಂಕ ವಲಯದಲ್ಲಿರುವ ಉದ್ಯಾನವನಗಳ ಒಳಾಂಗಣದಲ್ಲಿ 2024–25ನೇ ಸಾಲಿಗೆ ಮುಂಗಾರು ಪ್ಲಾಂಟೇಷನ್ ಬೆಳೆಸುವಿಕೆ ಮತ್ತು ನಿರ್ವಹಣೆ (ವೃಕ್ಷ ರಕ್ಷಕಗಳನ್ನು ಹೊರತುಪಡಿಸಿ) ಹಾಗೂ ಅವುಗಳನ್ನು 2025–26 ಮತ್ತು 2026–27ನೇ ಸಾಲಿನ ವರೆಗೆ ನಿರ್ವಹಿಸುವುದು – 2000 ಸಸಿಗಳು (ಸಾಮಾನ್ಯರು) ಅಂದಾಜು ಮೊತ್ತ: ರೂ.3352000/– ಇಎಂಡಿ: ರೂ.67040/–
4	ಬೃ.ಬೆಂ.ಮ.ಪಾಲಿಕೆ ಯಲಹಂಕ ವಲಯ, ಯಲಹಂಕ ವಿಧಾನಸಭಾ ಕ್ಷೇತ್ರದಲ್ಲಿರುವ ಕೆರಗಳ ಒಳಾಂಗಣದಲ್ಲಿ 2024–25ನೇ ಸಾಲಿಗೆ ಮುಂಗಾರು ಪ್ಲಾಂಟೇಷನ್ ಬೆಳೆಸುವಿಕೆ ಮತ್ತು ನಿರ್ವಹಣೆ (ವೃಕ್ಷ ರಕ್ಷಕಗಳನ್ನು ಹೊರತುಪಡಿಸಿ) ಹಾಗೂ ಅವುಗಳನ್ನು 2025–26 ಮತ್ತು 2026–27ನೇ ಸಾಲಿನ ವರೆಗೆ ನಿರ್ವಹಿಸುವುದು – 4000 ಸಸಿಗಳು (ಸಾಮಾನ್ಯರು) ಅಂದಾಜು ಮೊತ್ತ: ರೂ.6704000/– ಇಎಂಡಿ: ರೂ.134080/–
5	ಬೃ.ಬೆಂ.ಮ.ಪಾಲಿಕೆ ಯಲಹಂಕ ವಲಯ, ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದಲ್ಲಿರುವ ಕೆರೆಗಳ ಒಳಾಂಗಣದಲ್ಲಿ 2024–25ನೇ ಸಾಲಿಗೆ ಮುಂಗಾರು ಪ್ಲಾಂಟೇಷನ್ ಬೆಳೆಸುವಿಕೆ ಮತ್ತು ನಿರ್ವಹಣೆ (ವೃಕ್ಷ ರಕ್ಷಕಗಳನ್ನು ಹೊರತುಪಡಿಸಿ) ಹಾಗೂ ಅವುಗಳನ್ನು 2025–26 ಮತ್ತು 2026–27ನೇ ಸಾಲಿನ ವರೆಗೆ ನಿರ್ವಹಿಸುವುದು – 5000 ಸಸಿಗಳು (ಸಾಮಾನ್ಯರು) ಅಂದಾಜು ಮೊತ್ತ: ರೂ.8380000/– ಇಎಂಡಿ: ರೂ.167600/–
6	ಬೃ.ಬೆಂ.ಮ.ಪಾಲಿಕೆ ಯಲಹಂಕ ವಲಯದ ವಾಯು ಸೇನೆ ಮತ್ತು ಬಿಎಸ್‌ಎಫ್ ಕ್ಯಾಂಪಸ್ ಒಳಾಂಗಣದಲ್ಲಿ 2024–25ನೇ ಸಾಲಿಗೆ ಮುಂಗಾರು ಪ್ಲಾಂಟೇಷನ್ ಬೆಳೆಸುವಿಕೆ ಮತ್ತು ನಿರ್ವಹಣೆ (ವೃಕ್ಷ ರಕ್ಷಕಗಳನ್ನು ಹೊರತುಪಡಿಸಿ) ಹಾಗೂ ಅವುಗಳನ್ನು 2025–26 ಮತ್ತು 2026–27ನೇ ಸಾಲಿನ ವರೆಗೆ ನಿರ್ವಹಿಸುವುದು – 12000 ಸಸಿಗಳು (ಸಾಮಾನ್ಯರು) ಅಂದಾಜು ಮೊತ್ತ: ರೂ.20112000/– ಇಎಂಡಿ: ರೂ.301680/–
7	ಬೃ.ಬೆಂ.ಮ.ಪಾಲಿಕೆ ಮಹದೇವಪುರ ವಲಯ, ಕೃಷ್ಣರಾಜಪುರಂ ವಿಧಾನಸಭಾ ಕ್ಷೇತ್ರದಲ್ಲಿ 2024–25ನೇ ಸಾಲಿಗೆ ಮುಂಗಾರು ಪ್ಲಾಂಟೇಷನ್ ಬೆಳೆಸುವಿಕೆ ಮತ್ತು ನಿರ್ವಹಣೆ ಹಾಗೂ ಅವುಗಳನ್ನು 2025–26 ಮತ್ತು 2026–27ನೇ ಸಾಲಿನ ವರೆಗೆ ನಿರ್ವಹಿಸುವುದು – 5000 ಸಸಿಗಳು (ಸಾಮಾನ್ಯರು) ಅಂದಾಜು ಮೊತ್ತ: ರೂ.10525000/– ಇಎಂಡಿ: ರೂ.157875/–
8	ಬೃ.ಬೆಂ.ಮ.ಪಾಲಿಕೆ ಮಹದೇವಪುರ ವಲಯ, ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ 2024–25ನೇ ಸಾಲಿಗೆ ಮುಂಗಾರು ಪ್ಲಾಂಟೇಷನ್ ಬೆಳೆಸುವಿಕೆ ಮತ್ತು ನಿರ್ವಹಣೆ ಹಾಗೂ ಅವುಗಳನ್ನು 2025–26 ಮತ್ತು 2026–27ನೇ ಸಾಲಿನ ವರೆಗೆ ನಿರ್ವಹಿಸುವುದು – 6000 ಸಸಿಗಳು (ಸಾಮಾನ್ಯರು) ಅಂದಾಜು ಮೊತ್ತ: ರೂ.12630000/– ಇಎಂಡಿ: ರೂ.189450/–
9	ಬೃ.ಬೆಂ.ಮ.ಪಾಲಿಕೆ ಮಹದೇವಪುರ ವಲಯ ಉದ್ಯಾನವನಗಳ ಒಳಾಂಗಣದಲ್ಲಿ 2024–25ನೇ ಸಾಲಿಗೆ ಮುಂಗಾರು ಪ್ಲಾಂಟೇಷನ್ ಬೆಳೆಸುವಿಕೆ ಮತ್ತು ನಿರ್ವಹಣೆ (ವೃಕ್ಷ ರಕ್ಷಕಗಳನ್ನು ಹೊರತುಪಡಿಸಿ) ಹಾಗೂ ಅವುಗಳನ್ನು 2025–26 ಮತ್ತು 2026–27ನೇ ಸಾಲಿನ ವರೆಗೆ ನಿರ್ವಹಿಸುವುದು – 2000 ಸಸಿಗಳು (ಸಾಮಾನ್ಯರು) ಅಂದಾಜು ಮೊತ್ತ: ರೂ.3352000/– ಇಎಂಡಿ: ರೂ.67040/–
10	ಬೃ.ಬೆಂ.ಮ.ಪಾಲಿಕೆ ಮಹದೇವಪುರ ವಲಯ ಕೆರೆಗಳ ಒಳಾಂಗಣದಲ್ಲಿ 2024–25ನೇ ಸಾಲಿಗೆ ಮುಂಗಾರು ಪ್ಲಾಂಟೇಷನ್ ಬೆಳೆಸುವಿಕೆ ಮತ್ತು ನಿರ್ವಹಣೆ (ವೃಕ್ಷ ರಕ್ಷಕಗಳನ್ನು ಹೊರತುಪಡಿಸಿ) ಹಾಗೂ ಅವುಗಳನ್ನು 2025–26 ಮತ್ತು 2026–27ನೇ ಸಾಲಿನ ವರೆಗೆ ನಿರ್ವಹಿಸುವುದು – 4000 ಸಸಿಗಳು (ಸಾಮಾನ್ಯರು) ಅಂದಾಜು ಮೊತ್ತ: ರೂ.6704000/– ಇಎಂಡಿ: ರೂ.134080/–
11	ಬೃ.ಬೆಂ.ಮ.ಪಾಲಿಕೆ ಪಶ್ಚಿಮ ವಲಯ, ಗೋವಿಂದರಾಜನಗರ, ಮಹಾಲಕ್ಷ್ಮಿನಗರ ಬಡಾವಣೆ ಮತ್ತು ರಾಜಾಜಿನಗರ ವಿಧಾನಸಭಾ ಕ್ಷೇತ್ರಗಳಲ್ಲಿ 2024–25ನೇ ಸಾಲಿಗೆ ಮುಂಗಾರು ಪ್ಲಾಂಟೇಷನ್ ಬೆಳೆಸುವಿಕೆ ಮತ್ತು ನಿರ್ವಹಣೆ ಹಾಗೂ ಅವುಗಳನ್ನು 2025–26 ಮತ್ತು 2026–27ನೇ ಸಾಲಿನ ವರೆಗೆ ನಿರ್ವಹಿಸುವುದು – 2500 ಸಸಿಗಳು (ಸಾಮಾನ್ಯರು) ಅಂದಾಜು ಮೊತ್ತ: ರೂ.5262500/– ಇಎಂಡಿ: ರೂ.105250/–
12	ಬೃ.ಬೆಂ.ಮ.ಪಾಲಿಕೆ ಪಶ್ಚಿಮ ವಲಯ, ಮಲ್ಲೇಶ್ವರಂ, ಗಾಂಧಿನಗರ ಮತ್ತು ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರಗಳಲ್ಲಿ 2024–25ನೇ ಸಾಲಿಗೆ ಮುಂಗಾರು ಪ್ಲಾಂಟೇಷನ್ ಬೆಳೆಸುವಿಕೆ ಮತ್ತು ನಿರ್ವಹಣೆ ಹಾಗೂ ಅವುಗಳನ್ನು 2025–26 ಮತ್ತು 2026–27ನೇ ಸಾಲಿನ ವರೆಗೆ ನಿರ್ವಹಿಸುವುದು – 2500 ಸಸಿಗಳು (ಪ.ಜಾತಿ) ಅಂದಾಜು ಮೊತ್ತ: ರೂ.5262500/– ಇಎಂಡಿ: ರೂ.52625/–
13	ಬೃ.ಬೆಂ.ಮ.ಪಾಲಿಕೆ ರಾ.ರಾ ನಗರ ವಲಯದ ರಾ.ರಾ ನಗರ ವಿಧಾನಸಭಾ ಕ್ಷೇತ್ರಗಳಲ್ಲಿ 2024–25ನೇ ಸಾಲಿಗೆ ಮುಂಗಾರು ಪ್ಲಾಂಟೇಷನ್ ಬೆಳೆಸುವಿಕೆ ಮತ್ತು ನಿರ್ವಹಣೆ ಹಾಗೂ ಅವುಗಳನ್ನು 2025–26 ಮತ್ತು 2026–27ನೇ ಸಾಲಿನ ವರೆಗೆ ನಿರ್ವಹಿಸುವುದು ಬ್ಲಾಕ್–1 – 4500 ಸಸಿಗಳು (ಸಾಮಾನ್ಯರು) ಅಂದಾಜು ಮೊತ್ತ: ರೂ.9472500/– ಇಎಂಡಿ: ರೂ.189450/–
14	ಬೃ.ಬೆಂ.ಮ.ಪಾಲಿಕೆ ರಾ.ರಾ ನಗರ ವಲಯದ ರಾ.ರಾ ನಗರ ವಿಧಾನಸಭಾ ಕ್ಷೇತ್ರಗಳಲ್ಲಿ 2024–25ನೇ ಸಾಲಿಗೆ ಮುಂಗಾರು ಪ್ಲಾಂಟೇಷನ್ ಬೆಳೆಸುವಿಕೆ ಮತ್ತು ನಿರ್ವಹಣೆ ಹಾಗೂ ಅವುಗಳನ್ನು 2025–26 ಮತ್ತು 2026–27ನೇ ಸಾಲಿನ ವರೆಗೆ ನಿರ್ವಹಿಸುವುದು ಬ್ಲಾಕ್–2 – 4500 ಸಸಿಗಳು (ಸಾಮಾನ್ಯರು) ಅಂದಾಜು ಮೊತ್ತ: ರೂ.9472500/– ಇಎಂಡಿ: ರೂ.189450/–
15	ಬೃ.ಬೆಂ.ಮ.ಪಾಲಿಕೆ ರಾ.ರಾ ನಗರ ವಲಯ ಉದ್ಯಾನವನಗಳು ಮತ್ತು ಕೆರೆಗಳ ಒಳಾಂಗಣದಲ್ಲಿ 2024–25ನೇ ಸಾಲಿಗೆ ಮುಂಗಾರು ಪ್ಲಾಂಟೇಷನ್ ಬೆಳೆಸುವಿಕೆ ಮತ್ತು ನಿರ್ವಹಣೆ (ವೃಕ್ಷ ರಕ್ಷಕಗಳನ್ನು ಹೊರತುಪಡಿಸಿ) ಹಾಗೂ ಅವುಗಳನ್ನು 2025–26 ಮತ್ತು 2026–27ನೇ ಸಾಲಿನ ವರೆಗೆ ನಿರ್ವಹಿಸುವುದು – 4000 ಸಸಿಗಳು (ಸಾಮಾನ್ಯರು) ಅಂದಾಜು ಮೊತ್ತ: ರೂ.6704000/– ಇಎಂಡಿ: ರೂ.134080/–
16	ಬೃ.ಬೆಂ.ಮ.ಪಾಲಿಕೆ ರಾ.ರಾ ನಗರ ವಲಯದ ಸಿಕ್ಯೂಎ ಡಿಫೆನ್ಸ್ ಪ್ರದೇಶ ಒಳಾಂಗಣದಲ್ಲಿ 2024–25ನೇ ಸಾಲಿಗೆ ಮುಂಗಾರು ಪ್ಲಾಂಟೇಷನ್ ಬೆಳೆಸುವಿಕೆ ಮತ್ತು ನಿರ್ವಹಣೆ (ವೃಕ್ಷ ರಕ್ಷಕಗಳನ್ನು ಹೊರತುಪಡಿಸಿ) ಹಾಗೂ ಅವುಗಳನ್ನು 2025–26 ಮತ್ತು 2026–27ನೇ ಸಾಲಿನ ವರೆಗೆ ನಿರ್ವಹಿಸುವುದು – 4000 ಸಸಿಗಳು (ಸಾಮಾನ್ಯರು) ಅಂದಾಜು ಮೊತ್ತ: ರೂ.6704000/– ಇಎಂಡಿ: ರೂ.134080/–
17	ಬೃ.ಬೆಂ.ಮ.ಪಾಲಿಕೆ ಬೊಮ್ಮನಹಳ್ಳಿ ವಲಯ, ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರಗಳಲ್ಲಿ 2024–25ನೇ ಸಾಲಿಗೆ ಮುಂಗಾರು ಪ್ಲಾಂಟೇಷನ್ ಬೆಳೆಸುವಿಕೆ ಮತ್ತು ನಿರ್ವಹಣೆ ಹಾಗೂ ಅವುಗಳನ್ನು 2025–26 ಮತ್ತು 2026–27ನೇ ಸಾಲಿನ ವರೆಗೆ ನಿರ್ವಹಿಸುವುದು – 4000 ಸಸಿಗಳು (ಪ.ಪಂಗಡ) ಅಂದಾಜು ಮೊತ್ತ: ರೂ.8420000/– ಇಎಂಡಿ: ರೂ.84200/–
18	ಬೃ.ಬೆಂ.ಮ.ಪಾಲಿಕೆ ಬೊಮ್ಮನಹಳ್ಳಿ ವಲಯ, ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರಗಳಲ್ಲಿ 2024–25ನೇ ಸಾಲಿಗೆ ಮುಂಗಾರು ಪ್ಲಾಂಟೇಷನ್ ಮೆಪಥಾನ ಪ್ರದೇಶ ಬೆಳೆಸುವಿಕೆ ಮತ್ತು ನಿರ್ವಹಣೆ ಹಾಗೂ ಅವುಗಳನ್ನು 2025–26 ಮತ್ತು 2026–27ನೇ ಸಾಲಿನ ವರೆಗೆ ನಿರ್ವಹಿಸುವುದು – 4500 ಸಸಿಗಳು (ಸಾಮಾನ್ಯರು) ಅಂದಾಜು ಮೊತ್ತ: ರೂ.8420000/– ಇಎಂಡಿ: ರೂ.168400/–
19	ಬೃ.ಬೆಂ.ಮ.ಪಾಲಿಕೆ ಬೊಮ್ಮನಹಳ್ಳಿ ವಲಯ, ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರಗಳಲ್ಲಿ 2024–25ನೇ ಸಾಲಿಗೆ ಮುಂಗಾರು ಪ್ಲಾಂಟೇಷನ್ ಮೆಪಥಾನ ಪ್ರದೇಶ ಬೆಳೆಸುವಿಕೆ ಮತ್ತು ನಿರ್ವಹಣೆ ಹಾಗೂ ಅವುಗಳನ್ನು 2025–26 ಮತ್ತು 2026–27ನೇ ಸಾಲಿನ ವರೆಗೆ ನಿರ್ವಹಿಸುವುದು – 6000 ಸಸಿಗಳು (ಸಾಮಾನ್ಯರು) ಅಂದಾಜು ಮೊತ್ತ: ರೂ.12630000/– ಇಎಂಡಿ: ರೂ.189450/–
20	ಬೃ.ಬೆಂ.ಮ.ಪಾಲಿಕೆ ಬೊಮ್ಮನಹಳ್ಳಿ ವಲಯದ ಉದ್ಯಾನವನಗಳು ಮತ್ತು ಕೆರೆಗಳ ಒಳಾಂಗಣದಲ್ಲಿ 2024–25ನೇ ಸಾಲಿಗೆ ಮುಂಗಾರು ಪ್ಲಾಂಟೇಷನ್ ಬೆಳೆಸುವಿಕೆ ಮತ್ತು ನಿರ್ವಹಣೆ (ವೃಕ್ಷ ರಕ್ಷಕಗಳನ್ನು ಹೊರತುಪಡಿಸಿ) ಹಾಗೂ ಅವುಗಳನ್ನು 2025–26 ಮತ್ತು 2026–27ನೇ ಸಾಲಿನ ವರೆಗೆ ನಿರ್ವಹಿಸುವುದು – 4000 ಸಸಿಗಳು (ಪ.ಜಾತಿ) ಅಂದಾಜು ಮೊತ್ತ: ರೂ.6704000/– ಇಎಂಡಿ: ರೂ.67040/–
21	ಬೃ.ಬೆಂ.ಮ.ಪಾಲಿಕೆ ದಾಸರಹಳ್ಳಿ ವಲಯ, ದಾಸರಹಳ್ಳಿ ವಿಧಾನಸಭಾ ಕ್ಷೇತ್ರಗಳಲ್ಲಿ 2024–25ನೇ ಸಾಲಿಗೆ ಮುಂಗಾರು ಪ್ಲಾಂಟೇಷನ್ ಬೆಳೆಸುವಿಕೆ ಮತ್ತು ನಿರ್ವಹಣೆ (ವೃಕ್ಷ ರಕ್ಷಕಗಳನ್ನು ಹೊರತುಪಡಿಸಿ) ಹಾಗೂ ಅವುಗಳನ್ನು 2025–26 ಮತ್ತು 2026–27ನೇಸಾಲಿನ ವರೆಗೆ ನಿರ್ವಹಿಸುವುದು – 3500 ಸಸಿಗಳು (ಪ.ಜಾತಿ) ಅಂದಾಜು ಮೊತ್ತ: ರೂ.7367500/– ಇಎಂಡಿ: ರೂ.73675/–
22	ಬೃ.ಬೆಂ.ಮ.ಪಾಲಿಕೆ ದಾಸರಹಳ್ಳಿ ವಲಯದ ಉದ್ಯಾನವನಗಳ ಒಳಾಂಗಣದಲ್ಲಿ 2024–25ನೇ ಸಾಲಿಗೆ ಮುಂಗಾರು ಪ್ಲಾಂಟೇಷನ್ ಬೆಳೆಸುವಿಕೆ ಮತ್ತು ನಿರ್ವಹಣೆ (ವೃಕ್ಷ ರಕ್ಷಕಗಳನ್ನು ಹೊರತುಪಡಿಸಿ) ಹಾಗೂ ಅವುಗಳನ್ನು 2025–26 ಮತ್ತು 2026–27ನೇ ಸಾಲಿನ ವರೆಗೆ ನಿರ್ವಹಿಸುವುದು – 2500 ಸಸಿಗಳು (ಸಾಮಾನ್ಯರು) ಅಂದಾಜು ಮೊತ್ತ: ರೂ.4190000/– ಇಎಂಡಿ: ರೂ.83800/–
23	ಬೃ.ಬೆಂ.ಮ.ಪಾಲಿಕೆ ದಾಸರಹಳ್ಳಿ ವಲಯದ ಕೆರೆಗಳ ಒಳಾಂಗಣದಲ್ಲಿ 2024–25ನೇ ಸಾಲಿಗೆ ಮುಂಗಾರು ಪ್ಲಾಂಟೇಷನ್ ಬೆಳೆಸುವಿಕೆ ಮತ್ತು ನಿರ್ವಹಣೆ (ವೃಕ್ಷ ರಕ್ಷಕಗಳನ್ನು ಹೊರತುಪಡಿಸಿ) ಹಾಗೂ ಅವುಗಳನ್ನು 2025–26 ಮತ್ತು 2026–27ನೇ ಸಾಲಿನ ವರೆಗೆ ನಿರ್ವಹಿಸುವುದು – 4000 ಸಸಿಗಳು (ಸಾಮಾನ್ಯರು) ಅಂದಾಜು ಮೊತ್ತ: ರೂ.6704000/– ಇಎಂಡಿ: ರೂ.134080/–
24	ಬೃ.ಬೆಂ.ಮ.ಪಾಲಿಕೆ ದಾಸರಹಳ್ಳಿ ವಲಯದ ಜಾಲಹಳ್ಳಿ ವಾಯು ಸೇನೆ ಒಳಾಂಗಣದಲ್ಲಿ 2024–25ನೇ ಸಾಲಿಗೆ ಮುಂಗಾರು ಪ್ಲಾಂಟೇಷನ್ ಬೆಳೆಸುವಿಕೆ ಮತ್ತು ನಿರ್ವಹಣೆ (ವೃಕ್ಷ ರಕ್ಷಕಗಳನ್ನು ಹೊರತುಪಡಿಸಿ) ಹಾಗೂ ಅವುಗಳನ್ನು 2025–26 ಮತ್ತು 2026–27ನೇ ಸಾಲಿನ ವರೆಗೆ ನಿರ್ವಹಿಸುವುದು – 5000 ಸಸಿಗಳು (ಪ.ಜಾತಿ) ಅಂದಾಜು ಮೊತ್ತ: ರೂ.8380000/– ಇಎಂಡಿ: ರೂ.83800/–
25	ಬೃ.ಬೆಂ.ಮ.ಪಾಲಿಕೆ ಪೂರ್ವ ವಲಯದ ಎಂಇಜಿ/ಡಿಫೆನ್ಸ್ ಪ್ರದೇಶ ಒಳಾಂಗಣದಲ್ಲಿ 2024–25ನೇ ಸಾಲಿಗೆ ಮುಂಗಾರು ಪ್ಲಾಂಟೇಷನ್ ಬೆಳೆಸುವಿಕೆ ಮತ್ತು ನಿರ್ವಹಣೆ (ವೃಕ್ಷ ರಕ್ಷಕಗಳನ್ನು ಹೊರತುಪಡಿಸಿ) ಹಾಗೂ ಅವುಗಳನ್ನು 2025–26 ಮತ್ತು 2026–27ನೇ ಸಾಲಿನ ವರೆಗೆ ನಿರ್ವಹಿಸುವುದು – 4000 ಸಸಿಗಳು (ಸಾಮಾನ್ಯರು) ಅಂದಾಜು ಮೊತ್ತ: ರೂ.6704000/– ಇಎಂಡಿ: ರೂ.134080/–
26	ಬೃ.ಬೆಂ.ಮ.ಪಾಲಿಕೆ ದಕ್ಷಿಣ ವಲಯ, ವಿಜಯನಗರ, ಚಿಕ್ಕಪೇಟೆ, ಪದ್ಮನಾಭನಗರ ವಿಧಾನಸಭಾ ಕ್ಷೇತ್ರದಲ್ಲಿ 2024–25ನೇ ಸಾಲಿಗೆ ಮುಂಗಾರು ಪ್ಲಾಂಟೇಷನ್ ಬೆಳೆಸುವಿಕೆ ಮತ್ತು ನಿರ್ವಹಣೆ (ವೃಕ್ಷ ರಕ್ಷಕಗಳನ್ನು ಹೊರತುಪಡಿಸಿ) ಹಾಗೂ ಅವುಗಳನ್ನು 2025–26 ಮತ್ತು 2026–27ನೇ ಸಾಲಿನ ವರೆಗೆ ನಿರ್ವಹಿಸುವುದು – 1500 ಸಸಿಗಳು (ಸಾಮಾನ್ಯರು) ಅಂದಾಜು ಮೊತ್ತ: ರೂ.3157500/– ಇಎಂಡಿ: ರೂ.63150/–
27	ಬೃ.ಬೆಂ.ಮ.ಪಾಲಿಕೆ ದಕ್ಷಿಣ ವಲಯ, ಜಯನಗರ, ಬಿಟಿಎಂ ಬಡಾವಣೆ ಮತ್ತು ಬಸವನಗುಡಿ ವಿಧಾನಸಭಾ ಕ್ಷೇತ್ರದಲ್ಲಿ 2024–25ನೇ ಸಾಲಿಗೆ ಮುಂಗಾರು ಪ್ಲಾಂಟೇಷನ್ ಬೆಳೆಸುವಿಕೆ ಮತ್ತು ನಿರ್ವಹಣೆ (ವೃಕ್ಷ ರಕ್ಷಕಗಳನ್ನು ಹೊರತುಪಡಿಸಿ) ಹಾಗೂ ಅವುಗಳನ್ನು 2025–26 ಮತ್ತು 2026–27ನೇ ಸಾಲಿನ ವರೆಗೆ ನಿರ್ವಹಿಸುವುದು – 1500 ಸಸಿಗಳು (ಸಾಮಾನ್ಯರು) ಅಂದಾಜು ಮೊತ್ತ: ರೂ.3157500/– ಇಎಂಡಿ: ರೂ.63150/–

ಟೆಂಡರ್ ವೇಳಾಪಟ್ಟಿಯು ಈ ಕೆಳಕಂಡಂತಿರುತ್ತವೆ

1	ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಲು ಪ್ರಾರಂಭಿಸುವ ದಿನಾಂಕ	07.06.2024 ರಿಂದ
2	ಆಕ್ಷೇಪಣೆಗಳನ್ನು https://kppp.karnataka.gov.in ನಲ್ಲಿ ಆನ್‌ಲೈನ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ	13.06.2024ರ ಸಂಜೆ 5:00 ಗಂಟೆಯವರೆಗೆ
3	ಬಿಡ್ ಪೂರ್ವಭಾವಿ ಸಭೆಯ ದಿನಾಂಕ ಮತ್ತು ಸಂವಹನ ವಿಳಾಸ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಚೇರಿ, ಬೃ.ಬೆಂ.ಮ.ಪಾಲಿಕೆ ಕೇಂದ್ರ ಕಚೇರಿ, ನೆಲ ಮಹಡಿ, ಅನೆಕ್ಸ್–03 ಕಟ್ಟಡ, ನರಸಿಂಹರಾಜ ಚೌಕ, ಬೆಂಗಳೂರು–560 002 ಇಲ್ಲಿ ದಿನಾಂಕ: 14.06.2024ರ ಸಂಜೆ 5:00 ಗಂಟೆಗೆ ನಡೆಸಲಾಗುವುದು e-mail:dcfbbmp12@gmail.com	
4	ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ	21.06.2024ರ ಸಂಜೆ 5:00 ಗಂಟೆಯವರೆಗೆ
5	ಟೆಂಡರನ್ನು ಆನ್‌ಲೈನ್‌ನಲ್ಲಿ ತೆರೆಯುವ ದಿನಾಂಕ ಮತ್ತು ಸಮಯ	24.06.2024ರ ಸಂಜೆ 5:30 ಗಂಟೆಯವರೆಗೆ
6	ಅರ್ಜಿಗಳನ್ನು ತೆರೆಯುವ ಸ್ಥಳ	ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು

ALVA'S

ALVA'S Education Foundation®

Vidyagiri-Moodubidire - 574 227

500+ students ensured their MBBS admission in govt quota from ALVAS Campus through Class Room Teaching in 2024

Achievements in NEET 2024

Above 650 marks: 51 students	Above 600 marks: 181 students
Above 550 marks: 371 students	Above 500 marks: 686 students


ನವದೆಹಲಿ (ಪಿಟಿಐ): ಭಯೋತ್ಪಾದನೆ ಆರೋಪದ ಮೇಲೆ ಜೈಲಿನಲ್ಲಿರುವ ಇಬ್ಬರು ಅಭ್ಯರ್ಥಿಗಳು ಲೋಕಸಭಾ ಚುನಾವಣೆಯಲ್ಲಿ ಜಯಗಳಿಸಿದ್ದಾರೆ.

ಅಮೃತ್‌ಪಾಲ್

ಕಾನೂನಿನ ಪ್ರಕಾರ, 18ನೇ ಲೋಕಸಭಾ ಕಲಾಪಗಳಿಗೆ ಹಾಜರಾಗಲು ಅವರಿಗೆ ಅವಕಾಶವಿಲ್ಲ. ಆದರೆ ಸಂಸತ್ತಿನ ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸುವ ಸಾಂವಿಧಾನಿಕ ಹಕ್ಕನ್ನು ಅವರು ಹೊಂದಿದ್ದಾರೆ ಎನ್ನುತ್ತಾರೆ ಸಂವಿಧಾನ ತಜ್ಞರು.

ಬಂಧಿತ ಸಿಖ್ ಧರ್ಮ ಪ್ರಚಾರಕ ಅಮೃತ್‌ಪಾಲ್ ಸಿಂಗ್ ಪಂಜಾಬ್‌ನ ಖದೂರ್ ಸಾಹಿಬ್ ಕ್ಷೇತ್ರದಲ್ಲಿ ಜಯ ಗಳಿಸಿದ್ದರೆ, ಎಂಜಿನಿಯರ್ ರಶೀದ್ ಎಂದು ಹೆಸರಾಗಿರುವ ಶೇಖ್ ಅಬ್ದುಲ್ ರಶೀದ್ ಬಾರಾಮುಲ್ಲಾ ಕ್ಷೇತ್ರದಲ್ಲಿ ಗೆದ್ದಿದ್ದಾರೆ.

ಭಯೋತ್ಪಾದನೆಗೆ ಆರ್ಥಿಕ ನೆರವು ನೀಡಿದ ಆರೋಪದ ಮೇಲೆ ಎಂಜಿನಿಯರ್ ರಶೀದ್ 2019ರ ಆಗಸ್ಟ್ 9ರಿಂದ ತಿಹಾರ್ ಜೈಲಿನಲ್ಲಿದ್ದಾರೆ. ಅಮೃತ್‌ಪಾಲ್ ಅವರನ್ನು 2023ರಲ್ಲಿ ರಾಷ್ಟ್ರೀಯ ಭದ್ರತಾ ಕಾಯ್ದೆಯಡಿ ಬಂಧಿಸಿ ದಿಬ್ರುಗಢ ಜೈಲಿನಲ್ಲಿ ಇರಿಸಲಾಗಿದೆ.

'ಸಂಸದರಾಗಿ ಪ್ರಮಾಣ ವಚನ ಸ್ವೀಕರಿಸುವುದು ಅವರ ಸಾಂವಿಧಾನಿಕ ಹಕ್ಕು. ಜೈಲಿನಲ್ಲಿರುವ ಕಾರಣ ಪ್ರಮಾಣ ವಚನ ಸ್ವೀಕಾರಕ್ಕೆ ಸಂಸತ್ತಿಗೆ ಹೋಗಿ ಬರಲು ಭದ್ರತೆ ಒದಗಿಸುವಂತೆ ಅಧಿಕಾರಿಗಳನ್ನು ಕೋರಿ, ಅನುಮತಿ ಪಡೆಯಬೇಕು. ಪ್ರಮಾಣ ವಚನ ಸ್ವೀಕರಿಸಿದ ಬಳಿಕ ಮತ್ತೆ ಜೈಲಿಗೆ ಹಿಂದಿರುಗಬೇಕಾಗುತ್ತದೆ' ಎಂದು ಸಂವಿಧಾನ ತಜ್ಞ ಮತ್ತು ಲೋಕಸಭಾ ಸಚಿವಾಲಯದ ನಿವೃತ್ತ ಪ್ರಧಾನ ಕಾರ್ಯದರ್ಶಿ ಪಿ.ಡಿ.ಟಿ. ಆಚಾರಿ ವಿವರಿಸಿದರು.

ಸಂವಿಧಾನದ 101(4)ನೇ ವಿಧಿಯು, ಪೀಠದ ಪೂರ್ವಾನುಮತಿ ಪಡೆಯದೆ ಸಂಸತ್ತಿನ ಉಭಯ ಸದನಗಳ ಸದಸ್ಯರು ಗೈರುಹಾಜರಾಗುವಂತಿಲ್ಲ ಎಂದು ತಿಳಿಸುತ್ತದೆ. ಹೀಗಾಗಿ ಅವರು ಪ್ರಮಾಣ ವಚನ ಸ್ವೀಕರಿಸದ ನಂತರ, ಸದನಕ್ಕೆ ಹಾಜರಾಗಲು ಸಾಧ್ಯವಾಗದಿರುವ ಕುರಿತು ಸ್ಪೀಕರ್‌ಗೆ ಪತ್ರ ಬರೆಯಬೇಕು. ನಂತರ ಸ್ಪೀಕರ್ ಅವರು ಅವರ ಮನವಿಗಳನ್ನು ಸದಸ್ಯರ ಗೈರುಹಾಜರಿಯ ಸದನ ಸಮಿತಿಗೆ ಕಳುಹಿಸುತ್ತಾರೆ ಎಂದು ಅವರು ಮಾಹಿತಿ ನೀಡಿದರು.

ಸದಸ್ಯರಿಗೆ ಸದನದ ಕಲಾಪಕ್ಕೆ ಗೈರಾಗಲು ಅವಕಾಶ ನೀಡಬೇಕೇ ಅಥವಾ ಬೇಡವೇ ಎಂಬುದರ ಕುರಿತು ಸಮಿತಿ ಶಿಫಾರಸು ಮಾಡುತ್ತದೆ. ಆ ಶಿಫಾರಸನ್ನು ಸ್ಪೀಕರ್ ಮೂಲಕ ಸದನದಲ್ಲಿ ಮತಕ್ಕೆ ಹಾಕಲಾಗುತ್ತದೆ ಎಂದು ಅವರು ಕಾನೂನಿನಲ್ಲಿ ಇರುವ ಅವಕಾಶಗಳ ಕುರಿತು ಹೇಳಿದರು.

ರಶೀದ್ ಅಥವಾ ಅಮೃತ್‌ಪಾಲ್ ಸಿಂಗ್ ಅವರನ್ನು ನ್ಯಾಯಾಲಯವು ತಪ್ಪಿತಸ್ಥರೆಂದು ಘೋಷಿಸಿ, ಕನಿಷ್ಠ ಎರಡು ವರ್ಷಗಳ ಕಾಲ ಶಿಕ್ಷೆಗೆ ಗುರಿಯಾದರೆ ಅವರ ಲೋಕಸಭಾ ಸದಸ್ಯತ್ವ ಅನರ್ಹಗೊಳ್ಳುತ್ತದೆ.

8ರಿಂದ ಮೋದಿ 3.0 ಯುಗಾರಂಭ?

ಒಂದನೇ ಪುಟದಿಂದ...

ಮೋದಿ ಅವರು ಆದಷ್ಟು ಬೇಗ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಬೇಕು ಎಂದು ನಾಯಕರು ಸಲಹೆ ನೀಡಿದರು. ಮೈತ್ರಿ ಸರ್ಕಾರಕ್ಕೆ ಯಾವುದೇ ಷರತ್ತು ಇಲ್ಲದೆ ಬೆಂಬಲ ನೀಡುವ ಪತ್ರವನ್ನು ಮಿತ್ರಪಕ್ಷಗಳ ನಾಯಕರು ನೀಡಿದರು.

ಜವಾಹರಲಾಲ್ ನೆಹರೂ ಅವರು ಸತತ ಮೂರು ಲೋಕಸಭಾ ಚುನಾವಣೆಗಳಲ್ಲಿ ಗೆದ್ದು ಪ್ರಧಾನಿಯಾಗಿ ದಾಖಲೆ ಬರೆದಿದ್ದರು. ಇದೀಗ, ನೆಹರೂ 'ಹ್ಯಾಟ್ರಿಕ್' ಸಾಧನೆಯನ್ನು ಮೋದಿ ಸರಿಗಟ್ಟಲಿದ್ದಾರೆ. ಮೈತ್ರಿಕೂಟದ ಸಂಚಾಲಕರಾಗಿ ಚಂದ್ರಬಾಬು ನಾಯ್ಡು ಆಯ್ಕೆಯಾಗುವ ಸಾಧ್ಯತೆ ಇದೆ. ಮೈತ್ರಿ ಸರ್ಕಾರದ ಸುಸೂತ್ರ ಕಾರ್ಯನಿರ್ವಹಣೆಗೆ ಸಮನ್ವಯ ಸಮಿತಿ ರಚಿಸುವ ಕುರಿತು ಚರ್ಚೆಗಳು ನಡೆದಿವೆ.

ಮೋದಿ ಅವರನ್ನು ತಮ್ಮ ನಾಯಕರನ್ನಾಗಿ ಔಪಚಾರಿಕವಾಗಿ ಆಯ್ಕೆ ಮಾಡಲು ಎನ್‌ಡಿಎ ಸಂಸದರು ಜೂನ್ 7 ರಂದು ಸಭೆ ನಡೆಸಲಿದ್ದಾರೆ. ಬಳಿಕ ಮೈತ್ರಿ ನಾಯಕರು ರಾಷ್ಟ್ರಪತಿ ಅವರನ್ನು ಭೇಟಿ ಮಾಡಿ ಬೆಂಬಲ ಪತ್ರ ನೀಡಲಿದ್ದಾರೆ ಎಂದು ಎಚ್‌ಎಂ (ಎಸ್) ನಾಯಕ ಜಿತನ್ ರಾಮ್ ಮಾಂಝಿ ಅವರು ಸುದ್ದಿಗಾರರಿಗೆ ತಿಳಿಸಿದರು. ಜೂನ್ 8ರಂದು ರಾತ್ರಿ 8 ಗಂಟೆಗೆ ಮೋದಿ ಅವರು ಪ್ರಮಾಣವಚನ ಸ್ವೀಕರಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ. 17ನೇ ಲೋಕಸಭೆಯ ಅವಧಿ ಜೂನ್ 16ಕ್ಕೆ ಕೊನೆಗೊಳ್ಳಲಿದ್ದು, ಅದಕ್ಕೆ ಮುನ್ನ ನೂತನ ಸರ್ಕಾರ ರಚನೆಯಾಗಬೇಕಿದೆ.

'ಎನ್‌ಡಿಎ ಸರ್ಕಾರವು ದೇಶದ ಸರ್ವತೋಮುಖ ಅಭಿವೃದ್ಧಿಗಾಗಿ ಜನರ ಗುಣಮಟ್ಟವನ್ನು ಸುಧಾರಿಸುವ ಕೆಲಸವನ್ನು ಮುಂದುವರಿಸಲಿದೆ. ಬಡವರು, ಯುವಕರು, ರೈತರು ಹಾಗೂ ಸಮಾಜದ ವಂಚಿತ ವರ್ಗದ ಸೇವೆ ಮಾಡಲು ಮೈತ್ರಿಕೂಟ ಕಟಿಬದ್ಧವಾಗಿದೆ' ಎಂದು ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.

'2024ರ ಲೋಕಸಭೆ ಚುನಾವಣೆಯಲ್ಲಿ ನರೇಂದ್ರ ಮೋದಿ ನೇತೃತ್ವದಲ್ಲಿ ಎನ್‌ಡಿಎ ಒಗ್ಗಟ್ಟಿನಿಂದ ಹೋರಾಡಿ ಗೆದ್ದಿದ್ದಕ್ಕೆ ನಾವೆಲ್ಲರೂ ಹೆಮ್ಮೆಪಡುತ್ತೇವೆ. ನಾವೆಲ್ಲರೂ ಎನ್‌ಡಿಎ ನಾಯಕರು ನರೇಂದ್ರ ಮೋದಿಯನ್ನು ನಮ್ಮ ನಾಯಕನನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡುತ್ತೇವೆ' ಎಂದು ನಿರ್ಣಯದಲ್ಲಿ ತಿಳಿಸಲಾಗಿದೆ.

'ಮೋದಿ ನೇತೃತ್ವದ ಎನ್‌ಡಿಎ ಸರ್ಕಾರದ ಜನಪರ ನೀತಿಗಳಿಂದಾಗಿ ಕಳೆದ 10 ವರ್ಷಗಳಲ್ಲಿ ದೇಶವು ಪ್ರತಿಯೊಂದು ಕ್ಷೇತ್ರದಲ್ಲೂ ಅಭಿವೃದ್ಧಿಯಾಗುತ್ತಿರುವುದನ್ನು ಜನರು ನೋಡಿದ್ದಾರೆ' ಎಂದು ನಿರ್ಣಯ ಹೇಳಿದೆ.

'ಕಳೆದ 10 ವರ್ಷಗಳಲ್ಲಿ ಮೋದಿ ಅವರ ದೂರದೃಷ್ಟಿಯ ನಾಯಕತ್ವದಲ್ಲಿ ದೊಡ್ಡ ಪ್ರಮಾಣದ ಅಭಿವೃದ್ಧಿ ಹಾಗೂ ಕಲ್ಯಾಣ ಕಾರ್ಯಕ್ರಮಗಳು ನಡೆದಿವೆ. ಮುಂದಿನ ದಿನಗಳಲ್ಲಿ ಹೊಸ ಶಕ್ತಿ ಹಾಗೂ ಆವೇಗದೊಂದಿಗೆ ರಾಷ್ಟ್ರ ಹಾಗೂ ಜನರ ಸೇವೆ ಸಲ್ಲಿಸಲು ಮಿತ್ರಕೂಟ ಬದ್ಧವಾಗಿದೆ' ಎಂದು ಅಮಿತ್ ಶಾ ಅವರು ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

ಆತಂಕ ಬೇಡ: ಮೋದಿ ಕಿವಿಮಾತು

ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವ ಮುನ್ನ ಕೊನೆಯ ಸಚಿವ ಸಂಪುಟ ಸಭೆ ನಡೆಸಿದ ಮೋದಿ ಅವರು, 'ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿನ ರಾಜಕೀಯ ಅಡೆತಡೆಗಳ ಬಗ್ಗೆ ಹೆಚ್ಚು ಚಿಂತಿಸುವ ಅಗತ್ಯವಿಲ್ಲ' ಎಂದು ಸಹೋದ್ಯೋಗಿಗಳಿಗೆ ಕಿವಿಮಾತು ಹೇಳಿದರು. 'ಇಂಡಿಯಾ ಮೈತ್ರಿಕೂಟದ ಪಕ್ಷಗಳು ಗಳಿಸಿದ್ದಕ್ಕಿಂತ ಹೆಚ್ಚಿನ ಸ್ಥಾನಗಳನ್ನು ಬಿಜೆಪಿಯೊಂದೇ ಗಳಿಸಿದೆ. ಹೀಗಾಗಿ, ಪಕ್ಷದ ನಾಯಕರು ಆತಂಕ ಪಡಬಾರದು' ಎಂದು ಮೋದಿ ಹೇಳಿದರು.

'ಸೋಲು–ಗೆಲುವು ರಾಜಕೀಯದ ಭಾಗವಾಗಿದೆ. ನಂಬರ್ ಗೇಮ್ ನಡೆಯುತ್ತಲೇ ಇರುತ್ತದೆ. ನಿರೀಕ್ಷಿತ ಸ್ಥಾನಗಳು ಬಾರದೆ ಇರುವುದಕ್ಕೆ ಧೃತಿಗೆಡಬಾರದು. ಹತ್ತು ವರ್ಷಗಳಲ್ಲಿ ಉತ್ತಮ ಕೆಲಸ ಮಾಡಿದ್ದೇವೆ. ಮುಂದೆಯೂ ಮಾಡುತ್ತೇವೆ' ಎಂದು ಹೇಳಿದರು.

'ನಮ್ಮ ಸರ್ಕಾರವು ಎಲ್ಲೆಡೆ ಜನರ ನಿರೀಕ್ಷೆಗಳನ್ನು ಈಡೇರಿಸಿದೆ. ಭವಿಷ್ಯದಲ್ಲೂ ಅದೇ ರೀತಿ ಕಾರ್ಯನಿರ್ವಹಿಸಲಿದೆ. ನೀವೆಲ್ಲರೂ ಚೆನ್ನಾಗಿ ಕೆಲಸ ಮಾಡಿದ್ದೀರಿ. ಪಕ್ಷದ ಸಂಘಟನೆ ಮತ್ತು ಗೆಲುವಿಗೆ ಶ್ರಮಿಸಿದ್ದೀರಿ' ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ದಿನದ ಬೆಳವಣಿಗೆ
- ಎನ್‌ಡಿಎ ಸಭೆಯಲ್ಲಿ ಭಾಗಿಯಾಗಲು ನವದೆಹಲಿಗೆ ಧಾವಿಸಿದ ಮಿತ್ರ ಪಕ್ಷಗಳ ನಾಯಕರು
- ನರೇಂದ್ರ ಮೋದಿ ನೇತೃತ್ವದಲ್ಲಿ ಕೇಂದ್ರ ಸಚಿವ ಸಂಪುಟದ ಸಭೆ. 17ನೇ ಲೋಕಸಭೆಯ ವಿಸರ್ಜನೆಗೆ ಸಂಪುಟ ಶಿಫಾರಸು
- ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿಯಾಗಿ ಪ್ರಧಾನಿ ಸ್ಥಾನಕ್ಕೆ ಮೋದಿ ರಾಜೀನಾಮೆ. ಮೋದಿ ಹಾಗೂ ಸಂಪುಟ ಸದಸ್ಯರ ರಾಜೀನಾಮೆ ಅಂಗೀಕಾರ
- ಹೊಸ ಸರ್ಕಾರ ರಚನೆಯಾಗುವ ತನಕ ಹುದ್ದೆಯಲ್ಲಿ ಮುಂದುವರಿಯುವಂತೆ ಮುರ್ಮು ಸಲಹೆ
- ಪ್ರಧಾನಿ ನಿವಾಸದಲ್ಲಿ ಎನ್‌ಡಿಎ ಮೈತ್ರಿಕೂಟದ ನಾಯಕರ ಸಭೆ. ಮೈತ್ರಿಕೂಟದ ನಾಯಕರಾಗಿ ಮೋದಿ ಆಯ್ಕೆ

ಮದ್ರಾಸ್ ಮ್ಯೂಸಿಕ್ ಅಕಾಡೆಮಿ 3 ವರ್ಷದ ಕೋರ್ಸ್‌ಗೆ ಅರ್ಜಿ ಆಹ್ವಾನ

ಬೆಂಗಳೂರು: 'ದಿ ಮ್ಯೂಸಿಕ್ ಅಕಾಡೆಮಿ, ಮದ್ರಾಸ್' ನಡೆಸುವ ಕರ್ನಾಟಕ ಸಂಗೀತದ ಮೂರು ವರ್ಷಗಳ ಅಡ್ವಾನ್ಸ್ಡ್ ಡಿಪ್ಲೊಮಾ ಕೋರ್ಸ್‌ಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಸ್ವೀಕರಿಸಲು ಜೂನ್ 25 ಕೊನೆಯ ದಿನಾಂಕವಾಗಿದೆ. ಡಿಪ್ಲೊಮಾದಲ್ಲಿ ಪ್ರತಿ ವರ್ಷ ಎರಡು ಸೆಮಿಸ್ಟರ್‌ಗಳು ಇರುತ್ತವೆ (ಜುಲೈ ಮಧ್ಯದಿಂದ ನವೆಂಬರ್ ಅಂತ್ಯದವರೆಗೆ ಮತ್ತು ಜನವರಿ ಮಧ್ಯಭಾಗದಿಂದ ಏಪ್ರಿಲ್ ಅಂತ್ಯದವರೆಗೆ). 'ದಿ ಮ್ಯೂಸಿಕ್ ಅಕಾಡೆಮಿ'ಯಲ್ಲಿ ಜುಲೈನಿಂದ ತರಗತಿಗಳು ಆರಂಭವಾಗಲಿದ್ದು, ಸೋಮವಾರದಿಂದ ಶುಕ್ರವಾರದವರೆಗೆ ಬೆಳಿಗ್ಗೆ 8 ಗಂಟೆಯಿಂದ ಮಧ್ಯಾಹ್ನ 12.30ರವರೆಗೆ ನಡೆಯುತ್ತವೆ.

12ನೇ ತರಗತಿ ಅಥವಾ ದ್ವಿತೀಯ ಪಿಯು ಶಿಕ್ಷಣದಲ್ಲಿ ಉತ್ತೀರ್ಣರಾಗಿರುವವರು ಮತ್ತು 18ರಿಂದ 30 ವರ್ಷದ ಒಳಗಿರುವವರು ಪ್ರವೇಶ ಪಡೆಯಲು ಅರ್ಹರು. ಆಕಾಂಕ್ಷಿಗಳು ವರ್ಣಗಳು, ಕೃತಿಗಳನ್ನು ಹಾಡಬಲ್ಲವರಾಗಿರಬೇಕು ಮತ್ತು ಸಂಗೀತ ಕಲಿಕೆಗೆ ಅಗತ್ಯವಿರುವ ಮೂಲ 'ಮನೋಧರ್ಮ' ಹೊಂದಿರಬೇಕು. ಅರ್ಜಿಯು ಮ್ಯೂಸಿಕ್ ಅಕಾಡೆಮಿಯ ವೆಬ್‌ಸೈಟ್‌ನಲ್ಲಿ ಲಭ್ಯವಿದೆ. ಅಭ್ಯರ್ಥಿಗಳನ್ನು ಅರ್ಜಿಯೊಂದಿಗೆ ತಮ್ಮ ಸ್ವ-ವಿವರ ಮತ್ತು ತಮ್ಮ ಸಂಗೀತ ತರಬೇತಿಯ ವಿವರಗಳನ್ನು ಇ-ಮೇಲ್ ಮೂಲಕ ಕಳಿಸಬೇಕು.

ಹೆಚ್ಚಿನ ಮಾಹಿತಿಗಾಗಿ www.musicacademymadras.in ಲಾಗಿನ್ ಆಗಿ ಅಥವಾ 044-2811 2231 / 2811 6902 / 2811 5162 ಸಂಖ್ಯೆಗಳಿಗೆ ಕರೆ ಮಾಡಿ.

'ದಿ ಮ್ಯೂಸಿಕ್ ಅಕಾಡೆಮಿ'ಯು 2010ರಲ್ಲಿ ಕರ್ನಾಟಕ ಸಂಗೀತ ಕಲಿಕೆಯ ಉನ್ನತ ಶಾಲೆಯನ್ನು ಆರಂಭಿಸಿತು. ಇದು ಸಂಗೀತದಲ್ಲಿ ಶ್ರೇಷ್ಠತೆಯನ್ನು ಸಾಧಿಸುವ ದಿಸೆಯಲ್ಲಿ ವಿದ್ಯಾರ್ಥಿಗಳಿಗೆ ತರಬೇತಿ ನೀಡುತ್ತಿದೆ. ಸಂಗೀತ ಕ್ಷೇತ್ರದ ಧೀಮಂತರಿಂದ ಕಲಿಯುವುದರಿಂದ ವಿದ್ಯಾರ್ಥಿಗಳಿಗೆ ರಂಗದ ಮೇಲೆ ಪ್ರದರ್ಶನ ನೀಡಲು ನೆರವಾಗುತ್ತದೆ. ಮೂರು ವರ್ಷಗಳ ತರಬೇತಿಯ ಕೊನೆಯಲ್ಲಿ ವಿದ್ಯಾರ್ಥಿಗಳನ್ನು ತಾವು ಕಲಿತ ಸಂಯೋಜನೆ ಮತ್ತು ನೆರವಲ್ ಪ್ರಸ್ತುತಿಯನ್ನು ಆಧರಿಸಿ ಪರೀಕ್ಷೆಗೊಳಪಡಿಸಲಾಗುವುದು. ಅಲ್ಲದೇ, ಅವರು ಆಹ್ವಾನಿತ ಶ್ರೋತೃಗಳ ಎದುರು ಕಛೇರಿಯನ್ನೂ ನೀಡಬೇಕಾಗುತ್ತದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಭವಿಷ್ಯ
Astrology
★ಗುರು.ಶ್ರೀದೇವಾನಂದ★ ರವರಿಂದ ಕುಟುಂಬ ಮತ್ತು ದಾಂಪತ್ಯ ಕಲಹ ದುರ್ನಡತೆ,ದುಶ್ಚಟ ರೋಗ,ಸಾಲ, ಶತ್ರು,ಬಂಜೆತನ.ಲೈಂಗಿಕತೆ ಇನ್ನಿತರ ನಿಮ್ಮ ಯಾವುದೇ ಸ್ತ್ರೀಪುರುಷ ಸರ್ವಮನಇಚ್ಛಾ ವಶೀಕರಣ ಮಾಡಿಕೊಳ್ಳಿ.ಕೇಶರಾಶಿಗೆ ಕೇರಳ ತೈಲ ಲಭ್ಯ:9845005009

★||ಸ್ತ್ರೀಪುರುಷ ವಶೀಕರಣ||★ ನಿಮ್ಮ ಯಾವುದೇ ಕಠಿಣ ಗುಪ್ತ ಸಮಸ್ಯೆಗಳಿಗೆ, ಇಷ್ಟಪಟ್ಟವರು ನಿಮ್ಮಂತೆ ಆಗಲು, 1ದಿನದಲ್ಲಿ ಪರಿಹಾರ ಶತಸಿದ್ಧ. 9611968471

ಉದ್ಯೋಗಾವಕಾಶ
Drivers
ಝೀಮ್ಸ್ ಪ್ರೈ. ಲಿಮಿಟೆಡ್ ರಾಜಾಜಿನಗರ, ಎಚ್‌ಬಿಆರ್ ಲೇಔಟ್ ಮತ್ತು ಕೂಡ್ಲುಗೇಟ್ ಬೆಂಗಳೂರಿನಲ್ಲಿ ಕ್ಯಾಶ್ ವ್ಯಾನ್‌ಗಾಗಿ ಚಾಲಕರನ್ನು ಬಯಸಿದೆ. ಸಂದರ್ಶನದ ದಿನಾಂಕ ಜೂನ್ 05 ರಿಂದ 10 ರವರೆಗೆ, ಸಂಪರ್ಕಿಸಿ 8147529866, 8589011298

ಚಾಲಕ ಅಗತ್ಯವಿದೆ! ಬೆಂಗಳೂರಿನಲ್ಲಿ ಎವರೆಸ್ಟ್ ಫ್ಲೀಟ್ CNG ಕಾರ್ ಅನ್ನು ಓಡಿಸಿ ಮತ್ತು ತಿಂಗಳಿಗೆ ₹35,000* ಸಂಪಾದಿಸಿ!! +91 9493275000ಗೆ ಕರೆ ಮಾಡಿ

General
ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣ ಬೇಕಾಗಿದ್ದಾರೆ . ಟಯೋಟಾ,TVS, ಬ್ರಿಟಾನಿಯಾ,ಟಾಟಾ ಮೋಟಾರ್ಸ್ ಕಂಪನಿಗಳಿಗೆ SSLC,PUC,Degree, ITI ನವರು.18,000/- 60,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9035277967

Part-Time Jobs
WORK FROM Home: ಮನೆಯಲ್ಲಿ ಕುಳಿತು 10,000–20,000 ದುಡಿಯಬಹುದು. ವಯೋಮಿತಿ ಇರುವುದಿಲ್ಲ. ಮೊದಲು ಬಂದವರಿಗೆ ಆದ್ಯತೆ. 8861041526, 9945791526.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಅಣಬೆ ತರಬೇತಿ ಪಡೆದು ಮನೆಯಿಂದಲೇ ಅಣಬೆ ಬೆಳಸಿ ತಿಂಗಳಿಗೆ 30,000ಕ್ಕೂ ಹೆಚ್ಚು ಸಂಪಾದಿಸಿ ತರಬೇತಿಗಾಗಿ ಬೆಂಗಳೂರು 8095555516 ಶಿವಮೊಗ್ಗ 8095555517

Wanted
ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-ರಿಂದ 20,000/- ESI,PF ಸೌಲಭ್ಯವಿರುತ್ತದೆ. ಬೆಂಗಳೂರು-76. ತಕ್ಷಣ ಸಂಪರ್ಕಿಸಿ: 7899235388, 9148525233

ಪ್ರವಾಸ
Travel Agencies
6/7/2024 ರಿಂದ 9 ದಿನಗಳ ನೇಪಾಳ ಕಾಟ್ಮಂಡು ಪಶುಪತಿನಾಥ ಮುಕ್ತಿನಾಥ್ ಪೋಕ್ರಾ ಅಯೋಧ್ಯೆ ಕಾಶಿ ವಿಮಾನದಲ್ಲಿ 44000/ ಶ್ರೀರಾಮ್ ಟೂರ್ 9108933383

Travel
8 ದಿನಗಳ ಮುಕ್ತಿನಾಥ ನೇಪಾಳ ವಿಶೇಷ. 7/11 ದಿನಗಳು ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್. 11 ದಿನಗಳ ವಿಯೆಟ್ನಾಂ ಮತ್ತು ಕಾಂಬೋಡಿಯ. 6 ದಿನಗಳ ಬಾಲಿ. 13 ದಿನಗಳ ಚಾರ್‌ಧಾಮ್. 9/5 ದಿನಗಳ ಕಾಶಿ,ಅಯೋಧ್ಯ,ಗಯಾ. 6 ದಿನಗಳ ಶ್ರೀಲಂಕಾ. ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್. 9900080793 9900080792

12.07.2024 13/17ದಿನಗಳು ರೈಲು/ವಿಮಾನದಲ್ಲಿ ಅಮರನಾಥ ವೈಷ್ಣೋದೇವಿ ಕಾಶ್ಮೀರ ಕುರುಕ್ಷೇತ್ರ ಅಮೃತಸರ್ ಆಗ್ರ,ದೆಹಲಿ ಇತ್ಯಾದಿ 28000/ 40000/(ಕೆಲವೇ ಸೀಟುಗಳಿವೆ) ಆಗಸ್ಟ್/ ಸೆಪ್ಟಂಬರ್‌ನಲ್ಲಿ 6ದಿನಗಳು ಕಾಶಿ ಅಯೋಧ್ಯಯಾತ್ರೆಗೆ 32000/ 'ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್' 9739847429/ 9845560219/ 9886968166

★ಶ್ರೀಶ್ರೇಯಸ್ ಟೂರ್ಸ್★ 25.06.2024 10ದಿನಗಳ:ಉ ಅಯೋಧ್ಯೆ,ಅಖಂಡ ನೇಪಾಳರಾಷ್ಟ್ರ ಪ್ರವಾಸ.05.07.24 07ದಿನಗಳು ಭೂತಾನ್ ರಾಷ್ಟ್ರ ಪ್ರವಾಸ. 20.07.24 15ದಿನಗಳು ಅಖಂಡ ಮಧ್ಯಪ್ರದೇಶ ರಾಜ್ಯಪ್ರವಾಸ. (ಅಮರಕಂಠಕಮಯ್ಯಾರ್ ಸಹಿತ) 8073824856/ 9206979202/ 8792319181

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9845114560 | +91 9900428036

ಹಾರ್ದಿಕ್ ಪಾಂಡ್ಯಗೆ 3 ವಿಕೆಟ್: ಜಸ್‌ಪ್ರೀತ್ ಬೂಮ್ರಾ, ಅರ್ಷದೀಪ್ ಸಿಂಗ್‌ಗೆ ತಲಾ 2 ವಿಕೆಟ್

ರೋಹಿತ್ ಅರ್ಧಶತಕ: ಭಾರತ ಶುಭಾರಂಭ

ವಿಕೆಟ್ ಗಳಿಸಿದ ಹಾರ್ದಿಕ್ ಪಾಂಡ್ಯ ಅವರನ್ನು ಅಭಿನಂದಿಸಿದ ಸಹ ಆಟಗಾರರು –ಎಎಫ್‌ಪಿ ಚಿತ್ರ

ನ್ಯೂಯಾರ್ಕ್ (ಪಿಟಿಐ): ವೇಗದ ಬೌಲರ್‌ಗಳ ಪರಿಣಾಮಕಾರಿ ದಾಳಿ ಮತ್ತು ನಾಯಕ ರೋಹಿತ್ ಶರ್ಮಾ ಅವರ ಅರ್ಧಶತಕದ ನೆರವಿನಿಂದ ಭಾರತ ತಂಡವು ಟಿ20 ಕ್ರಿಕೆಟ್ ವಿಶ್ವಕಪ್‌ನಲ್ಲಿ ಶುಭಾರಂಭ ಮಾಡಿತು.

ನಾಸೌ ಕೌಂಟಿ ಕ್ರೀಡಾಂಗಣದಲ್ಲಿ ಬುಧವಾರ ನಡೆದ 'ಎ' ಗುಂಪಿನ ಪಂದ್ಯದಲ್ಲಿ ಐರ್ಲೆಂಡ್ ತಂಡದ ವಿರುದ್ಧ ಭಾರತ 8 ವಿಕೆಟ್‌ಗಳ ಸುಲಭ ಜಯ ಸಾಧಿಸಿತು. ಟಿ20 ಕ್ರಿಕೆಟ್‌ನಲ್ಲಿ ಭಾರತದ ವಿರುದ್ಧ ಐರ್ಲೆಂಡ್‌ಗೆ ಸತತ ಎಂಟನೇ ಸೋಲು ಇದಾಗಿದೆ.

ಐರ್ಲೆಂಡ್ ನೀಡಿದ್ದ 97 ರನ್‌ಗಳ ಅಲ್ಪ ಮೊತ್ತದ ಗುರಿಯನ್ನು ಬೆನ್ನತ್ತಿದ ಭಾರತ ತಂಡಕ್ಕೆ ಎದುರಾಳಿ ತಂಡದ ಮಾರ್ಕ್ ಅಡೇರ್ ಆರಂಭದಲ್ಲೇ ಪೆಟ್ಟು ನೀಡಿದರು. ಆರಂಭಿಕ ಆಟಗಾರನಾಗಿ ಬಂದಿದ್ದ ವಿರಾಟ್ ಕೊಹ್ಲಿ (1) ಕ್ರೀಸ್‌ನಿಂದ ಮುಂದೆ ಬಂದು ಹೊಡೆದ ಚೆಂಡನ್ನು ಬೌಂಡರಿ ಲೈನ್‌ನಲ್ಲಿ ಬೆನ್ ವೈಟ್ ಕ್ಯಾಚ್ ಹಿಡಿದರು.

ಆದರೆ, ನಾಯಕ ರೋಹಿತ್ ಶರ್ಮಾ (ಗಾಯಾಳಾಗಿ ನಿವೃತ್ತಿ 52; 37ಎ, 4x4, 6x3) ನಿಧಾನಗತಿಯ ಪಿಚ್‌ನಲ್ಲಿ ಸಂಯಮದಿಂದ ಆಡಿದರು. ಎರಡನೇ ವಿಕೆಟ್‌ಗೆ ರಿಷಭ್ ಪಂತ್ (ಔಟಾಗದೇ 36) ಅವರೊಂದಿಗೆ 54 ರನ್‌ಗಳ ಜೊತೆಯಾಟವಾಡಿದರು.

ಐಪಿಎಲ್‌ನಲ್ಲಿ ಗುಜರಾತ್ ಟೈಟನ್ಸ್ ತಂಡಕ್ಕೆ ಆಡಿದ್ದ ವೇಗಿ ಜೋಶುವಾ ಲಿಟಲ್ ಅವರ ಶಾರ್ಟ್ ಪಿಚ್ ಎಸೆತವು ಭುಜಕ್ಕೆ ಬಡಿದು ನೋವುಂಟಾದ ಕಾರಣ ರೋಹಿತ್ ಮೈದಾನದಿಂದ ನಿರ್ಗಮಿಸಿದರು. ಈ ವೇಳೆ ತಂಡವು ಗೆಲುವಿನ ಸನಿಹ ಬಂದಿತ್ತು. ನಂತರ ಬಂದ ಸೂರ್ಯಕುಮಾರ್ ಯಾದವ್ (2) ನಿರಾಸೆ ಮೂಡಿಸಿದರೂ, ಪಂತ್ ಸಿಕ್ಸರ್‌ನೊಂದಿಗೆ ತಂಡವನ್ನು ಗೆಲುವಿನ ದಡ ಸೇರಿಸಿದರು. ಭಾರತ 12.2 ಓವರ್‌ಗಳಲ್ಲಿ 2 ವಿಕೆಟ್‌ಗೆ 97 ರನ್ ಗಳಿಸಿತು.

ಇದಕ್ಕೂ ಮೊದಲು ಟಾಸ್ ಗೆದ್ದ ರೋಹಿತ್ ಶರ್ಮಾ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ನಾಲ್ವರು ವೇಗಿಗಳು ಮತ್ತು ಇಬ್ಬರು ಸ್ಪಿನ್ನರ್‌ಗಳೊಂದಿಗೆ ಕಣಕ್ಕಿಳಿದ ಅವರ ಯೋಜನೆ ಫಲ ನೀಡಿತು.

ಎಡಗೈ ವೇಗಿ ಅರ್ಷದೀಪ್ ಸಿಂಗ್ (35ಕ್ಕೆ2), ಜಸ್‌ಪ್ರೀತ್ ಬೂಮ್ರಾ (6ಕ್ಕೆ2) ಹಾಗೂ ಹಾರ್ದಿಕ್ ಪಾಂಡ್ಯ (27ಕ್ಕೆ3) ಅವರು ಐರ್ಲೆಂಡ್ ತಂಡವನ್ನು ಕಟ್ಟಿ ಹಾಕಿದರು. ಇದರಿಂದಾಗಿ ಐರ್ಲೆಂಡ್ ತಂಡವು 50 ರನ್‌ಗಳಿಗೆ 8 ವಿಕೆಟ್ ಕಳೆದುಕೊಂಡಿತು.

ಇನಿಂಗ್ಸ್‌ನ ಮೂರನೇ ಓವರ್‌ನಲ್ಲಿ ನಾಯಕ ಪಾಲ್ ಸ್ಟರ್ಲಿಂಗ್ ವಿಕೆಟ್ ಕಬಳಿಸಿದ ಅರ್ಷದೀಪ್ ಸಿಂಗ್ ಮೊದಲ ಪೆಟ್ಟುಕೊಟ್ಟರು. ಅದೇ ಓವರ್‌ನಲ್ಲಿ ಆ್ಯಂಡ್ರ್ಯೂ ಬಾಲ್‌ಬರ್ನಿ ವಿಕೆಟ್ ಕೂಡ ಸಿಂಗ್ ಅವರ ಖಾತೆ ಸೇರಿತು. ಐರ್ಲೆಂಡ್ ತಂಡಕ್ಕೆ ಅರ್ಷದೀಪ್ ಮಾಡಿದ ಈ ಗಾಯಕ್ಕೆ ಉಳಿದ ಬೌಲರ್‌ಗಳು ಉಪ್ಪು ಸವರಿದರು.

ಮಧ್ಯಮವೇಗಿ ಹಾರ್ದಿಕ್ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳ ವಿಕೆಟ್ ಕಬಳಿಸಿದರು. ಇನ್ನೊಂದು ತುದಿಯಿಂದ ಜಸ್‌ಪ್ರೀತ್ ಬೂಮ್ರಾ ಅವರ ಬಿರುಗಾಳಿ ವೇಗದ ಎಸೆತಗಳಿಗೆ ಬ್ಯಾಟರ್‌ಗಳು ರನ್ ಗಳಿಸಲು ಪರದಾಡಿದರು. ಅವರು 3 ಓವರ್‌ಗಳಲ್ಲಿ ಕೊಟ್ಟಿದ್ದು ಕೇವಲ 6 ರನ್ ಮಾತ್ರ. ಅಲ್ಲದೇ ಎರಡು ವಿಕೆಟ್ ಕಬಳಿಸಿದರು. ಮಧ್ಯಮ ಕ್ರಮಾಂಕದ ಬ್ಯಾಟರ್ ಗರೆತ್ ಡೆಲನಿ (26; 14ಎ, 4X2, 6X2) ಅವರ ದಿಟ್ಟ ಬ್ಯಾಟಿಂಗ್ ಗಮನಸೆಳೆಯಿತು. ಅದರಿಂದಾಗಿ ತಂಡದ ಮೊತ್ತ ಸ್ವಲ್ಪ ಬೆಳೆಯಿತು. ಜೋಶುವಾ ಲಿಟಲ್ (14; 13ಎ) ಅವರೂ ಮಹತ್ವದ ಕಾಣಿಕೆ ನೀಡಿದರು.

ಭಾರತ ಶನಿವಾರ ನ್ಯೂಯಾರ್ಕ್‌ನಲ್ಲಿ ಪಾಕಿಸ್ತಾನ ತಂಡವನ್ನು ಎದುರಿಸಲಿದ್ದು, ಈ ಪಂದ್ಯಕ್ಕೆ ರೋಹಿತ್ ಶರ್ಮಾ ಲಭ್ಯವಾಗುವರೇ ಎಂಬ ಮಾಹಿತಿಯಿಲ್ಲ.

ಸ್ಕೋರ್ ಕಾರ್ಡ್

ಐರ್ಲೆಂಡ್: 96 (16 ಓವರ್‌ಗಳಲ್ಲಿ)
ಬಾಲ್‌ಬಿರಿನಿ ಬಿ ಅರ್ಷದೀಪ್ 5 (10ಎ, 4x1)
ಸ್ಟರ್ಲಿಂಗ್ ಸಿ ಪಂತ್ ಬಿ ಅರ್ಷದೀಪ್ 2 (6ಎ)
ಲಾರ್ಕನ್ ಬಿ ಪಾಂಡ್ಯ 10 (13ಎ, 4x2)
ಹ್ಯಾರಿ ಸಿ ಕೊಹ್ಲಿ ಬಿ ಬೂಮ್ರಾ 4 (16ಎ)
ಕರ್ಟಿಸ್ ಸಿ ಪಂತ್ ಬಿ ಪಾಂಡ್ಯ 12 (8ಎ, 4x1, 6x1)
ಡಾಕ್ರೆಲ್ ಸಿ ಬೂಮ್ರಾ ಬಿ ಸಿರಾಜ್ 3 (5ಎ)
ಡೆಲನಿ ರನ್‌ಔಟ್ (ಸಿರಾಜ್/ಪಂತ್) 26 (14ಎ, 4x2, 6x2)
ಅಡೇರ್ ಸಿ ದುಬೆ ಬಿ ಪಾಂಡ್ಯ 3 (2ಎ)
ಮೆಕಾರ್ತಿ ಸಿ ಅಂಡ್ ಬಿ ಪಟೇಲ್ 0 (6ಎ)
ಲಿಟಲ್ ಬಿ ಬೂಮ್ರಾ 14 (13ಎ, 4x2)
ಬೆನ್ ಔಟಾಗದೇ 2 (4ಎ)
ಇತರೆ: 15 (ಲೆಗ್‌ಬೈ 5, ನೋಬಾಲ್ 1, ವೈಡ್ 9)
ವಿಕೆಟ್ ಪತನ: 1-7 (ಪಾಲ್ ಸ್ಟರ್ಲಿಂಗ್, 2.1), 2-9 (ಆ್ಯಂಡಿ ಬಾಲ್‌ಬಿರಿನಿ, 2.6), 3-28 (ಲಾರ್ಕನ್ ಟಕರ್, 6.5), 4-36 (ಹ್ಯಾರಿ ಟೆಕ್ಟರ್, 7.6), 5-44 (ಕರ್ಟಿಸ್ ಕ್ಯಾಂಪರ್ 8.6), 6-46 (ಜಾರ್ಜ್ ಡಾಕ್ರೆಲ್, 9.4), 7-49 (ಮಾರ್ಕ್ ಅಡೇರ್, 10.1), 8-50 (ಬ್ಯಾರಿ ಮೆಕಾರ್ತಿ, 11.2), 9-77 (ಜೋಶ್ ಲಿಟಲ್, 14.2), 10-96 (ಗರೆತ್ ಡೆಲನಿ, 15.6)
ಬೌಲಿಂಗ್: ಅರ್ಷದೀಪ್ ಸಿಂಗ್ 4–0–35–2, ಮೊಹಮ್ಮದ್ ಸಿರಾಜ್ 3–0–13–1, ಜಸ್‌ಪ್ರೀತ್ ಬೂಮ್ರಾ 3–1–6–2, ಹಾರ್ದಿಕ್ ಪಾಂಡ್ಯ 4–1–27–3, ಅಕ್ಷರ್ ಪಟೇಲ್ 1–0–3–1, ರವೀಂದ್ರ ಜಡೇಜ 1–0–7–0

ಭಾರತ: 2 ವಿಕೆಟ್‌ಗೆ 97 (12.2 ಓವರ್‌ಗಳಲ್ಲಿ)
ರೋಹಿತ್ (ಗಾಯಾಳಾಗಿ ನಿವೃತ್ತಿ) 52 (37ಎ, 4x4, 6x3)
ವಿರಾಟ್ ಸಿ ವೈಟ್ ಬಿ ಅಡೇರ್ 1 (5ಎ)
ರಿಷಭ್ ಪಂತ್ ಔಟಾಗದೇ 36 (26ಎ, 4x3, 6x2)
ಸೂರ್ಯಕುಮಾರ್ ಸಿ ಡಾಕ್ರೆಲ್ ಬಿ ವೈಟ್ 2 (4ಎ)
ಶಿವಂ ದುಬೆ ಔಟಾಗದೇ 0 (2ಎ)
ಇತರೆ: 6 (ವೈಡ್ 6)
ವಿಕೆಟ್ ಪತನ: 1-22 (ವಿರಾಟ್ ಕೊಹ್ಲಿ, 2.4), 1-76* (ರೋಹಿತ್ ಶರ್ಮಾ, ಗಾಯಾಳಾಗಿ ನಿವೃತ್ತಿ), 2-91 (ಸೂರ್ಯಕುಮಾರ್, 11.4)
ಬೌಲಿಂಗ್: ಮಾರ್ಕ್ ಅಡೇರ್ 4–0–27–1, ಜೋಶುವಾ ಲಿಟಲ್ 4–0–42–0, ಬ್ಯಾರಿ ಮೆಕಾರ್ತಿ 2.2–0–18–0, ಕರ್ಟಿಸ್ ಕ್ಯಾಂಪರ್ 1–0–4–0, ಬೆನ್ ವೈಟ್ 1–0–6–1
ಪಂದ್ಯದ ಆಟಗಾರ: ಜಸ್‌ಪ್ರೀತ್ ಬೂಮ್ರಾ

ಫಲಿತಾಂಶ: ಭಾರತಕ್ಕೆ 8 ವಿಕೆಟ್‌ಗಳ ಜಯ

ಆಜಂ ನಾಯಕತ್ವಕ್ಕೆ 'ಅಮೆರಿಕ' ಸವಾಲು

ಡಲ್ಲಾಸ್ (ಪಿಟಿಐ): ಬಾಬರ್ ಆಜಂ ನಾಯಕತ್ವದ ಪಾಕಿಸ್ತಾನ ತಂಡವು ಗುರುವಾರ ಆತಿಥೇಯ ಅಮೆರಿಕ ತಂಡದ ವಿರುದ್ಧ ಕಣಕ್ಕಿಳಿಯಲಿದೆ.

ಗ್ರ್ಯಾಂಡ್ ಪ್ರಿಯರಿ ಕ್ರೀಡಾಂಗಣದಲ್ಲಿ ನಡೆಯಲಿರುವ ಎ ಗುಂಪಿನ ಪಂದ್ಯದಲ್ಲಿ ಪಾಕ್ ತಂಡವು ಶುಭಾರಂಭದ ನಿರೀಕ್ಷೆಯಲ್ಲಿದೆ. ಪಾಕ್ ತಂಡಕ್ಕೆ ಇದು ಟೂರ್ನಿಯಲ್ಲಿ ಮೊದಲ ಪಂದ್ಯವಾಗಿದೆ. ಆದರೆ ಅಮೆರಿಕ ತಂಡಕ್ಕೆ ಇದು ಎರಡನೇಯದ್ದು. ತನ್ನ ಮೊದಲ ಪಂದ್ಯದಲ್ಲಿ ಕೆನಡಾ ತಂಡದ ವಿರುದ್ಧ ಜಯಿಸಿತ್ತು.

ಮೊನಾಂಕ್ ಪಟೇಲ್

ಪಾಕ್ ತಂಡವು ಈಚೆಗೆ ಇಂಗ್ಲೆಂಡ್ ವಿರುದ್ಧದ ಟಿ20 ಸರಣಿಯಲ್ಲಿ 0–2ರಿಂದ ಸೋತಿತ್ತು. ಅದಕ್ಕಿಂತ ಮೊದಲು ನ್ಯೂಜಿಲೆಂಡ್ ಎದುರಿನ ಸರಣಿಯಲ್ಲಿ 2–2ರಿಂದ ಸಮಬಲ ಸಾಧಿಸಿತ್ತು. ಆದರೆ ಆ ತಂಡದಲ್ಲಿ ವಿಶ್ವಕಪ್ ಆಡುವ ಬಳಗದ ಕೆಲವು ಆಟಗಾರರು ಇರಲಿಲ್ಲ.

ಬಾಬರ್ ಅವರು ಮರಳಿ ನಾಯಕತ್ವ ವಹಿಸಿಕೊಂಡ ನಂತರ ಪಾಕ್ ತಂಡವು ಆಡುತ್ತಿರುವ ವಿಶ್ವಕಪ್ ಟೂರ್ನಿ ಇದಾಗಿದೆ. ಆದ್ದರಿಂದ ಅವರ ಮೇಲೆ ನಿರೀಕ್ಷೆಯ ಭಾರ ಹೆಚ್ಚಿದೆ. ಬಾಬರ್ ಹಾಗೂ ಮೊಹಮ್ಮದ್ ರಿಜ್ವಾನ್ ಅವರು ಪಾಕ್ ತಂಡದ ಅನುಭವಿ ಹಾಗೂ ವಿಶ್ವಾಸಾರ್ಹ ಆಟಗಾರರಾಗಿದ್ದಾರೆ. ಟಿ20 ಕ್ರಿಕೆಟ್‌ನಲ್ಲಿ ಪರಿಣತ ಬ್ಯಾಟರ್‌ಗಳಾಗಿದ್ದಾರೆ.

ಬೌಲಿಂಗ್ ವಿಭಾಗವು ಉತ್ತಮವಾಗಿದೆ. ಶಾಹೀನ್ ಆಫ್ರಿದಿ, ನಸೀಮ್ ಶಹಾ, ಹ್ಯಾರಿಸ್ ರವೂಫ್ ಮತ್ತು ಮೊಹಮ್ಮದ್ ಅಮೀರ್ ಅವರು ಇರುವ ಬೌಲಿಂಗ್ ಪಡೆಯು ಎದುರಾಳಿಯನ್ನು ಅಲ್ಪಮೊತ್ತಕ್ಕೆ ಕಟ್ಟಿಹಾಕುವ ಸಾಮರ್ಥ್ಯ ಹೊಂದಿದೆ.

ಭಾರತ ಮೂಲದ ಮೊನಾಂಕ್ ಪಟೇಲ್ ನಾಯಕತ್ವದ ಅಮೆರಿಕ ತಂಡದಲ್ಲಿ ಕನ್ನಡಿಗ ನಾಸ್ತುಷ್ ಕೆಂಜಿಗೆ ಅವರೂ ಇದ್ದಾರೆ. ಪಾಕಿಸ್ತಾನ ಮೂಲದ ಅಲಿ ಖಾನ್ ತಂಡದಲ್ಲಿದ್ದಾರೆ.

ನ್ಯೂಗಿನಿ–ಯುಗಾಂಡ ಹಣಾಹಣಿ

ಗಯಾನ (ಪಿಟಿಐ): ಪಾಪುವಾ ನ್ಯೂಗಿನಿ ಮತ್ತು ಯುಗಾಂಡ ತಂಡವು ಸಿ ಗುಂಪಿನ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಗುರುವಾರ ಪ್ರಾವಿಡೆನ್ಸ್ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ಉಭಯ ತಂಡಗಳು ಆಡಲಿವೆ. ನ್ಯೂಗಿನಿ ತಂಡವು ತನ್ನ ಮೊದಲ ಹಣಾಹಣಿಯಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಸೋತಿತ್ತು. ಯುಗಾಂಡ ತಂಡವು ಅಫ್ಗಾನಿಸ್ತಾನಕ್ಕೆ ಮಣಿದಿತ್ತು.

ಪಾಕಿಸ್ತಾನ ತಂಡದ ನಾಯಕ ಬಾಬರ್ ಆಜಂ– ಪಿಟಿಐ ಚಿತ್ರ

ರಾಷ್ಟ್ರೀಯ ಬ್ರಿಜ್ ಚಾಂಪಿಯನ್‌ಷಿಪ್ ಕಲ್ಪನಾ, ವಿದ್ಯಾ ಜೋಡಿ ಫೈನಲ್‌ಗೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಯೂತ್ ವಿಶ್ವ ಚಾಂಪಿಯನ್‌ಷಿಪ್‌ನ ಪದಕ ವಿಜೇತ ಜೋಡಿ ಕಲ್ಪನಾ ಗುರ್ಜರ್ ಮತ್ತು ವಿದ್ಯಾ ಪಟೇಲ್ ಇಲ್ಲಿ ನಡೆಯುತ್ತಿರುವ ಬೇಸಿಗೆ ಕಾಲದ ರಾಷ್ಟ್ರೀಯ ಬ್ರಿಜ್ ಚಾಂಪಿಯನ್‌ಷಿಪ್‌ನ ಮಹಿಳೆಯರ ವಿಭಾಗದಲ್ಲಿ ಬುಧವಾರ ಪ್ರಶಸ್ತಿ ಸುತ್ತು ಪ್ರವೇಶಿಸಿದರು.

ಭಾರತ ಬ್ರಿಜ್ ಫೆಡರೇಷನ್ ಮತ್ತು ಕರ್ನಾಟಕ ರಾಜ್ಯ ಬ್ರಿಜ್ ಸಂಸ್ಥೆಯ ಸಹಯೋಗದಲ್ಲಿ ಕರಾವಳಿ ಬ್ರಿಜ್ ಸಂಸ್ಥೆ, ನಗರದ ಮೋತಿ ಮಹಲ್ ಹೋಟೆಲ್‌ನಲ್ಲಿ ಆಯೋಜಿಸಿರುವ ಚಾಂಪಿಯನ್‌ಷಿಪ್‌ನ ಗೌರಿ ರಾವ್ ಸ್ಮಾರಕ ಟ್ರೋಫಿಗಾಗಿ ಗುರುವಾರ ನಡೆಯಲಿರುವ ಸ್ಪರ್ಧೆಯಲ್ಲಿ ವಸಂತಿ ಶಾ ಮತ್ತು ನಿಕಿತಾ ಕಮಲ್ ಕೂಡ ಹೋರಾಡಲಿದ್ದಾರೆ.

10 ದಿನಗಳ ಚಾಂಪಿಯನ್‌ಷಿಪ್‌ನ ಮೊದಲೆರಡು ದಿನಗಳು ಮಹಿಳೆಯರ ಸ್ಪರ್ಧೆಗೆ ಮೀಸಲು. 23 ಪೇರ್‌ಗಳ ಮೊದಲ ದಿನದ ಹಣಾಹಣಿಯ ಕೊನೆಯಲ್ಲಿ ನವದೆಹಲಿಯ ವಸಂತಿ ಶಾ ಮತ್ತು ನಿಕಿತಾ ಕಮಲ್ ರ್‍ಯಾಂಕಿಂಗ್‌ನಲ್ಲಿ ಅಗ್ರಸ್ಥಾನ ಗಳಿಸಿದರು. ಅವರು 135.91 ಸ್ಕೋರು ಕಲೆ ಹಾಕಿದರು. 79.45 ಸ್ಕೋರು ಗಳಿಸಿದ ವಿದ್ಯಾ ಮತ್ತು ಕಲ್ಪನಾ ಎರಡನೇ ಸ್ಥಾನ ಗಳಿಸಿದರು. 2022ರ ಯೂತ್ ವಿಶ್ವ ಚಾಂಪಿಯನ್‌ಷಿಪ್‌ನ ಮಹಿಳೆಯರ ಪೇರ್ ವಿಭಾಗದಲ್ಲಿ ಈ ಜೋಡಿ ಬೆಳ್ಳಿ ಪದಕ ಗಳಿಸಿತ್ತು. ಕಲ್ಪನಾ ವೈಯಕ್ತಿಕ ವಿಭಾಗದಲ್ಲಿ ಚಿನ್ನ ಗೆದ್ದಿದ್ದರು.

ಫೈನಲ್ ಸುತ್ತು ಪ್ರವೇಶಿಸಿದ ಜೋಡಿಗಳು: ವಸಂತಿ ಶಾ, ನಿಕಿತಾ ಕಮಲ್–1 (ಸ್ಕೋರು: 135.91), ಕಲ್ಪನಾ ಗುರ್ಜರ್, ವಿದ್ಯಾ ಪಟೇಲ್–2 (79.45), ಹಿಮಾನಿ ಖಂಡೇಲ್ವಾಲ, ವೃಂದಾ ಜುಂಜುನ್‌ವಾಲ–3 (74.23), ಪ್ರಿಯಾ ಬಾಲಸುಬ್ರಹ್ಮಣ್ಯನ್, ಬಿಂದಿಯಾ ಕೊಹ್ಲಿ–4 (65.86), ಆಶಾ ಶರ್ಮಾ, ಸವ್ಲೀನ್ ತಡಾನಿ–5 (47.05), ಸಾರಿಕಾ ಮಿತ್ತಲ್, ಶೀತಲ್ ಬನ್ಸಾಲ್–6 (41.82), ದೇವಿ ಮುತ್ತು ಭಟ್ನಾಗರ್, ಅಲಕಾ ಜೈನ್–7 (28.23), ಮೋನಿಕಾ ಜಾಜು, ಜೇಸಲ್ ದಾಬ್ರಿವಾಲ–8 (28.23), ಗೋಪಿಕಾ ತಂಡನ್, ಬಿಂದಿಯಾ ನಾಯ್ದು–9 (23), ಸ್ಮಿತಾ ಗೋವಿಲ್ಕರ್, ಸುರಭಿ ಪ್ರವೀಣ್ ಲೆಲೆ–10 (8.36), ರಿಚಾ ಶ್ರೀರಾಮ್, ಕಾಮನಾ ಶರ್ಮಾ–11 (7.32), ಉಷಾ ಕಾಬ್ರ, ಮರಿಯಾನ್ ಕರ್ಮಾರ್ಕರ್–12 (1.05).

ದಾಖಲೆ ಬರೆಯುವ ತವಕದಲ್ಲಿ ಆಸ್ಟ್ರೇಲಿಯಾ ತಂಡ

ಗೆಲುವಿನ ನಿರೀಕ್ಷೆಯಲ್ಲಿ ಮಾರ್ಷ್ ಪಡೆ

ಬ್ರಿಜ್‌ಟೌನ್, ಬಾರ್ಬಡೋಸ್ (ಪಿಟಿಐ): ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಗೌರವ ಮತ್ತು ಏಕದಿನ ವಿಶ್ವಕಪ್ ಟ್ರೋಫಿಯನ್ನು ಕಳೆದ ಒಂದೇ ವರ್ಷದ ಅವಧಿಯಲ್ಲಿ ಗೆದ್ದಿರುವ ಆಸ್ಟ್ರೇಲಿಯಾ ಈಗ ದಾಖಲೆ ನಿರ್ಮಿಸುವತ್ತ ಹೆಜ್ಜೆ ಇಟ್ಟಿದೆ.

ವೆಸ್ಟ್ ಇಂಡೀಸ್ ಮತ್ತು ಅಮೆರಿಕ ಜಂಟಿ ಆತಿಥ್ಯದಲ್ಲಿ ನಡೆಯುತ್ತಿರುವ ಟಿ20 ವಿಶ್ವಕಪ್ ಜಯಿಸಿ, ಮೂರು ಮಾದರಿಗಳಲ್ಲಿಯೂ ಒಂದೇ ವರ್ಷದ ಅವಧಿಯಲ್ಲಿ ಚಾಂಪಿಯನ್ ಆದ ದಾಖಲೆ ಬರೆಯುವತ್ತ ಚಿತ್ತ ನೆಟ್ಟಿದೆ. ಅದಕ್ಕಾಗಿ ಗುರುವಾರದಿಂದ ಅಭಿಯಾನ ಆರಂಭಿಸಲಿದೆ.

ತನ್ನ ಮೊದಲ ಪಂದ್ಯದಲ್ಲಿ ಒಮಾನ್ ವಿರುದ್ಧ ಕಣಕ್ಕಿಳಿಯಲಿದೆ. 2021ರಲ್ಲಿ ಆಸ್ಟ್ರೇಲಿಯಾ ತಂಡವು ಟಿ20 ವಿಶ್ವಕಪ್ ಜಯಿಸಿತ್ತು. ಆದರೆ ನಂತರದ ವರ್ಷದಲ್ಲಿ ಟಿ20 ವಿಶ್ವಕಪ್ ಜಯಿಸುವಲ್ಲಿ ಎಡವಿತು. ಆದರೆ ಉಳಿದೆರಡೂ ಮಾದರಿಗಳಲ್ಲಿ ಮೇಲುಗೈ ಸಾಧಿಸಿತು. ಅದಕ್ಕಾಗಿಯೇ ಈ ಟೂರ್ನಿಯಲ್ಲಿ ಮಿಚೆಲ್ ಮಾರ್ಷ್ ನಾಯಕತ್ವದ ಬಳಗದ ಮೇಲೆ ಎಲ್ಲರ ಕಣ್ಣು ನೆಟ್ಟಿದೆ. ಸ್ವತಃ ಮಾರ್ಷ್, ಆರಂಭಿಕ ಬ್ಯಾಟರ್ ಟ್ರಾವಿಸ್ ಹೆಡ್, ಡೇವಿಡ್ ವಾರ್ನರ್, ಆಲ್‌ರೌಂಡರ್ ಕ್ಯಾಮರಾನ್ ಗ್ರೀನ್ ಗ್ಲೆನ್ ಮ್ಯಾಕ್ಸ್‌ವೆಲ್, ವೇಗಿ ಮಿಚೆಲ್ ಸ್ಟಾರ್ಕ್, ಪ್ಯಾಟ್ ಕಮಿನ್ಸ್, ಸ್ಪಿನ್ನರ್ ಆ್ಯಡಂ ಜಂಪಾ ಅವರು ತಮ್ಮ ತಂಡವನ್ನು ಗೆಲುವಿನ ದಡ ಸೇರಿಸಬಲ್ಲ ಸಮರ್ಥರಾಗಿದ್ದಾರೆ.

ಅದರಲ್ಲೂ ಟ್ರಾವಿಸ್ ಹೆಡ್ ಅವರು ಡಬ್ಲ್ಯುಟಿಸಿ ಫೈನಲ್ ಹಾಗೂ ಏಕದಿನ ವಿಶ್ವಕಪ್ ಫೈನಲ್ ಪಂದ್ಯಗಳಲ್ಲಿ ಮಿಂಚಿ ಆಸ್ಟ್ರೇಲಿಯಾ ತಂಡದ ಗೆಲುವಿನ ರೂವಾರಿಯಾಗಿದ್ದರು. ಈಚೆಗೆ ನಡೆದ ಐಪಿಎಲ್‌ನಲ್ಲಿಯೂ ಅವರ ಅಬ್ಬರದ ಆಟ ಗಮನ ಸೆಳೆದಿತ್ತು. ಒಮಾನ್ ತಂಡವು ಆಸ್ಟ್ರೇಲಿಯಾದ ಅನುಭವದ ಮುಂದೆ ದುರ್ಬಲವಾಗಿದೆ. ಈಚೆಗೆ ನಡೆದ ಮೊದಲ ಪಂದ್ಯದಲ್ಲಿ ನಮಿಬಿಯಾ ವಿರುದ್ಧ ಒಮಾನ್ ಸೂಪರ್ ಓವರ್‌ನಲ್ಲಿ ಸೋತಿತ್ತು.

ಆಸ್ಟ್ರೇಲಿಯಾದ ಮಿಚೆಲ್ ಮಾರ್ಷ್ ಅಭ್ಯಾಸ –ಪಿಟಿಐ ಚಿತ್ರ

ಆಕಿಬ್ ಇಲಿಯಾಸ್

ಇಂದಿನ ಪಂದ್ಯಗಳು
- ಪಾಪುವಾ ನ್ಯೂಗಿನಿ–ಯುಗಾಂಡ (ಬೆಳಿಗ್ಗೆ 5)
- ಆಸ್ಟ್ರೇಲಿಯಾ–ಒಮಾನ್ (ಬೆಳಿಗ್ಗೆ 6)
- ಅಮೆರಿಕ–ಪಾಕಿಸ್ತಾನ (ರಾತ್ರಿ 9)

ಲೈವ್: ಸ್ಟಾರ್ ಸ್ಪೋರ್ಟ್ಸ್, ಡಿಡಿ ಸ್ಪೋರ್ಟ್ಸ್, ಹಾಟ್ ಸ್ಟಾರ್

ಡೋಪಿಂಗ್: ಪವರ್‌ಲಿಫ್ಟರ್ ಸಂದೀಪ್ ಕೌರ್ ಅಮಾನತು

ನವದೆಹಲಿ (ಪಿಟಿಐ): ನಿಷೇಧಿತ ಉದ್ದೀಪನ ಮದ್ದು ಸೇವಿಸಿದ್ದರೆನ್ನಲಾದ ಪವರ್‌ಲಿಫ್ಟರ್ ಸಂದೀಪ್ ಕೌರ್ ಅವರನ್ನು 10 ವರ್ಷ ಅಮಾನತು ಮಾಡಿರುವ ನಾಡಾ (ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಘಟಕ) ಶಿಸ್ತು ಸಮಿತಿಯ ಆದೇಶ ಹೊರಡಿಸಿದೆ.

ಭಾರತದ ಕ್ರೀಡಾ ಇತಿಹಾಸದಲ್ಲಿ ಉದ್ದೀಪನ ಮದ್ದು ಸೇವನೆಗಾಗಿ ಪ್ರಕಟಿಸಲಾದ ದೀರ್ಘ ಅವಧಿಯ ಶಿಕ್ಷೆ ಪ್ರಕರಣಗಳಲ್ಲಿ ಇದೂ ಒಂದಾಗಿದೆ.

ಪಂಜಾಬ್ ರಾಜ್ಯದ 31 ವರ್ಷದ ಕೌರ್ ಅವರು ಎರಡನೇ ಬಾರಿ ಸಿಕ್ಕಿ ಹಾಕಿಕೊಂಡ ಪ್ರಕರಣ ಇದಾಗಿದೆ.

ಮೊದಲ ಸಲ ಉದ್ದೀಪನ ಮದ್ದು ಸೇವನೆ ಮಾಡಿ ಸಿಕ್ಕಿಬಿದ್ದಿದ್ದ ಅವರು ನಾಲ್ಕು ವರ್ಷಗಳ ಅಮಾನತು ಶಿಕ್ಷೆ ಅನುಭವಿಸಿದ್ದರು. ಅದರ ನಂತರ ಹೋದ ಆಗಸ್ಟ್‌ನಲ್ಲಿ ಸ್ಪರ್ಧಾ ಕಣಕ್ಕೆ ಮರಳಿದ್ದರು. ಉತ್ತರಾಖಂಡದಲ್ಲಿ ನಡೆದಿದ್ದ ರಾಷ್ಟ್ರೀಯ ಮಹಿಳಾ ಪವರ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ 69 ಕೆಜಿ ವಿಭಾಗದಲ್ಲಿ ಮೂರನೇ ಸ್ಥಾನ ಪಡೆದಿದ್ದರು.

ಸ್ಪರ್ಧೆ ಸಂದರ್ಭದಲ್ಲಿ ಅವರಿಂದ ಪಡೆದಿದ್ದ ಮೂತ್ರದ ಮಾದರಿಯ ಪರೀಕ್ಷೆಯಲ್ಲಿ ನಿಷೇಧಿತ ನೊರಾಂಡ್ರೊಸ್ಟಿರಾನ್, ಮೆತಾಂಡಿನೊನ್ ಮತ್ತು ಮೆಫೆಂಟರ್‌ಮೈನ್ ಅಂಶಗಳು ಇರುವುದು ಪತ್ತೆಯಾಗಿತ್ತು.

ಇನ್ನೊಂದು ಪ್ರಕರಣದಲ್ಲಿ ವುಷು ಕ್ರೀಡಾಪಟು ಅವನೀಶ್ ಗಿರಿ ಅವರಿಗೆ ಮೂರು ವರ್ಷಗಳ ಅಮಾನತು ಶಿಕ್ಷೆ ವಿಧಿಸಲಾಗಿದೆ.

ಪೊಲೀಸರ ವಾಹನದ ಮೇಲೆ ದಾಳಿ ನಡೆಸಿದ್ದ ಪ್ರಕರಣ

ಕಚ್ಚಾ ಬಾಂಬ್ ದಾಳಿ: 9 ನಕ್ಸಲರ ಸೆರೆ

ಮುಖ್ಯಾಂಶಗಳು
- ಮೇ 15ರಂದು ಪೊಲೀಸರ ಗುರಿಯಾಗಿಸಿ ದಾಳಿ
- ಘಟನೆಯಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದ ಪೊಲೀಸರು

ಬಿಜಾಪುರ(ಛತ್ತೀಸಗಢ) (ಪಿಟಿಐ): ಕಳೆದ ತಿಂಗಳು ಪೊಲೀಸ್ ಅಧಿಕಾರಿಯೊಬ್ಬರ ಕಾರನ್ನು ಗುರಿಯಾಗಿಸಿಕೊಂಡು ನಡೆಸಲಾಗಿದ್ದ ಕಚ್ಚಾ ಬಾಂಬ್ ಸ್ಫೋಟ ಪ್ರಕರಣದಲ್ಲಿ ಭಾಗಿಯಾಗಿದ್ದ ಒಂಬತ್ತು ಜನ ನಕ್ಸಲರನ್ನು ಛತ್ತೀಸಗಢದ ಬಿಜಾಪುರದಲ್ಲಿ ಬಂಧಿಸಲಾಗಿದೆ ಎಂದು ಪೊಲೀಸರು ಬುಧವಾರ ತಿಳಿಸಿದರು.

ಫರ್ಸೆಗಢ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಐವರನ್ನು ಹಾಗೂ ಮದ್ದೇಡ್‌ನಲ್ಲಿ ಇತರ ನಾಲ್ವರನ್ನು ಬಂಧಿಸಲಾಗಿದೆ. ಈ ಬಂಧಿತರು ಭದ್ರತಾ ಸಿಬ್ಬಂದಿಯನ್ನು ಗುರಿಯಾಗಿಸಿ ಕಚ್ಚಾ ಬಾಂಬ್ ಸ್ಫೋಟಗಳನ್ನು ನಡೆಸುವುದು, ರಸ್ತೆಗಳನ್ನು ಬಂದ್ ಮಾಡುವುದು, ಅಕ್ರಮ ಸುಲಿಗೆ ಮತ್ತು ನಕ್ಸಲರ ಪೋಸ್ಟರ್ ಮತ್ತು ಬ್ಯಾನರ್‌ಗಳನ್ನು ಅಳವಡಿಸುವ ಕೃತ್ಯಗಳಲ್ಲಿ ಭಾಗಿಯಾಗಿದ್ದಾರೆ.

ಮೇ 15ರಂದು ಫರ್ಸೆಗಢ ಪ್ರದೇಶದಲ್ಲಿ ಇಬ್ಬರು ಪೊಲೀಸರು ಪ್ರಯಾಣಿಸುತ್ತಿದ್ದ ಕಾರನ್ನು ಗುರಿಯಾಗಿಸಿಕೊಂಡು ಸ್ಫೋಟ ನಡೆಸಲಾಗಿತ್ತು. ಈ ವೇಳೆ ಫರ್ಸೆಗಡ ಪೊಲೀಸ್ ಠಾಣೆಯ ಹೌಸ್ ಆಫೀಸರ್ ಆಕಾಶ್ ಮಸಿಹ್ ಮತ್ತು ಕಾನ್‌ಸ್ಟೆಬಲ್ ಸಂಜಯ್ ಅವರು ಪ್ರಾಣಾಪಾಯದಿಂದ ಪಾರಾಗಿದ್ದರು. ಕಾರಿಗೆ ಹಾನಿಯಾಗಿತ್ತು. ಬಂಧಿತರು ಈ ಕೃತ್ಯದಲ್ಲಿ ಭಾಗಿಯಾಗಿದ್ದರು.

ಬಂಧಿತರಿಂದ ಸ್ಫೋಟಕಗಳು, ಬ್ಯಾನರ್ ಮತ್ತು ನಕ್ಸಲರ ಕರಪತ್ರಗಳು ಸೇರಿದಂತೆ ಇತರ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ಪೊಲೀಸರು, ನಕ್ಸಲರ ನಡುವೆ ಗುಂಡಿನ ಚಕಮಕಿ (ಗಢಚಿರೋಲಿ): ಮಹಾರಾಷ್ಟ್ರದ ಗಢಚಿರೋಲಿಯಲ್ಲಿ ಬುಧವಾರ ಮುಂಜಾನೆ ಪೊಲೀಸರು ಹಾಗೂ ನಕ್ಸಲರ ನಡುವೆ ಗುಂಡಿನ ಚಕಮಕಿ ನಡೆಯಿತು. ಈ ವೇಳೆ ಸ್ಫೋಟಕಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮುಂಜಾನೆ ಗ್ಯಾರೆವಾಡ ಗ್ರಾಮದ ಬಳಿ ನಕ್ಸಲರು ಪೊಲೀಸರ ಮೇಲೆ ಗುಂಡು ಹಾರಿಸಿದರು. ಬಳಿಕ ಪೊಲೀಸರು ಇದಕ್ಕೆ ಪ್ರತಿದಾಳಿ ನಡೆಸಿದ ಬಳಿಕ ನಕ್ಸಲರು ಸ್ಥಳದಿಂದ ಪರಾರಿಯಾದರು. ಆ ಸ್ಥಳದಲ್ಲಿ ಶೋಧ ನಡೆಸಿದಾಗ ಅಪಾರ ಪ್ರಮಾಣದ ಸ್ಫೋಟಕಗಳನ್ನು ವಶಪಡಿಸಿಕೊಳ್ಳಲಾಯಿತು ಎಂದು ತಿಳಿಸಿದರು.

ಸಿಬಿಎಸ್‌ಇ: ಥಿಯರಿ, ಪ್ರಾಯೋಗಿಕ ಪರೀಕ್ಷೆ ಅಂಕಗಳಲ್ಲಿ ವ್ಯತ್ಯಾಸ

ನವದೆಹಲಿ (ಪಿಟಿಐ): ದೇಶದ 500ಕ್ಕೂ ಹೆಚ್ಚು ಶಾಲೆಗಳಲ್ಲಿ ಶೇ 50ರಷ್ಟು ವಿದ್ಯಾರ್ಥಿಗಳಿಗೆ ಕೆಲ ವಿಷಯಗಳಲ್ಲಿ ನೀಡಲಾಗಿರುವ ಥಿಯರಿ ಮತ್ತು ಪ್ರಾಯೋಗಿಕ ಪರೀಕ್ಷಾ ಅಂಕಗಳ ನಡುವೆ ಗಮನಾರ್ಹ ವ್ಯತ್ಯಾಸ ಇರುವುದನ್ನು ಕೇಂದ್ರೀಯ ಪ್ರೌಢಶಿಕ್ಷಣ ಮಂಡಳಿ (ಸಿಬಿಎಸ್‌ಇ) ಪತ್ತೆ ಹಚ್ಚಿದೆ.

ಇದನ್ನು ಆಧರಿಸಿ ಆಂತರಿಕ ಮೌಲ್ಯಮಾಪನ ಕಾರ್ಯವಿಧಾನಗಳನ್ನು ಪರಿಶೀಲಿಸುವಂತೆ ಮಂಡಳಿಯು ಸಂಬಂಧಿಸಿದ ಶಾಲೆಗಳಿಗೆ ಸಲಹೆ ನೀಡಿದೆ.

ಪ್ರಾಯೋಗಿಕ ಪರೀಕ್ಷೆಗಳನ್ನು ಮೌಲ್ಯಮಾಪನ ಮಾಡುವಾಗ ನ್ಯಾಯಸಮ್ಮತ ಮತ್ತು ನಿಖರತೆಗೆ ಒತ್ತು ನೀಡಬೇಕು. ಈ ಪ್ರಕ್ರಿಯೆಯು ವಾಸ್ತವಿಕವಾಗಿರಬೇಕು ಎಂದೂ ಅದು ಹೇಳಿದೆ.

'ಸಿಬಿಎಸ್‌ಇ ಸುಧಾರಿತ ಎಐ ಪರಿಕರಗಳ ಮೂಲಕ, ಕಳೆದ ವರ್ಷಗಳ ಫಲಿತಾಂಶದ ಅಂಕಿ ಅಂಶಗಳನ್ನು ಆಧರಿಸಿ ಪರಿಶೀಲನೆ ನಡೆಸಿದಾಗ ಈ ವಿಷಯ ಗೊತ್ತಾಯಿತು' ಎಂದು ಮಂಡಳಿಯ ಕಾರ್ಯದರ್ಶಿ ಹಿಮಾಂಶು ಗುಪ್ತಾ ಹೇಳಿದ್ದಾರೆ.

ಪೋಶೆ ಪ್ರಕರಣ: ರಕ್ತ ಮಾದರಿ ಬದಲು– ದೃಢ

ಪುಣೆ (ಪಿಟಿಐ): 'ಪೋಶೆ ಕಾರು ಅಪಘಾತ ಪ್ರಕರಣದಲ್ಲಿ ಕಾನೂನು ಸಂಘರ್ಷಕ್ಕೆ ಸಿಲುಕಿರುವ 17 ವರ್ಷ ವಯಸ್ಸಿನ ಬಾಲಕನ ರಕ್ತದ ಮಾದರಿಯನ್ನು ಆತನ ತಾಯಿಯ ರಕ್ತದ ಮಾದರಿಯೊಂದಿಗೆ ಬದಲಾಯಿಸಲಾಗಿದೆ ಎಂದು ವಿಧಿವಿಜ್ಞಾನ ಪ್ರಯೋಗಾಲಯವೊಂದು ದೃಢಪಡಿಸಿದೆ' ಎಂದು ಪೊಲೀಸರು ನ್ಯಾಯಾಲಯಕ್ಕೆ ಬುಧವಾರ ತಿಳಿಸಿದ್ದಾರೆ.

ರಕ್ತದ ಮಾದರಿ ಬದಲಿಸಿದ್ದ ಆರೋಪದ ಮೇಲೆ ಬಾಲಕನ ತಾಯಿಯನ್ನು ಜೂನ್ 1ರಂದು ಪೊಲೀಸರು ಬಂಧಿಸಿದ್ದರು. ಸಾಕ್ಷ್ಯ ತಿರುಚಲು ಪ್ರಯತ್ನಿಸಿದ್ದ ಆರೋಪದ ಮೇಲೆ ಕಳೆದ ತಿಂಗಳೇ ಆತನ ತಂದೆಯನ್ನು ಬಂಧಿಸಿದದ್ದರು. ಅವರಿಬ್ಬರ ಪೊಲೀಸ್ ವಶವನ್ನು ಜೂನ್ 10ರ ವರೆಗೆ ವಿಸ್ತರಿಸಿ ಸೆಷನ್ಸ್ ನ್ಯಾಯಾಲಯವು ಆದೇಶ ನೀಡಿದೆ.

ಮೇ 19ರಂದು ನಡೆದಿದ್ದ ಈ ಅಪಘಾತದಲ್ಲಿ ಇಬ್ಬರು ಟೆಕಿಗಳು ಮೃತಪಟ್ಟಿದ್ದರು.

ಅಪ್ರಾಪ್ತನಿಗೆ ಗೃಹಬಂಧನ

ಪೋಶೆ ಕಾರು ಅಪಘಾತ ಪ್ರಕರಣ ಸಂಬಂಧ ಅಪ್ರಾಪ್ತನ ಗೃಹಬಂಧನ ಅವಧಿಯನ್ನು ಇಲ್ಲಿನ ಬಾಲ ನ್ಯಾಯ ಮಂಡಳಿಯು ಜೂನ್ 12ರವರೆಗೆ ವಿಸ್ತರಿಸಿದೆ.

ಈ ಪ್ರಕರಣದಲ್ಲಿ ಬಾಲಕನ ತಪ್ಪು ಇಲ್ಲ ಎಂಬಂತೆ ತೋರಿಸಲು ಅಪಘಾತ ಸಂಭವಿಸಿದ ಬಳಿಕ ಅಪ್ರಾಪ್ತನ ರಕ್ತದ ಮಾದರಿ ಬದಲಿಗೆ ತಾಯಿಯ ರಕ್ತದ ಮಾದರಿಯನ್ನು ಇರಿಸಿರುವುದು ವಿಧಿವಿಜ್ಞಾನ ಪ್ರಯೋಗಾಲಯದ ವರದಿಯಿಂದ ಖಚಿತವಾಗಿದೆ ಎಂದು ಪೊಲೀಸರು ನ್ಯಾಯಾಲಯಕ್ಕೆ ತಿಳಿಸಿದರು.

ಅತ್ಯಾಚಾರ: ತಪ್ಪಿತಸ್ಥನಿಗೆ 10 ವರ್ಷ ಜೈಲು

ಠಾಣೆ (ಪಿಟಿಐ): 2015ರಲ್ಲಿ 9 ವರ್ಷದ ಬಾಲಕಿ ಮೇಲೆ ಅತ್ಯಾಚಾರ ಎಸಗಿದ ಪ್ರಕರಣದಲ್ಲಿ ಭಾಗಿಯಾದ ತಪ್ಪಿತಸ್ಥನಿಗೆ ಮಹಾರಾಷ್ಟ್ರದ ಠಾಣಾ ಜಿಲ್ಲೆಯ ನ್ಯಾಯಾಲಯವೊಂದು 10 ವರ್ಷ ಕಠಿಣ ಜೈಲು ಶಿಕ್ಷೆ ವಿಧಿಸಿದೆ. ಅಲ್ಲದೆ, ₹5000 ದಂಡ ಕೂಡ ವಿಧಿಸಲಾಗಿದೆ.

ದಂಡದ ಮೊತ್ತವನ್ನು ಸಂತ್ರಸ್ತೆಗೆ ನೀಡಬೇಕು ಎಂದಿರುವ ನ್ಯಾಯಾಲಯವು, ಸಂತ್ರಸ್ತೆಗೆ ಮತ್ತಷ್ಟು ನೆರವು ದೊರೆಯುವಂತೆ ಮಾಡಲು ಈ ಪ್ರಕರಣವನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಶಿಫಾರಸು ಮಾಡಿತು.

ಅಪರಾಧಿಗೆ ನೀಡುವ ಶಿಕ್ಷೆಯು ಇಂಥ ಹೀನ ಕೃತ್ಯದಲ್ಲಿ ಭಾಗಿಯಾಗುವವರಿಗೆ ಕಠಿಣ ಸಂದೇಶ ನೀಡುವಂತಿರಬೇಕು ಎಂದು ಪೋಕ್ಸೊ ಪ್ರಕರಣಗಳ ಬಗ್ಗೆ ವಿಚಾರಣೆ ನಡೆಸುವ ವಿಶೇಷ ನ್ಯಾಯಾಧೀಶ ಡಿ.ಎಸ್. ದೇಶಮುಖ್ ಅವರು ಮೇ 25ರಂದು ಆದೇಶಿಸಿದ್ದು, ಅದರ ಆದೇಶ ಪ್ರತಿಯು ಬುಧವಾರ ಲಭ್ಯವಾಗಿದೆ.

2015ರ ಜುಲೈ 11ರಂದು ಬಾಲಕಿಯು ಟಿ.ವಿ. ನೋಡಲು ಆರೋಪಿ ಮನೆಗೆ ಹೋಗಿದ್ದಾಗ ಕೃತ್ಯ ಎಸಗಿದ್ದ.

ಉತ್ತರಾಖಂಡ ಚಾರಣ: ರಾಜ್ಯದ ಐವರ ಸಾವು

ಒಂದನೇ ಪುಟದಿಂದ...

ಉತ್ತರಕಾಶಿಯ ಜಿಲ್ಲಾ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಯಲಿದೆ. ಬಳಿಕ ಬೆಂಗಳೂರಿಗೆ ಮೃತದೇಹಗಳನ್ನು ರವಾನಿಸಲಾಗುವುದು ಎಂದು ಮೂಲಗಳು ಹೇಳಿವೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಿ ಕೃಷ್ಣ ಬೈರೇಗೌಡ ಮಾತನಾಡಿದ್ದಾರೆ. ಅಲ್ಲದೆ, ರಕ್ಷಣೆಯಾದ ಚಾರಣಿಗರ ಪೈಕಿ ಅನಿಲ್ ಭಟ್ಟ ಎಂಬುವರೂ ಮುಖ್ಯಮಂತ್ರಿ ಜತೆಗೆ ಮಾತನಾಡಿದ್ದಾರೆ.

ಮಂಗಳವಾರ ಬೆಳಿಗ್ಗೆ ಈ ತಂಡ ಚಾರಣ ಆರಂಭಿಸಿತ್ತು. ಚಾರಣದ ಗಮ್ಯಸ್ಥಾನ ತಲುಪಿದ ತಂಡ, ಶಿಬಿರಕ್ಕೆ ಹಿಂತಿರುಗಲು ಯತ್ನಿಸಿತ್ತು. ಮಾರ್ಗದ ಮಧ್ಯೆ ಸಹಸ್ರ ತಾಲ್‌ನ ಮಯಳಿ ಎಂಬಲ್ಲಿ ಮಧ್ಯಾಹ್ನ 2 ಗಂಟೆಗೆ ಹಿಮಗಾಳಿಯಿಂದಾಗಿ ಹವಾಮಾನ ಸಂಪೂರ್ಣ ಹದಗೆಟ್ಟಿದ್ದು, ಎಲ್ಲ ಚಾರಣಿಗರು ಅಪಾಯಕ್ಕೆ ಸಿಲುಕಿದ್ದರು. ಈ ಚಾರಣವನ್ನು ಭಾರತೀಯ ಪರ್ವತಾರೋಹಿಗಳ ಒಕ್ಕೂಟ ಆಯೋಜಿಸಿತ್ತು.

ಡೆಹ್ರಾಡೂನ್‌ಗೆ ತೆರಳುವ ಮೊದಲು ಪ್ರತಿಕ್ರಿಯಿಸಿದ ಕೃಷ್ಣ ಬೈರೇಗೌಡ, 'ಚಾರಣಿಗರು ಪ್ರತಿಕೂಲ ವಾತಾವರಣದಿಂದಾಗಿ ಅಪಾಯಕ್ಕೆ ಸಿಲುಕಿರುವ ಮಾಹಿತಿ ಮಂಗಳವಾರ ರಾತ್ರಿ ಬಂದಿತ್ತು. ಉತ್ತರಾಖಂಡ ಸರ್ಕಾರ, ಭಾರತೀಯ ಪರ್ವತಾರೋಹಣ ಒಕ್ಕೂಟ ಮತ್ತು ಕೇಂದ್ರ ಸರ್ಕಾರದ ಗೃಹ ಇಲಾಖೆಯನ್ನು ಸಂಪರ್ಕಿಸಿ ಚಾರಣಿಗರ ರಕ್ಷಣಾ ಕಾರ್ಯಾಚರಣೆ ಆರಂಭಿಸಲಾಗಿದೆ' ಎಂದರು.

'ಸ್ಥಳೀಯವಾಗಿ ಲಭ್ಯವಿರುವ ಹೆಲಿಕಾಪ್ಟರ್‌ಗಳ ಸಹಾಯದಿಂದ ತುರ್ತು ರಕ್ಷಣಾ ಕಾರ್ಯಾಚರಣೆ ಆರಂಭಿಸಲಾಗಿದೆ. ಅಲ್ಲದೆ, ಚಾರಣಿಗರ ರಕ್ಷಣೆಗಾಗಿ ಭಾರತೀಯ ವಾಯುಪಡೆಯ ಹೆಲಿಕಾಪ್ಟರ್ ಬುಧವಾರ ಬೆಳಿಗ್ಗೆ 9 ಗಂಟೆಗೆ ಉತ್ತರಕಾಶಿ ತಲುಪಿದೆ. ವಿಪತ್ತು ನಿರ್ವಹಣಾ ಪಡೆ ಕೂಡಾ ಭೂ ಮಾರ್ಗವಾಗಿ ಶಿಬಿರದ ಬಳಿಗೆ ತೆರಳಿದೆ. ಅಪಾಯದಲ್ಲಿ ಸಿಲುಕಿದವರನ್ನು ರಕ್ಷಿಸಲು ರಾಜ್ಯ ಸರ್ಕಾರ ಎಲ್ಲ ಪ್ರಯತ್ನಗಳನ್ನು ಮಾಡುತ್ತಿದೆ' ಎಂದು ಹೇಳಿದರು.

ಉತ್ತರಾಖಂಡದ ಉತ್ತರಕಾಶಿಯಲ್ಲಿ ಸಹಾಯ ಕೇಂದ್ರ ತೆರೆಯಲಾಗಿದೆ. ಐಎಎಸ್ ಅಧಿಕಾರಿ ವಿಪುಲ್ ಬನ್ಸಾಲ್ (ಮೊಬೈಲ್: 9480474949) ಅವರಿಗೆ ಈ ಕೇಂದ್ರದ ಜವಾಬ್ದಾರಿ ನೀಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಚುನಾವಣೆ ಕರ್ತವ್ಯಕ್ಕೆಂದು ನಾಗಪುರಕ್ಕೆ ಹೋಗಿದ್ದ ವಿಪುಲ್ ಬನ್ಸಾಲ್ ಅವರು ಅಲ್ಲಿಂದ ಬುಧವಾರ ರಾತ್ರಿಯೇ ಡೆಹ್ರಾಡೂನ್‌ಗೆ ತೆರಳಿದ್ದಾರೆ.

ಮೋದಿ ಸುತ್ತ ಸೃಷ್ಟಿಸಿದ್ದ ಪ್ರಭಾವಳಿ ಕಳಚಿದ ಭಾರತದ ಮತದಾರರು

ವಿಪಕ್ಷಗಳಿಗೆ ಶಕ್ತಿ: ವಿದೇಶಿ ಮಾಧ್ಯಮಗಳು

ವಾಷಿಂಗ್ಟನ್/ ಲಂಡನ್ (ಪಿಟಿಐ): 'ಪ್ರಧಾನಿ ನರೇಂದ್ರ ಮೋದಿ ಅವರನ್ನು ಸೋಲಿಸಲು ಸಾಧ್ಯವೇ ಇಲ್ಲ ಎನ್ನುವ ಪ್ರಭಾವಳಿಯನ್ನು ಭಾರತದ ಮತದಾರರು ಕಳಚಿ ಹಾಕಿದ್ದಾರೆ ಮತ್ತು ವಿರೋಧ ಪಕ್ಷಗಳಿಗೆ ಹೊಸ ಶಕ್ತಿ ತುಂಬಿದ್ದಾರೆ' ಎಂದು ಅಂತರರಾಷ್ಟ್ರೀಯ ಮಾಧ್ಯಮಗಳು ಸಾರ್ವತ್ರಿಕ ಚುನಾವಣೆಯನ್ನು ವಿಶ್ಲೇಷಿಸಿವೆ

'ಈ ಫಲಿತಾಂಶವು ಅನಿರೀಕ್ಷಿತ ಹೊಡೆತ. ದಶಕಗಳ ಕಾಲದ ಪರಿವರ್ತನೆ ಇದ್ದಕ್ಕಿದ್ದಂತೆಯೇ ಅನಿರೀಕ್ಷಿತ ತಿರುವು ಪಡೆದಿದೆ. ಮೋದಿ ಅವರ ಸುತ್ತ ಸೃಷ್ಟಿಸಿದ್ದ ಪ್ರಭಾವಳಿಯನ್ನು ಮತದಾರರು ಕಳಚಿ ಹಾಕಿದ್ದಾರೆ' ಎಂದು 'ನ್ಯೂಯಾರ್ಕ್ ಟೈಮ್ಸ್' ವರದಿ ಮಾಡಿದೆ.

'ಕಳೆದ ಒಂದು ದಶಕದಿಂದ ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತವು ಪ್ರಧಾನಿ ನರೇಂದ್ರ ಮೋದಿ ಅವರ ಜತೆ ಹೆಚ್ಚು ಗುರುತಿಸಿಕೊಂಡಿತ್ತು. ಆದರೆ, ಮಂಗಳವಾರದ ಚುನಾವಣಾ ಫಲಿತಾಂಶವನ್ನು ವಿಶ್ಲೇಷಿಸಿದರೆ ಮತದಾರರು ಅಸಮಾಧಾನಗೊಂಡಿರುವುದು ಸ್ಪಷ್ಟವಾಗುತ್ತದೆ' ಎಂದು ವಾಷಿಂಗ್ಟನ್ ಪೋಸ್ಟ್ ವರದಿ ಮಾಡಿದೆ.

ಈ ಬಾರಿಯ ಚುನಾವಣಾ ಫಲಿತಾಂಶವು ಅಚ್ಚರಿ ರೀತಿಯಲ್ಲಿ ಕಾಂಗ್ರೆಸ್ ನೇತೃತ್ವದ 'ಇಂಡಿಯಾ' ಮೈತ್ರಿಕೂಟಕ್ಕೆ ಹೊಸ ಶಕ್ತಿ ತುಂಬಿದೆ. 'ಬ್ರ್ಯಾಂಡ್ ಮೋದಿ' ಎನ್ನುವುದು ಹೊಳಪು ಕಳೆದುಕೊಂಡಿದೆ. ಮೋದಿ ಅವರು ಸಹ ಸದಾ ಅಜೇಯರಾಗಿ ಇರಲು ಸಾಧ್ಯವಿಲ್ಲ. ಇದರಿಂದಾಗಿ ವಿರೋಧ ಪಕ್ಷಗಳಲ್ಲಿ ಹೊಸ ಆಶಾಕಿರಣ ಮೂಡಿದೆ ಎಂದು ಬಿಬಿಸಿ ಹೇಳಿದೆ.

ಮೋದಿಗೆ ಶುಭಾಶಯ

ಲಂಡನ್/ಜೆರುಸಲೆಂ/ ಬೀಜಿಂಗ್(ಪಿಟಿಐ): ಸಾರ್ವತ್ರಿಕ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟ ಜಯಗಳಿಸಿದ್ದಕ್ಕೆ ಅಮೆರಿಕ ಅಧ್ಯಕ್ಷ ಜೋ ಬೈಡನ್, ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು, ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ ಸೇರಿದಂತೆ ಹಲವು ದೇಶಗಳ ನಾಯಕರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಶುಭಾಶಯ ಕೋರಿದ್ದಾರೆ.

ಚೀನಾ ಸಹ ಮೋದಿ ಅವರಿಗೆ ಅಭಿನಂದನೆ ಸಲ್ಲಿಸಿದೆ. ಉಭಯ ದೇಶಗಳ ಹಿತಾಸಕ್ತಿಗಾಗಿ ದ್ವಿಪಕ್ಷೀಯ ಸಂಬಂಧಗಳನ್ನು ಮತ್ತೆ ಬಲಪಡಿಸುವ ನಿಟ್ಟಿನಲ್ಲಿ ಭಾರತದ ಜತೆ ಕಾರ್ಯನಿರ್ವಹಿಸಲಾಗುವುದು ಎಂದು ವಿದೇಶಾಂಗ ಸಚಿವಾಲಯದ ವಕ್ತಾರರಾದ ಮಾವೋ ನಿಂಗ್ ತಿಳಿಸಿದ್ದಾರೆ.

ಕೇಜ್ರಿವಾಲ್‌ರ ಮಧ್ಯಂತರ ಜಾಮೀನು ಅರ್ಜಿ ವಜಾ

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಬಂಧನದಲ್ಲಿರುವ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಸಲ್ಲಿಸಿದ್ದ ಮಧ್ಯಂತರ ಜಾಮೀನು ಅರ್ಜಿಯನ್ನು ದೆಹಲಿ ಕೋರ್ಟ್ ವಜಾಗೊಳಿಸಿದೆ.

ವೈದ್ಯಕೀಯ ಚಿಕಿತ್ಸೆ ಪಡೆಯುವ ಸಲುವಾಗಿ ಜಾಮೀನು ನೀಡುವಂತೆ ಕೋರಿದ್ದ ಅರ್ಜಿಯನ್ನು ಪರಿಶೀಲಿಸಿದ ವಿಶೇಷ ನ್ಯಾಯಾಧೀಶರಾದ ಕಾವೇರಿ ಭವೇಜಾ ಅವರು, ಕೇಜ್ರಿವಾಲ್ ಅವರ ವೈದ್ಯಕೀಯ ಚಿಕಿತ್ಸೆಗೆ ವ್ಯವಸ್ಥೆ ಮಾಡುವಂತೆ ಜೈಲಿನ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಕೇಜ್ರಿ ವಾಲ್ ಅವರ ನ್ಯಾಯಾಂಗ ಬಂಧನದ ಅವಧಿಯನ್ನು ಜೂನ್ 19ರವರೆಗೆ ವಿಸ್ತರಿಸಿರುವ ಕೋರ್ಟ್, ಮತ್ತೊಂದು ಜಾಮೀನು ಅರ್ಜಿಯನ್ನು ಜೂನ್ 7ರಂದು ವಿಚಾರಣೆ ನಡೆಸುವುದಾಗಿ ತಿಳಿಸಿದೆ.

ಮಾನವ ಕಳ್ಳಸಾಗಣೆ ಮಾನವ ಹಕ್ಕುಗಳ ಹೋರಾಟಗಾರ ಸೆರೆ

ಇಸ್ಲಾಮಾಬಾದ್ (ಪಿಟಿಐ): ಮಾನವ ಕಳ್ಳಸಾಗಣೆ ಆರೋಪ ಪ್ರಕರಣದ ಸಂಬಂಧ ಪಾಕಿಸ್ತಾನ ಮೂಲದ ಮಾನವ ಹಕ್ಕುಗಳ ಹೋರಾಟಗಾರ ಸರೀಮ್ ಬರ್ನಿ ಅವರನ್ನು ಬುಧವಾರ ಬಂಧಿಸಲಾಗಿದೆ ಎಂದು ಮಾಧ್ಯಮ ವರದಿಗಳು ತಿಳಿಸಿವೆ.

25 ಮಕ್ಕಳನ್ನು ಕಳ್ಳಸಾಗಣೆ ಮಾಡಿದ ಹಾಗೂ ಅಮೆರಿಕದಲ್ಲಿ ಮಕ್ಕಳನ್ನು ಅಕ್ರಮವಾಗಿ ದತ್ತು ನೀಡುವ ಕೃತ್ಯದಲ್ಲಿ ತೊಡಗಿದ್ದಾರೆ ಎಂದು ಅಮೆರಿಕ ಸರ್ಕಾರ ಮಾಹಿತಿ ನೀಡಿತ್ತು. ಹೀಗಾಗಿ ಬರ್ನಿ ಅಮೆರಿಕದಿಂದ ಕರಾಚಿ ವಿಮಾನ ನಿಲ್ದಾಣಕ್ಕೆ ಬರುತ್ತಿದ್ದಂತೆ ಮಾನವ ಕಳ್ಳಸಾಗಣೆ ಕುರಿತು ತನಿಖೆ ನಡೆಸುವ ತನಿಖಾ ಸಂಸ್ಥೆಯು (ಎಫ್‌ಐಎ) ಬಂಧಿಸಿದೆ ಎಂದು ವರದಿಯಾಗಿದೆ.

ಟೆನಿಸ್: ರಿಬಾಕಿನಾ, ಸಬಲೆಂಕಾಗೆ ಆಘಾತ

ಪ್ಯಾರಿಸ್ (ಎಎಫ್‌ಪಿ): ನಾಲ್ಕನೇ ಶ್ರೇಯಾಂಕದ ಎಲೆನಾ ರಿಬಾಕಿನಾ ಅವರನ್ನು ಬುಧವಾರ ಮೂರು ಸೆಟ್‌ಗಳ ಪಂದ್ಯದಲ್ಲಿ ಹಿಮ್ಮೆಟ್ಟಿಸಿದ ಇಟಲಿಯ ಜಾಸ್ಮಿನ್ ಪಾವ್ಲೋನಿ ಫ್ರೆಂಚ್ ಓಪನ್ ಮಹಿಳಾ ಸಿಂಗಲ್ಸ್ ಸೆಮಿಫೈನಲ್ ತಲುಪಿದರು. ಇದು ಅವರಿಗೆ ಗ್ರ್ಯಾನ್‌ಸ್ಲಾಮ್ ಟೂರ್ನಿಯೊಂದರ ಮೊದಲ ಸೆಮಿಫೈನಲ್.

12ನೇ ಶ್ರೇಯಾಂಕದ ಪಾವ್ಲೋನಿ 6-2, 4-6, 6-4 ರಿಂದ ಕಜಕಸ್ತಾನದ ರಿಬಾಕಿನಾ ಅವರನ್ನು ಸೋಲಿಸಿದರು. 28ನೇ ವರ್ಷದಲ್ಲಿ ಪಾವ್ಲೋನಿ ವೃತ್ತಿ ಬದುಕಿನಲ್ಲಿ ಯಶಸ್ಸು ಕಾಣುತ್ತಿದ್ದಾರೆ. ಅವರು 17 ವರ್ಷದ ಮಿರಾ ಆ್ಯಂಡ್ರೀವಾ ಅವರನ್ನು ಸೆಮಿಫೈನಲ್‌ನಲ್ಲಿ ಎದುರಿಸಲಿದ್ದಾರೆ. 2023ರವರೆಗೆ 16 ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ ಆಡಿರುವ ಅವರು ಒಟ್ಟು 4 ಪಂದ್ಯಗಳನ್ನಷ್ಟೇ ಗೆದಿದ್ದರು. ಆದರೆ ಈ ವರ್ಷ ಆಸ್ಟ್ರೇಲಿಯನ್ ಓಪನ್‌ನಲ್ಲಿ ನಾಲ್ಕನೇ ಸುತ್ತು ಪ್ರವೇಶಿಸಿದ್ದರು.

ಸಬಲೆಂಕಾಗೆ ಆಘಾತ: ಶ್ರೇಯಾಂಕರಹಿತ ರಷ್ಯಾದ ಆಟಗಾರ್ತಿ ಮಿರಾ ಆ್ಯಂಡ್ರೀವಾ 6-7(5), 6-4, 6-4ರಿಂದ ಎರಡನೇ ಶ್ರೇಯಾಂಕದ ಅರಿನಾ ಸಬಲೆಂಕಾ (ಬೆಲಾರಸ್) ಅವರಿಗೆ ಆಘಾತ ನೀಡಿದರು. ಎರಡು ಬಾರಿ ಆಸ್ಟ್ರೇಲಿಯಾ ಓಪನ್ ಚಾಂಪಿಯನ್ ಆಗಿರುವ ಸಬಲೆಂಕಾ ಮೊದಲ ಸೆಟ್‌ನಲ್ಲಿ ಟೈಬ್ರೇಕರ್ ಮೂಲಕ ಮೇಲುಗೈ ಸಾಧಿಸಿದರು. ಆದರೆ, ನಂತರ ಮಿರಾ ಹಿಡಿತ ಸಾಧಿಸಿ ಮುನ್ನಡೆದರು.



ಜಾಸ್ಮಿನ್ ಪಾವ್ಲೋನಿ –ಎಎಫ್‌ಪಿ ಚಿತ್ರ

ಸೆಮಿಗೆ ಅಲ್ಕರಾಜ್: ಮೂರನೇ ಶ್ರೇಯಾಂಕದ ಕಾರ್ಲೋಸ್ ಅಲ್ಕರಾಜ್ ಮಂಗಳವಾರ ತಡರಾತ್ರಿ ನಡೆದ ಪಂದ್ಯದಲ್ಲಿ 6-3, 7-6 (7/3), 6-4 ರಲ್ಲಿ ನೇರ ಸೆಟ್‌ಗಳಿಂದ ಗ್ರೀಸ್‌ನ ಸ್ಟೆಫಾನೊಸ್ ಸಿಸಿಪಾಸ್ ಅವರ ಸವಾಲಡಗಿಸಿ ಪುರುಷರ ಸಿಂಗಲ್ಸ್ ಸೆಮಿಫೈನಲ್ ತಲುಪಿದರು. ವಿಶ್ವ ರ‍್ಯಾಂಕಿಂಗ್‌ನಲ್ಲಿ ಈಗ ಒಂಬತ್ತನೇ ಸ್ಥಾನದಲ್ಲಿರುವ ಗ್ರೀಸ್ ಆಟಗಾರನ ಎದುರು ಆಡಿರುವ ಆರೂ ಪಂದ್ಯಗಳಲ್ಲಿ ಅಲ್ಕರಾಜ್ ಜಯಗಳಿಸಿದಂತಾಗಿದೆ.

21 ವರ್ಷದ ಸ್ಪೇನ್ ಆಟಗಾರ, ಬಹುನಿರೀಕ್ಷಿತ ಸೆಮಿಫೈನಲ್ ಸೆಣಸಾಟದಲ್ಲಿ ಎರಡನೇ ಶ್ರೇಯಾಂಕದ ಯಾನಿಕ್ ಸಿನ್ನರ್ ಅವರನ್ನು ಎದುರಿಸಲಿದ್ದಾರೆ. ನೊವಾಕ್ ಜೊಕೊವಿಚ್ ಹಿಂದೆಸರಿದ ಪರಿಣಾಮ ಸಿನ್ನರ್ ಮುಂದಿನ ಎಟಿಪಿ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನಕ್ಕೇರುವುದು ಖಚಿತವಾಗಿದೆ.

ಸೆಮಿಗೆ ಬೋಪಣ್ಣ–ಎಬ್ಡೆನ್

ಪ್ಯಾರಿಸ್ (ಪಿಟಿಐ): ಎರಡನೇ ಶ್ರೇಯಾಂಕದ ರೋಹನ್ ಬೋಪಣ್ಣ – ಮ್ಯಾಥ್ಯೂ ಎಬ್ಡೆನ್ ಜೋಡಿ ನೇರ ಸೆಟ್‌ಗಳಿಂದ ಬೆಲ್ಜಿಯಮ್‌ನ ಸ್ಯಾಂಡರ್ ಗಿಲ್ – ಜೋರಾನ್ ವ್ಲಿಗನ್ ಜೋಡಿಯನ್ನು ಸೋಲಿಸಿ ಫ್ರೆಂಚ್ ಓಪನ್ ಪುರುಷರ ಡಬಲ್ಸ್ ಸೆಮಿಫೈನಲ್ ತಲುಪಿತು.

ಸುಝಾನ್ ಲೆಂಗ್ಲೆನ್ ಕೋರ್ಟ್‌ನಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಭಾರತ–ಆಸ್ಟ್ರೇಲಿಯಾ ಆಟಗಾರರ ಜೋಡಿ 7–6 (3), 5–7, 6–1 ರಿಂದ ಹತ್ತನೇ ಶ್ರೇಯಾಂಕ ಪಡೆದಿದ್ದ ಬೆಲ್ಜಿಯಮ್‌ನ ಆಟಗಾರರನ್ನು ಸೋಲಿಸಲು ಒಂದು ಗಂಟೆ ನಾಲ್ಕು ನಿಮಿಷ ತೆಗೆದುಕೊಂಡಿತು.

ಈ ಟೂರ್ನಿಯ ಮೊದಲ ಮತ್ತು ಮೂರನೇ ಸುತ್ತಿನಲ್ಲೂ ಈ ಜೋಡಿ ಮೂರು ಸೆಟ್‌ಗಳ ಪಂದ್ಯಗಳನ್ನು ಆಡಬೇಕಾಯಿತು.

ಕಾರ್ಲ್‌ಸನ್‌ಗೆ ಮಣಿದ ಪ್ರಜ್ಞಾನಂದ

ಸ್ಟಾವೆಂಜರ್ (ನಾರ್ವೆ), (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಜ್ಞಾನಂದ ಅವರು ನಾರ್ವೆ ಚೆಸ್ ಟೂರ್ನಿಯ ಎಂಟನೇ ಸುತ್ತಿನಲ್ಲಿ ಅಗ್ರ ಶ್ರೇಯಾಂಕದ ಮ್ಯಾಗ್ನಸ್ ಕಾರ್ಲ್‌ಸನ್ ಅವರಿಗೆ ಸೋತರು. ಅವರ ಅಕ್ಕ ಆರ್. ವೈಶಾಲಿ ಮಹಿಳಾ ವಿಭಾಗದ ಪಂದ್ಯದಲ್ಲಿ ಉಕ್ರೇನಿನ ಅನ್ನಾ ಮುಝಿಚುಕ್ ಅವರನ್ನು ಮಣಿಸಿದರು.

ಈ ಗೆಲುವಿನಿಂದಾಗಿ ಅಗ್ರಸ್ಥಾನದಲ್ಲಿ ಮುಂದುವರಿದಿರುವ ಆತಿಥೇಯ ದೇಶದ ಕಾರ್ಲ್‌ಸನ್ ತಮ್ಮ ಮುನ್ನಡೆಯ ಅಂತರವನ್ನು ಒಂದು ಪಾಯಿಂಟ್‌ಗೆ ಹಿಗ್ಗಿಸಿದರು. ಕಾರ್ಲ್‌ಸನ್ 14.5 ಪಾಯಿಂಟ್ಸ್ ಗಳಿಸಿದ್ದಾರೆ. ಅಮೆರಿಕದ ಹಿಕಾರು ನಕಾಮುರ (13.5 ಪಾಯಿಂಟ್ಸ್) ಅವರು ಎರಡನೇ ಸ್ಥಾನದಲ್ಲಿದ್ದಾರೆ. ನಕಾಮುರ ಅವರು ಮಂಗಳವಾರ ನಡೆದ ಎಂಟನೇ ಸುತ್ತಿನಲ್ಲಿ ಫ್ರಾನ್ಸ್‌ನ ಅಲಿರೇಝಾ ಫಿರೋಜ್ ಅವರಿಗೆ ಮಣಿದರು. ಪ್ರಜ್ಞಾನಂದ 12 ಪಾಯಿಂಟ್ಸ್ ಗಳಿಸಿದ್ದಾರೆ. ಅಲಿರೇಝಾ (11) ನಂತರದ ಸ್ಥಾನದಲ್ಲಿದ್ದಾರೆ.

ಇದೇ ವೇಳೆ, ವಿಶ್ವ ಚಾಂಪಿಯನ್ ಡಿಂಗ್ ಲಿರೆನ್ ಅವರ ನಿರಾಶಾದಾಯಕ ಪ್ರದರ್ಶನ ಮುಂದುವರಿಯಿತು. ಅವರು ಅಮೆರಿಕದ ಫ್ಯಾಬಿಯಾನೊ ಕರುವಾನಾ ಅವರಿಗೆ ಸೋತರು. 9 ಪಾಯಿಂಟ್ಸ್ ಗಳಿಸಿರುವ ಕರುವಾನಾ ಐದನೇ ಸ್ಥಾನದಲ್ಲಿದ್ದಾರೆ. ಲಿರೆನ್ (4.5) ಕೊನೆಯ ಸ್ಥಾನದಲ್ಲಿದ್ದಾರೆ.

ಮಹಿಳೆಯರ ವಿಭಾಗದಲ್ಲಿ, ವಿಶ್ವ ಚಾಂಪಿಯನ್ ಚೀನಾದ ಜು ವೆನ್‌ಜುನ್ ಎಂಟನೇ ಸುತ್ತಿನಲ್ಲಿ ಸ್ವೀಡನ್‌ನ ಪಿಯಾ ಕ್ರಾಮ್ಲಿಂಗ್ ಅವರನ್ನು ಸೋಲಿಸಿ 14.5 ಪಾಯಿಂಟ್‌ಗಳೊಡನೆ ಅಗ್ರಸ್ಥಾನದಲ್ಲಿ ಮುಂದುವರಿದರು.

ಆರ್.ವೈಶಾಲಿ –ಪಿಟಿಐ ಚಿತ್ರ

ಮುಝಿಚುಕ್, ವೈಶಾಲಿ ಅವರಿಗೆ ಸೋತ ಕಾರಣ ವೆನ್‌ಜುನ್ ಅವರ ಅಗ್ರಸ್ಥಾನ ಇನ್ನಷ್ಟು ಸುರಕ್ಷಿತವಾಯಿತು. ಉಕ್ರೇನ್ ಆಟಗಾರ್ತಿ 13 ಪಾಯಿಂಟ್‌ಗಳೊಡನೆ ಎರಡನೇ ಸ್ಥಾನದಲ್ಲಿದ್ದು, ವೈಶಾಲಿ ಮತ್ತು ಚೀನಾದ ಟಿಂಗ್ಜಿ ಲೀ (ತಲಾ 11.5) ಅವರಿಗಿಂತ ಒಂದೂವರೆ ಪಾಯಿಂಟ್ಸ್ ಮುಂದಿದ್ದಾರೆ. ಟಿಂಗ್ಜಿ ದಿನದ ಇನ್ನೊಂದು ಪಂದ್ಯದಲ್ಲಿ ಭಾರತದ ಗ್ರ್ಯಾಂಡ್‌ಮಾಸ್ಟರ್ ಕೋನೇರು ಹಂಪಿ ಅವರನ್ನು ಸೋಲಿಸಿದರು. ಹಂಪಿ (8) ಐದನೇ ಸ್ಥಾನದಲ್ಲಿದ್ದಾರೆ. ಕ್ರಾಮ್ಲಿಂಗ್ (4.5) ಕೊನೆಯ ಸ್ಥಾನದಲ್ಲಿದ್ದಾರೆ.

ಟೂರ್ನಿಯು ಎರಡೂ ವಿಭಾಗಗಳಲ್ಲಿ ₹1.34 ಕೋಟಿ ಬಹುಮಾನ ನಿಧಿ ಹೊಂದಿದೆ. ಪುರುಷರ ಮತ್ತು ಮಹಿಳಾ ವಿಭಾಗದಲ್ಲಿ ತಲಾ ಆರು ಮಂದಿ ಕಣದಲ್ಲಿದ್ದಾರೆ.

ಪುರುಷರ ವಿಭಾಗದ ಎಲ್ಲ ಮೂರೂ ಪಂದ್ಯಗಳು ‘ಡ್ರಾ’ ಆಗಿದ್ದು, ಟೂರ್ನಿಯ ನಿಯಮಗಳ ಪ್ರಕಾರ ‘ಆರ್ಮ್‌ಗೆಡನ್’ ಗೇಮ್ ಮೂಲಕ ಫಲಿತಾಂಶ ನಿರ್ಧರಿಸಲಾಯಿತು.

Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) – 122050, India; **Website:** www.honda2wheelersindia.com; **Customer Care:** customercare@honda2wheelersindia.com

Honda Exclusive Authorised Dealerships: **Ananda Honda - BOMMANAHALLI:** 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; **Anekal Honda - ANEKAL:** 080-27830234, 9880417779; **City Honda - ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397, 080-43333330; **Haiku Honda - DOMLUR:** 49656565, 9342432156; **INDIRANAGAR:** 9342432157; **Dhruvdesh Honda - MEKHRI CIRCLE:** 40500700, 9343968413; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; **Planet Honda - RAJAJINAGAR:** 08068898888, 9980927735; **PEENYA:** 08068898888, 9980927730; **SUNKADAKATTE:** 08068898888, 9980927728; **BASAWESHWAR NAGAR:** 08068898888, 9980927726; **Raja Honda - KORAMANGALA:** 08067329000,9035310055; **Prime Honda - VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; **Silicon Honda - RV ROAD:** 9844502222, 9844726973; **BANSHANKARI:** 9844502444, 8722279009; **R.R. NAGAR:** 9964388333, 9071175200; **MONOTYPE:** 7353744400, **JAYANAGAR:** 8722801626; **Saphire Honda - JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; **VFM Honda - KR PURAM:** 9071858885, 9071858881; **HENNUR ROAD:** 9108989817, 9108989818; **Tansi Honda - HOODI:** 7259030091, 9741410101; **MARTHAHALLI:** 7259030100, 7259030093; **VARTHUR RD:** 8105597877, 9686573013; **GUNJUR:** 9606450642, 9606450643; **Turbo Honda - DODDABALLAPURA:** 7022620885; **NELAMANAGALA:** 080-27722333, 7022008894; **Wings Honda - HOSKOTE:** 7676907272; **MALUR:** 7676155600; **TC PALYA:** 9590815959; **Sri Kausthub Honda - KOLAR:** 9900018515, 9900018516;; **KGF:** 9900092115; **MULBAGAL:** 9008941044; **SRINIVASPUR:** 8495956515; **BANGARPET** - 9980607661; **Namma Honda - CHIKKABALLAPUR:** 9606060610, 9611996114; **CHINTAMANI:** 9606060620, 9611996115; **BAGEPALLI:** 9611596112, 9611596110; **Shankar Honda - GOWRIBIDANUR:** 9900007422/33; **SIDLAGHATTA:** 9611596113; **Century Honda - TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; **Shantinath Honda - TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; **Honey Honda - PAVAGADA:** 9535941215; **Annapoorna Honda - MADHUGIRI:** 9886627429; **Vignesh Honda - TIPTUR:** 9886711161; **TURUVEKERE:** 9448214014; **Sri Srinivasa Honda - CHIKKANAYAKANAHALLI:** 8722522221; **Prestige Honda - RAMNAGARA:** 9606490030, 9606036040; **KANAKAPURA:** 9606036053, 9606036054; **CHANNAPATNA:** 9606490034, 9035717953; **ART Honda - BIDADI:** 9945966771, 9164871007; **Springs Honda - KENGERI:** 9513771114; **Nideesh Honda - DEVANAHALLI:** 9108871999, 9686608579; **VIJAYAPURA:** 9108871999, 7899870207.

For Bulk/Institutional enquiries, please write us at: institutionalsales@honda2wheelersindia.com